ಮಾನ್ಯ ಸಭಾಧ್ಯಕ್ಷರೇ, ತಮಗೆ ಗೊತ್ತಿದೆ, ಹೊದಸಲ ಇದೇ ವಿಷಯದಲ್ಲಿ ನಾನು ಮಾತನಾಡತಕ್ಕ ಸಂದರ್ಭದಲ್ಲಿ ಸ್ಟೈಫೆಂಡರಿ ಸ್ಕೀಮ್‌ನಲ್ಲಿ ಅಡ್ವೋಕೇಟ್‌ಗಳಿಗೆ ಬೆನಿಫಿಟ್ ಮಾಡಿಕೊಡಿ ಎಂದು ತಮ್ಮ ಮುಖಾಂತರ ಕೇಳಿದ್ದಕ್ಕೆ. ನೂರಕ್ಕೆ ೪೫ ಜನಕ್ಕಾದರೂ ಮಹಿಳೆಯರಿಗೆ ಆರ್ಟಿಕಲ್ ೧೫(೩)ರ ಪ್ರಕಾರವಾಗಿ ಅವಕಾಶಮಾಡಿಕೊಡಿ ಎಂದು ಕೇಳಿದ್ದಕ್ಕೆ ಮಾನ್ಯ ಮುಖ್ಯಮಂತ್ರಿಗಳು ತತ್‌ಕ್ಷಣ ಒಪ್ಪಿಕೊಂಡು ಮಾಡಿಸೋಣವೆಂದು ಹೇಳಿದರು. ಮಹಿಳಾ ವಕೀಲರು ಮುಂದಕ್ಕೆ ಬರಬೇಕೆಂದು ಹೇಳಿ ನಾವು ಕೇಳಿಕೊಂಡಿದ್ದಕ್ಕೆ ಪರಿಣಾಮ ಏನು ಆಯಿತೆಂದರೆ ನೂರು ಜನರಲ್ಲಿ ಎಷ್ಟು ಜನ ಮಹಿಳೆಯರಿಗೆ ಇದನ್ನು ಕೊಟ್ಟಿದ್ದಾರೆ ಎಂದರೆ, ಕೇವಲ ಐದು ಜನರಿಗೆ ಮಾತ್ರ ಮಹಿಳಾ ವಕೀಲರಿಗೆ ಕೊಟ್ಟು ಉಳಿದುದೆಲ್ಲವನ್ನೂ ಪುರುಷ ವಕೀಲರಿಗೆ ಕೊಟ್ಟ ಪ್ರಮೇಯವಾದರೂ ಏನು ? ನಾನು ಯಾರಿಗಾಗಿ ಈ ಒಂದು ಆದೇಶವನ್ನು ತರಲು ಪ್ರಯತ್ನಪಟ್ಟೆನೋ ಅದರ ಪರಿಣಾಮ ಪ್ರಯೋಜನ ಮಾತ್ರ ಬೇರೆಯವರಿಗೆ ದೊರೆಯಬೇಕಾದರೆ ನಾವು ಕೇಳಿದ್ದೇ ತಪ್ಪೇನೋ ಇನ್ನು ಮುಂದೆ ಸರ್ಕಾರದಲ್ಲಿ ಏನನ್ನೂ ಕೇಳಿದ್ದೇ ಆದರೆ, ಮತ್ತೊಬ್ಬರಿಗೆ ಅನುಕೂಲವಾಗುತ್ತದೆಯೆಂದು ತಿಳಿದುಕೊಳ್ಳಬೇಕಾಗುತ್ತದೆ. ಇನ್ನು, ಈಗೇನು ಕಮಿಟಿ ಮಾಡಿದ್ದಾರೆ. ಅದರಲ್ಲಿ ನಿಜವಾಗಿಯೂ ನಿಮಗೆ ಹೆಣ್ಣುಮಕ್ಕಳನ್ನು ಮುಂದಕ್ಕೆ ತರಬೇಕೆಂದಿದ್ದರೆ ಆ ಕಮಿಟಿಯಲ್ಲಿ ಒಬ್ಬ ಮಹಿಳಾ ವಕೀಲರನ್ನಾದರೂ ಹಾಕಬಹುದಾಗಿತ್ತು. ಅಥವಾ ಬಾರ್‌ಕೌನ್ಸಿಲ್‌ನಲ್ಲಿರುವ ಯಾರಾದರೂ ವರಿಷ್ಠರನ್ನು ಹಾಕಬಹುದಾಗಿತ್ತು ಆದರೆ ಅಧಿಕಾರವರ್ಗದವರನ್ನು ಹಾಕಿದಾಗ ಅವರು ಸರಿಯಾಗಿ ಕರ್ತವ್ಯ ಪಾಲನೆಮಾಡದೆ ಉದ್ದೇಶವನ್ನು ವಿಫಲಗೊಳಿಸಿ ತಮಗೆ ಬೇಕಾದವರಿಗೆ ಕೊಟ್ಟಿದ್ದಾರೆ. ಇದರ ಬಗ್ಗೆ ಆಮೂಲಾಗ್ರವಾಗಿ ಪರಿಶೀಲನೆ ಮಾಡುವ ಆಶ್ವಾಸನೆ ಕೊಡಬೇಕೆಂದು ನಾನು ಕೇಳುತ್ತೇನೆ. ನಿಮ್ಮ ಲೀಗಲ್ ಏಡ್ ಬೋರ್ಡ್ ಏನು ಕೆಲಸ ಮಾಡುತ್ತಿದೆ, ಅದರ ವತಿಯಿಂದ ವಕೀಲರನ್ನು ನೇಮಕ ಮಾಡಿಕೊಳ್ಳುತ್ತೀರೆಂದು ತಿಳಿದು ಬಂದಿದೆ. ಈ ನೇಮಕಗಳನ್ನು ಮಾಡುವ ಸಂದರ್ಭದಲ್ಲಿ ಹೆಣ್ಣು ಮಕ್ಕಳಿಗೆ ಸಂಬಂಧಿಸಿದಂತೆ ಸೋಷಿಯಲ್ ಲೆಜಿಸ್ಲೇಶನ್, ಅಡಾಪ್‌ಶನ್, ಮೇಂಟೆನೆನ್ಸ್, ಲ್ಯಾಂಡ್ ಎಕ್ವಿಜಿಷನ್ ಮತ್ತು ವಿಧವೆಯರಿಗೆ ಸಂಬಂಧಪಟ್ಟ ಹಾಗೂ ಮಹಿಳೆಯರ ಕೇಸುಗಳನ್ನು ಮಹಿಳೆಯರೇ ನಡೆಸಿಕೊಡಲು ಲೀಗಲ್ ಬೋರ್ಡ್‌ನ್ನು ಮಾಡಿ, ಅವರಿಗೆ ಆಗಿರತಕ್ಕಂಥ ಅನ್ಯಾಯಗಳನ್ನು ಸರಿಪಡಿಸಿ ಅನುಕೂಲ ಮಾಡಿಕೊಡುತ್ತೀರೆಂದು ನಂಬಿದ್ದೇನೆ. ಇದು ನಿಮ್ಮ ಕೈಯಲ್ಲಿದೆ. ನಾನು ಹೆಚ್ಚಿಗೆ ಮಾತನಾಡುವುದಿಲ್ಲ. ಇನ್ನು ಕೇವಲ ಐದು ನಿಮಿಷ ಕಾಲ ಮಾತನಾಡಿ ನನ್ನ ಮಾತನ್ನು ಮುಗಿಸುತ್ತೇನೆ. ಆದರೆ ಕೆಲವು ಮಾತುಗಳನ್ನು ಹೇಳಬೇಕಾಗಿರುವುದರಿಂದ ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಇನ್ನು, ವಿದೇಶಗಳಲ್ಲಿ ಒಂದು ಪ್ರೋಗ್ರಾಂ ಇದೆ. ಅದರ ಹೆಸರು ಆಫೀಸ್ ಸ್ಕಿಲ್ಡ್ ಟ್ರೈನಿಂಗ್ ಪ್ರೋಗ್ರಾಂ ಎಂದು ಹೇಳುತ್ತಾರೆ. ಕುರುಡರು, ಕಿವುಡರು ಯಾರು ಇದ್ದಾರೆ. ಅಂಥವರನ್ನು ಲೀಗಲ್ ಡಿಪಾರ್ಟ್‌ಮೆಂಟಿನಲ್ಲಿ ಮತ್ತು ವಕೀಲರ ಡಿಪಾರ್ಟ್‌ಮೆಂಟ್‌ನಲ್ಲಿ ಆಫೀಸರ್‌ಗಳನ್ನಾಗಿ ಮಾಡಬೇಕಾಗಿದ್ದರೆ, ಈ ಲೀಗಲ್ ಟರ್ಮಿನಾಲಜಿ ಪ್ರೋಗ್ರಾಂ ಏನಿದೆ, ಅದರಲ್ಲಿ

ಅನ್‌ಎಂಪ್ಲಾಯ್ಡ್ ಸ್ಟೂಡೆಂಟ್ಸ್ ಮೆಂಬರ್ಸ್ ಯಾರು ಇದ್ದಾರೆ, ಅಂಥವರ ಲೀಗಲ್ ಟರ್ಮ್ಸ್‌ನಲ್ಲಿ ಏನು ಅವರ ಸಮಸ್ಯೆಗಳು ಇವೆ ಅವನ್ನು ಬರೆದುಕೊಂಡಿದ್ದು ಇಂತಹ ಕಿವುಡರು, ಕುರುಡರಾದ ವಿದ್ಯಾರ್ಥಿಗಳನ್ನು ಪರಿಣಿತರನ್ನಾಗಿ ಮಾಡಿ ಲೀಗಲ್ ಡಿಪಾರ್ಟ್‌ಮೆಂಟಿನಲ್ಲಿ ಹಾಕಿಕೊಳ್ಳುತ್ತಾರೆ. ಇದನ್ನು ವಿದೇಶಗಳಲ್ಲಿ ದೊಡ್ಡ ಯೋಜನೆಗಳನ್ನು ಹಾಕಿಕೊಂಡು ಮಾಡುತ್ತಿದ್ದಾರೆ. ಅದಕ್ಕಾಗಿ ನಾನು ಕೂಡ ಕೇಳುತ್ತಿದ್ದೇನೆ, ಇಂತಹ ಕಾರ್ಯಕ್ರಮವನ್ನು ನಾವು ಕೂಡ ಹಾಕಿಕೊಂಡು ನಮ್ಮಲ್ಲಿರತಕ್ಕಂಥ ನಿರುದ್ಯೋಗಿ ಯುವಕರು ಯಾರು ಇದ್ದಾರೆ. ಯಾರು ಬೇರೆ ಕಡೆ ಕೆಲಸಕ್ಕೆ ಹೋಗುವುದಿಲ್ಲವೋ ಅಂತಹವರನ್ನು ಗುರುತಿಸಿ ಅವರಿಗೆ ಅನುಕೂಲವನ್ನು ಮಾಡಿಕೊಡಲು ಈ ಪ್ರೋಗ್ರಾಂ ಅನ್ನು ಹಾಕಿಕೊಳ್ಳಬಹುದು.

ಇನ್ನು, ಈ ಕ್ಲೈಂಟ್ ಅಡ್ವೋಕೆಸಿ ಪ್ರೋಗ್ರಾಂ ಏನು ಇದೆ ಇದು ತಮಗೆ ಆಶ್ಚರ್ಯ ಆಗಬಹುದು. ಆದರೂ ವಕೀಲರ ಹತ್ತಿರ ಕಕ್ಷಿದಾರರು ಯಾರ್ಯಾರು ಬರುತ್ತಾರೆ ; ಯಾವ ವಕೀಲರ ಹತ್ತಿರ ಹೋಗಬೇಕು, ಎಷ್ಟು ಖರ್ಚು ಬರುತ್ತದೆ, ಯಾವ ಯಾವ ಕೋರ್ಟಿಗೆ ಹೋದರೆ ಅದರಿಂದ ಪ್ರಯೋಜನವಾಗುತ್ತದೆ ಎಂದು ಸಲಹೆ ಕೊಡುವುದನ್ನು ಈ ಪ್ರೋಗ್ರಾಂ ಹೆಸರಿನಲ್ಲಿ ತಂದಿದ್ದಾರೆ. ಇವತ್ತು ವಿದೇಶಗಳಲ್ಲಿ ಒಂದು ಸಿಸ್ಟಮ್ ತಂದಿದ್ದಾರೆ. ಪ್ರತಿಯೊಂದು ಬಡಾವಣೆಯಲ್ಲಿ ಆಫೀಸರುಗಳು ಹಾಗೂ ಲೀಗಲೀ ಟ್ರೈನ್ಡ್ ಪೀಪಲ್ ಯಾರು ಇದ್ದಾರೆ, ಅವರ ಬಳಿಗೆ ಬಡಜನರು ನೇರವಾಗಿ ಹೋಗಿ ಕಾನೂನು ಸಲಹೆಗಳನ್ನು ಕೇಳುವ ಅವಕಾಶ ಮಾಡಿಕೊಟ್ಟಿದ್ದಾರೆ ಆದ್ದರಿಂದ ತಮ್ಮಲ್ಲಿ ನಾನು ಕೇಳಿಕೊಳ್ಳುವುದೇನೆಂದರೆ ಈ ಕ್ಲೈಂಟ್ ಅಡ್ವೋಕೆಸಿ ಪ್ರೋಗ್ರಾಂ ಅನ್ನು ಇಂದು ಎಲ್ಲಾ ದೇಶಗಳಲ್ಲೂ ಜಾರಿಗೆ ತಂದಿರುವಾಗ ಇದನ್ನು ನಮ್ಮ ದೇಶದಲ್ಲಿ ನಾವು ಕೂಡ ಜಾರಿಗೆ ತಂದು ಜನಗಳಿಗೆ ಅನುಕೂಲ ಮಾಡಿಕೊಡುವ ದಿಸೆಯಲ್ಲಿ ಯೋಚನೆ ಮಾಡಬೇಕೆಂದು ಈ ಸಂದರ್ಭದಲ್ಲಿ ಕೇಳಿಕೊಳ್ಳುತ್ತೇನೆ. ಮಾನ್ಯ ಅಧ್ಯಕ್ಷರೇ, ತಮಗೆ ಗೊತ್ತಿದೆ, ಗವರ್ನಮೆಂಟ್ ಪ್ಲೀಡರುಗಳಿಗೆ ಇವತ್ತಿನ ದಿವಸ ೨೦೦ ರೂಪಾಯಿಗಳ ಸಂಬಳವನ್ನು ಕೊಡುತ್ತಿದ್ದಾರೆ ಏಪಿಪಿ ಗಳಿಗೆ ೧೦೦ ರೂಪಾಯಿಗಳು ಪಬ್ಲಿಕ್ ಪ್ರಾಸಿಕ್ಯೂಟರುಗಳಿಗೆ ೨೦೦ ರೂಪಾಯಿಗಳನ್ನು ಕೊಡುತ್ತಿದ್ದಾರೆ. ಈ ಹಣದಲ್ಲಿ ಯಾರಾದರೂ ಜೀವನ ನಡೆಸುವುದಕ್ಕೆ ಸಾಧ್ಯ ಇದೆಯೋ ? ವಕೀಲರು ಹೈಕೋರ್ಟ್‌ನಲ್ಲಾಗಲೀ, ಸುಪ್ರೀಂ ಕೋರ್ಟ್‌ನಲ್ಲಾಗಲಿ ವಕೀಲರು ವಕೀಲರೇ ; ಹೈಕೋರ್ಟ್‌ನಲ್ಲಿ ವಕೀಲರಿಗೆ ೭೦೦ ರೂಪಾಯಿಗಳನ್ನು ಕೊಡುತ್ತಾರೆ. ಸುಪ್ರೀಂ ಕೋರ್ಟಿನಲ್ಲಿ ೧೮೦೦ ರೂಪಾಯಿಗಳನ್ನು ಕೊಡುತ್ತಾರೆ. ಆದರೆ ಕೆಳಗಿನ ಕೋರ್ಟಿನಲ್ಲಿ ವಕೀಲರಿಗೆ ಕೇವಲ ಒಂದು ನೂರು ರೂಪಾಯಿಗಳನ್ನು ಕೊಡುತ್ತಾರೆ ಎಂದರೆ ಅರ್ಥ ಇಲ್ಲ ಇದು ಬೇಧಭಾವ ಆಗುತ್ತದೆ, ಕೋರ್ಟ್ ಡಿಸ್ಕ್ರಿಮಿನೇಶನ್ ಆಗುತ್ತದೆ. ಕೆಳಗಿನ ಕೋರ್ಟುಗಳು ಫೌಂಡೇಶನ್ ಇದ್ದ ಹಾಗೆ. ಅಲ್ಲಿಯ ವಕೀಲರನ್ನು ಸರಿಯಾಗಿ ನೋಡಿಕೊಂಡರೆ ಕೇಸ್‌ಗಳು ಕೂಡ ಸುಭದ್ರವಾಗಿ ನಿಲ್ಲುವುದಕ್ಕೆ ಅವಕಾಶವಾಗುತ್ತದೆ. ನಮ್ಮಲ್ಲಿ ಎಪಿಪಿ, ಪಿಪಿ ಗಳಿಗೆ ಕಡಿಮೆ ಸಂಬಳ ಇಟ್ಟಿದ್ದಾರೆ. ಅವರಿಗೂ ಕೂಡ ಸಮಾನವಾದ ವೇತನ ಕೊಡುವುದಕ್ಕೆ ಕ್ರಮ ತೆಗೆದುಕೊಳ್ಳಬೇಕೆಂದು ನಾನು ಒತ್ತಾಯಪಡಿಸುತ್ತೇನೆ.

ಇನ್ನೊಂದು ವಿಷಯವನ್ನು ಹೇಳಬೇಕೆಂದರೆ. ನೋಟರೀಸ್ ವಿಷಯವಾಗಿ ಮಾನ್ಯ ಲಕ್ಷ್ಮೀ ಸಾಗರ್‌ರವರು ನಮ್ಮಲ್ಲಿ ಕೇವಲ ೨೭ ಜನರು ಇದ್ದಾರೆ ಎಂದು ಹೇಳಿದರು. ನಾನು ಹೇಳುವುದು ಇಷ್ಟೇ; ಮದರಾಸಿನಲ್ಲಿ ಪ್ರತಿಯೊಬ್ಬ ವಕೀಲರಿಗೂ ಕೂಡ ಅಫಿಡವಿಟ್ಸ್ ಸ್ವೇರ್ ಮಾಡುವುದಕ್ಕೆ ಅವಕಾಶ ಇದೆ. ಅಲ್ಲಿ ನೋಟರೀಸ್ ಬೇಕಾಗಿಲ್ಲ. ಸಾರ್ವಜನಿಕರ ಅನಾನುಕೂಲತೆಗಳನ್ನು ತಪ್ಪಿಸುವ ದೃಷ್ಟಿಯಿಂದ ಪ್ರತಿಯೊಬ್ಬ ವಕೀಲರಿಗೆ ಕೂಡ ಅಥರೈಸ್ ಮಾಡಿದ್ದಾರೆ. ಅಲ್ಲಿ ವಕೀಲರುಗಳೇ ಅಫಿಡವಿಟ್ ಮಾಡಬಹುದೆಂದು ಇರುವಾಗ, ಕರ್ನಾಟಕದಲ್ಲೂ ಕೂಡ ಸಹಸ್ರಾರು ವಕೀಲರು ಇರುವಾಗ ಅವರಿಗೆ ಈ ಈ ಅಧಿಕಾರವನ್ನು ಕೊಟ್ಟರೆ ಜನರು ಪರದಾಡುವುದನ್ನು, ಮತ್ತು ಇದಕ್ಕಾಗಿ ಅಲೆಯುವುದನ್ನು ತಪ್ಪಿಸಿದ ಹಾಗೆ ಆಗುತ್ತದೆ ಎಂದು ಹೇಳುತ್ತೇನೆ. ಈ ಬಗ್ಗೆ ಒಂದು ಮಾತು ಹೇಳುವುದಾದರೆ, ಈ ಲಾ ಡಿಪಾರ್ಟ್‌ಮೆಂಟ್, ಲೀಗಲ್ ಡಿಪಾರ್ಟ್‌ಮೆಂಟ್‌ನಲ್ಲಿ ಲಾ ಸೆಕ್ರೆಟರಿಯನ್ನು ಈಗ ಜ್ಯುಡಿಷಿಯಲ್ ಡಿಪಾರ್ಟ್‌ಮೆಂಟ್‌ಗೆ ಲೆಂಟ್ ಮಾಡಿ ತೆಗೆದುಕೊಳ್ಳುತ್ತಾರೆ ಇದರಿಂದ ಪ್ರಯೋಜನ ಅಷ್ಟಾಗಿ ಆಗುವುದಿಲ್ಲ. ನಿಮ್ಮ ಲಾ ಡಿಪಾರ್ಟ್‌ಮೆಂಟ್ ಸುಭದ್ರವಾಗಿ, ಸರಿಯಾಗಿ ನಡೆಯಬೇಕೆಂದರೆ ಜ್ಯುಡಿಷಿಯಲ್‌ನಲ್ಲೇ ಇರತಕ್ಕ ನಿಮ್ಮದೇ ಆದ ಡಿಪಾರ್ಟ್‌ಮೆಂಟನ್ನು ಎಸ್ಟಾಬ್ಲಿಷ್ ಮಾಡುವುದು ಒಳ್ಳೆಯದು ಎಂದು ಈ ಸಂದರ್ಭದಲ್ಲಿ ನಾನು ಹೇಳುತ್ತೇನೆ. ಇಷ್ಟು ಹೇಳಿದ ಮೇಲೆ ಕೊನೆಯದಾಗಿ ಸುಪ್ರೀಂ ಕೋರ್ಟ್ ಬಗ್ಗೆ ಒಂದು ಮಾತನ್ನು ಹೇಳಬೇಕಾಗುತ್ತದೆ. ದಕ್ಷಿಣ ಭಾರತದಲ್ಲಿ ಒಂದು ಸುಪ್ರೀಂ ಕೋರ್ಟ್‌ನ್ನು ತೆರೆಯಲು

ಬೇಕೆಂದು ಕೇಂದ್ರ ಸರ್ಕಾರದಲ್ಲಿ ಈ ವಿಷಯದಲ್ಲಿ ಜಿಜ್ಞಾಸೆ ಏನು ನಡೆಯುತ್ತಿದೆ, ಈ ದಿಸೆಯಲ್ಲಿ ಆಂಧ್ರ ಪ್ರದೇಶ ಸರ್ಕಾರದವರು ಈಗಾಗಲೇ ದೊಡ್ಡದಾದ ಸುಂದರವಾದ ಬಿಲ್ಡಿಂಗ್‌ನ್ನು ಸುಪ್ರೀಂ ಕೋರ್ಟ್‌ಗಾಗಿ ತೋರಿಸಿಕೊಟ್ಟಿದ್ದಾರೆ. ಮದ್ರಾಸ್‌ನವರು ಕೂಡ ಒಂದು ಬಿಲ್ಡಿಂಗ್‌ನ್ನು ತೋರಿಸಿದ್ದಾರೆ. ನಾನು ಕೂಡ ತಮ್ಮಲ್ಲಿ ಕೇಳುತ್ತಿದ್ದೇನೆ, ಕರ್ನಾಟಕದ ವತಿಯಿಂದ ಯಾವ ಬಿಲ್ಡಿಂಗ್‌ನ್ನು ಸುಪ್ರಿಂ ಕೋರ್ಟ್‌ಗಾಗಿ ಕೊಡುತ್ತೀರಿ ? ಸೆಂಟ್ರಲ್ ಕಾಲೇಜನ್ನು ಸುಪ್ರೀಂ ಕೋರ್ಟಿಗೆ ಕೊಡುತ್ತೀರೆಂದು ಹೇಳದ್ದು ನಿಜವೇ ಅಲ್ಲವೇ ದಯವಿಟ್ಟು ತಿಳಿಸಿ. ಯಾವ ಬಿಲ್ಡಿಂಗ್‌ನ್ನು ಕೊಟ್ಟು ದಕ್ಷಿಣ ಭಾರತದ ಜನರಿಗೆ ಅನುಕೂಲ ಮಾಡಿಕೊಡುತ್ತೀರಿ ಎಂದು ತಿಳಿಸಿ ಎಂದು ಕೇಳಿಕೊಂಡು ಇಷ್ಟು ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ಮಾನ್ಯ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸು ತ್ತೇನೆ.

ಶ್ರೀ ಹೆಚ್. ಗಂಗಾಧರನ್ (ಕೃಷ್ಣರಾಜಾ) —ಸನ್ಮಾನ್ಯ ಅಧ್ಯಕ್ಷರೇ, ಈ ಪಶು ಸಂಗೋಪನಾ ಇಲಾಖೆಯಲ್ಲಿ ಸುಮಾರು ೨೩.೬೫ ಕೋಟಿ ರೂಪಾಯಿಗಳನ್ನು ಖರ್ಚು ಮಾಡತಕ್ಕಂಥ ಸಂದರ್ಭದಲ್ಲಿ ಈ ಇಲಾಖೆ ನಾಲ್ಕು ಕಾಲಿನ ಪ್ರಾಣಿಗಳನ್ನು ರಕ್ಷಣೆ ಮಾಡಬೇಕು, ಅದರ ಜೊತೆಗೆ ಎರಡು ಕಾಲಿನ ಪ್ರಾಣಿಗಳನ್ನು ರಕ್ಷಣೆ ಮಾಡುವುದಕ್ಕೆ ಏನು ಹಣ ಖರ್ಚು ಮಾಡುತ್ತಿದ್ದೀರಿ ಅದೇ ಪ್ರಕಾರವಾಗಿ ಈ ಪ್ರಾಣಿಗಳನ್ನೂ ರಕ್ಷಣೆ ಮಾಡಬೇಕಾದುದು ಸರ್ಕಾರದ ಆದ್ಯ ಕರ್ತವ್ಯವಾಗಿದೆ. ನಾನು ಏತಕ್ಕೆ ಈ ಮಾತನ್ನು ಹೇಳುತ್ತಿದ್ದೇನೆ ಎಂದರೆ.........

ಶ್ರೀ ಬಿ. ಭಾಸ್ಕರ ಶೆಟ್ಟಿ.—ಎರಡು ಕಾಲಿನ ಪ್ರಾಣಿಯೆಂದರೆ ಕೋಳಿಯೋ?

ಶ್ರೀ ಹೆಚ್. ಗಂಗಾಧರನ್.—೨೩.೬೫ ಕೋಟಿ ರೂಪಾಯಿಯೊಳಗೆ ಈ ಎರಡು ಕಾಲಿನ ಪ್ರಾಣಿ ಎಂದರೆ ಅಧಿಕಾರಶಾಹಿ, ಇದಕ್ಕೆ ಸುಮಾರು ಒಂಬತ್ತೂವರೆ ಕೋಟಿ ರೂಪಾಯಿಗಳನ್ನು ಖರ್ಚು ಮಾಡುತ್ತಿದ್ದೀರಿ, ಆದರೆ ದನಕರುಗಳಿಗೆ ಮೇವು ಕೊಡುವುದಕ್ಕೆ ಕೇವಲ ಒಂದು ಕೋಟಿ ಮಾತ್ರ ಇದೆ, ನಮ್ಮ ರಾಜ್ಯದಲ್ಲಿ ಒಂದು ಕೋಟಿ ದನಕರುಗಳಿವೆ ೩೭ ಲಕ್ಷ ಎಮ್ಮೆಗಳಿವೆ, ೨.೧೮ ಕೋಟಿ ಕುರಿ, ಮೇಕೆ, ಕತ್ತೆ, ಕುದುರೆ ಒಂಟೆ, ಹಂದಿಗಳಿವೆ. ೯೬ ಲಕ್ಷ ಕೋಳಿಗಳು ಇವೆ. ಈ ಒಟ್ಟು ನಾಲ್ಕೂವರೆ ಕೋಟಿ ಪ್ರಾಣಿಗಳು ಏನಿವೆ ಇವುಗಳೇ ಗ್ರಾಮಾಂತರ ಜೀವನವನ್ನು ಅಭ್ಯುದಯಗೊಳಿಸುವಂಥಾದ್ದು. ಇದರ ಕಡೆಗೆ ಎಷ್ಟರಮಟ್ಟಿಗೆ ಗಮನ ಕೊಟ್ಟಿದ್ದಾರೆ ಎಂದು ಯೋಚನೆ ಮಾಡಿದಾಗ ವರ್ಷೇ ವರ್ಷೇ ದನಕರುಗಳ ಸಂಖ್ಯೆ ಇಳಿಯುತ್ತಿದೆ. ಕೋಳಿ ಕುರಿಗಳ ಸಂಖ್ಯೆ ಇಳಿಯುತ್ತಿದೆ, ಆಡಿನ ಸಂಖ್ಯೆ ಇಳಿಯುತ್ತಿದೆ. ನಿಮ್ಮ ಇಲಾಖೆಗೆ ದನಕರುಗಳನ್ನು ಚೆನ್ನಾಗಿ ಪೋಷಿಸಿ. ದನ ಮೇಯಿಸಿರಿ ಎಂದು ನಿಮಗೆ ಅಧಿಕಾರ ಕೊಟ್ಟರೆ ಒಂದನ್ನಂತೂ ಸಮೃದ್ಧಿಯಾಗಿ ಮಾಡಿದ್ದೀರಿ. ಅದೇನೆಂದರೆ ೧೯೭೭ನೇ ಇಸವಿಯಲ್ಲಿ ೪೨.೨೮ ಲಕ್ಷ ಕತ್ತೆಗಳು ಇದ್ದದ್ದು ೮೧ನೇ ವರ್ಷದಲ್ಲಿ ೫೦.೭೭ ಲಕ್ಷದಷ್ಟು ಕತ್ತೆಗಳು ಇವೆ. ದನಕಾಯಿರಿ ಎಂದರೆ ಕತ್ತೆ ಮೇಯಿಸಿದ್ದೀರಿ. ಒಂದು ಮಾತನ್ನು ನಾನು ಬಹಳ ದುಃಖದಿಂದ ಹೇಳಬೇಕಾಗುತ್ತದೆ. ಏನೆಂದರೆ ನಾಲ್ಕೂವರೆ ಕೋಟಿ ಇರತಕ್ಕಂಥ ಪ್ರಾಣಿಗಳಿಗೆ, ಆರ್ಥಿಕ ಅಭಿವೃದ್ಧಿಗೆ ಸಾಧನೆಯಾದಂತಹ ಈ ಪ್ರಾಣಿಗಳ ಸಂರಕ್ಷಣೆ ಬಗ್ಗೆ ಸಾಕಷ್ಟು ನಿಗಾ ಕೊಟ್ಟಿಲ್ಲ ಎನ್ನುವಂತಾದ್ದನ್ನು ತಮ್ಮ ಆಯವ್ಯಯದ ಕೆಲವು ಅಂಶಗಳಿಂದ ತಮ್ಮ ಗಮನಕ್ಕೆ ತರಲು ಇಚ್ಛೆ ಪಡುತ್ತೇನೆ. ಇದರಲ್ಲಿ ಏನು ನಾಲ್ಕೂವರೆ ಕೋಟಿ ಜಾನುವಾರುಗಳು ಇವೆ, ಅವುಗಳ ಸಂರಕ್ಷಣೆಗಾಗಿ ಕೇವಲ ೧೨೯೯ ಆಸ್ಪತ್ರೆಗಳನ್ನು ಇಟ್ಟಿದ್ದೀರಿ. ಎಡ್ಮಿನಿಸ್ಟ್ರೇಟಿವ್‌ಗೆ ೨೩.೬೫ ಕೋಟಿ ಇಟ್ಟಿದ್ದೀರಿ. ಇಡೀ ದೇಶದ ೮೫ ಪರ್ಸೆಂಟ್ ಜನರ ಜೀವನದ ಭವಿತವ್ಯಕ್ಕೆ ಆಧಾರವಾಗಿರತಕ್ಕಂಥ ಇವುಗಳಿಗೆ ೧೨೯೯ ಆಸ್ಪತ್ರೆಗಳನ್ನು ಇಟ್ಟಿದ್ದೀರಿ. ಆದರೆ ೩ ಕೋಟಿ ೭೦ ಲಕ್ಷ ಜನಸಂಖ್ಯೆ ಇರತಕ್ಕಂಥ ಜನರ ಜೀವ ಸಂರಕ್ಷಣೆಗೆ ೧೦೦ ಕೋಟಿ ಖರ್ಚು ಮಾಡತಕ್ಕಂತಾದ್ದು ಇದ್ದು, ಈ ನಾಲ್ಕೂವರೆ ಕೋಟಿ ಪ್ರಾಣಿಗಳಿಗೆ ಕೊಟ್ಟಿದ್ದು ಏನು?

೧೧–೩೦ ಎ.ಎಂ.

ಇದಕ್ಕೆ ಇಟ್ಟಿರತಕ್ಕಂಥಾದ್ದು ೧೨೯೯. ಹಳ್ಳಿಯಲ್ಲಿ ಕೆಲವು ಸಲಹೆ ಕೊಡತಕ್ಕಂಥ ವೆಟರ್ನರಿ ಸಲಹೆಗಾರರು ಸೇರಿದರೆ ೧೨೯೯ ಯೂನಿಟ್ಸ್ ಇವೆ. ಆದರೆ ಕೇವಲ ೩ ಕೋಟಿ ೭೦ ಲಕ್ಷ ಜನಸಂಖ್ಯೆ ಇರತಕ್ಕಂಥ ಜನರ ಆರೋಗ್ಯ ಸಂರಕ್ಷಣೆಗೆ ೧೦೦ ಕೋಟಿ ರೂಪಾಯಿಗಳನ್ನು ಖರ್ಚು ಮಾಡುತ್ತಿದ್ದೀರಿ. ಎರಡು ಸಾವಿರ ಆಸ್ಪತ್ರೆಗಳನ್ನು ಇಟ್ಟಿದ್ದೀರಿ. ಈ ದಿಕ್ಕಿನಲ್ಲಿ ಆಲೋಚನೆ ಮಾಡಿದಾಗ, ಸಮೃದ್ಧಿ ಹೇಗೆ ಆಗುತ್ತದೆ, ದೇಶದ ಸಂಪತ್ತನ್ನು ಹೇಗೆ ಬಳಸುತ್ತಿದ್ದೇವೆ ಎನ್ನುವುದನ್ನು ತೀವ್ರವಾಗಿ ಸರ್ಕಾರ ಗಮನಿಸಬೇಕಾಗಿದೆ. ಇವತ್ತು ಈ ಪರಿಸ್ಥಿತಿಯ ಕಡೆಗೆ ತಾವು ಗಮನ ಕೊಡದೇಹೋದರೆ ಈ ದೇಶದಲ್ಲಿ

ಬೆಳೆಯುತಕ್ಕಂಥ ಗೋವುಗಳು, ದನಕರುಗಳು ಇವತ್ತು ಕೇರಳಕ್ಕೆ ಕಡಿಯುವುದಕ್ಕೆ ಮಾಂಸಾಹಾರಕ್ಕೆ ಹೋಗುತ್ತಾ ಇವೆ. ಅಲ್ಲದೆ ಮೈಸೂರಿನಂಥ ನಗರಗಳಲ್ಲಿ ದನಗಳನ್ನು ಕದ್ದು ಕಡಿದು ಮಾಂಸವನ್ನು ಲಾರಿಗಳಲ್ಲಿ ರಾತ್ರೋರಾತ್ರಿ ಸಾಗಿಸಿ, ಈ ದೇಶದ ಸಂಪತ್ತನ್ನು ವಿನಾಶ ಮಾಡತಕ್ಕಂಥ ಪರಿಸ್ಥಿತಿ ಇದೆ. ಆದರೆ ಸರ್ಕಾರ ಕಣ್ಣು ಮುಚ್ಚಿ ಕುಳಿತಿದೆ. ಇದು ರಾಜ್ಯದ ಪ್ರಮುಖ ನಗರಗಳಲ್ಲಿ ನಡೆಯುವುದನ್ನು ನಾನು ಸರ್ಕಾರದ ಗಮನಕ್ಕೆ ತರುತ್ತಿದ್ದೇನೆ. ಆಮೇಲೆ ಗೋವುಗಳ ಸಂರಕ್ಷಣೆಗೆ ಸೂಕ್ತ ಕಾನೂನಿದೆ. ಅದರ ಕಡೆ ಗಮನ ಕೊಟ್ಟಿಲ್ಲ. ನಾನು ಇದರ ಬಗ್ಗೆ ಹೆಚ್ಚಿಗೆ ಹೇಳುವುದಿಲ್ಲ. ಶ್ರೀಮಾನ್ ರಾಮೇಗೌಡರು ಮಾತನಾಡುವವರಿದ್ದಾರೆ.

ಇನ್ನು ಡೈರಿ ವಿಷಯದಲ್ಲಿ ಒಂದು ಮಾತು ಹೇಳಬೇಕು ಅಂದರೆ, ಇವತ್ತು ಡೈರಿಯಿಂದ ಹಾಲನ್ನು ಸರಬರಾಜು ಮಾಡುತ್ತಾ ಇದ್ದೀರಿ. ಹಾಲಿನ ಬೆಲೆ ಹೆಚ್ಚಿದೆ. ಆದರೆ ಹೆಚ್ಚಾದ ಬೆಲೆಗೆ ಅನುಗುಣವಾಗಿ ಹಾಲನ್ನು ಉತ್ಪಾದನೆ ಮಾಡತಕ್ಕಂಥ ರೈತನಿಗೆ ಸರಿಯಾದ ಬೆಲೆ ಸಿಗುತ್ತಾ ಇಲ್ಲ, ದನ ಸಾಕುವುದಕ್ಕೆ ಮೇವು ಸಿಗುತ್ತಾ ಇಲ್ಲ. ಕಡಿಮೆ ಬೆಲೆಗೆ ಸಿಗುತ್ತಾ ಇಲ್ಲ. ಕ್ವಾಲಿಟಿ ಇದರೊಳಗೆ ಇಲ್ಲ. ಇದಕ್ಕೆ ಕಾರಣವೇನೆಂದರೆ ಡೈರಿ ಅಧಿಕಾರಶಾಹಿಗಳ ಆಡಳಿತದಲ್ಲಿದೆ. ಇದೂ ಕೂಡ ಕೋಆಪರೇಟಿವ್ ಬೇಸಿಸ್ ಮೇಲೆ ಸಹಕಾರಿ ಸಕ್ಕರೆ ಕಾರ್ಖಾನೆಗಳು ನಡೆದ ಹಾಗೆ ನಡೆದಿದ್ದರೆ, ಸಾರ್ವಜನಿಕರ ಹಿಡಿತದಲ್ಲಿ ಆಡಳಿತ ಇದ್ದಿದ್ದರೆ ಈ ಒಂದು ಪರಿಸ್ಥಿತಿ ಆಗುತ್ತಾ ಇರಲಿಲ್ಲ. ನೀವು ಜನಗಳಿಂದ ಕೊಂಡುಕೊಳ್ಳತಕ್ಕ ಹಾಲು ಮತ್ತು ಪರಿಷ್ಕರಣ ಮಾಡಿರತಕ್ಕ ಹಾಲು ಇದು ಎಷ್ಟು ವ್ಯತ್ಯಾಸ ಆಗುತ್ತದೆ, ಎಷ್ಟು ಪರ್ಸೆಂಟೇಜ್ ಲಾಭ ಬರುತ್ತಾ ಇದೆ ಎನ್ನುವುದರ ಬಗ್ಗೆ ನಮ್ಮ ಮುಂದೆ ಸರ್ಕಾರ ಮಾಹಿತಿಯನ್ನು ಇಟ್ಟಿಲ್ಲ. ನೀವು ಬೆರೆಸತಕ್ಕ ಪುಡಿಯಿಂದ ಎಷ್ಟು ಹಾಲು ಅಧಿಕವಾಗುತ್ತದೆ, ಇದರ ಜೊತೆಗೆ ಡೈರಿಗಳಲ್ಲಿ ಎಲ್ಲೆಲ್ಲಿ ಹಾಲು ದುರ್ವಿನಿಯೋಗವಾಗುತ್ತದೆ, ಎಲ್ಲೆಲ್ಲಿ ತುಪ್ಪ ದುರ್ವಿನಿಯೋಗವಾಗುತ್ತಾ ಇದೆ—ಇದರ ಬಗ್ಗೆ ಸರಿಯಾದಂಥ ಒಂದು ಮಾಹಿತಿಯನ್ನು, ಸರಿಯಾದಂಥ ಲೆಕ್ಕವನ್ನು ಮಾಡತಕ್ಕ, ಪರಿಶೀಲನೆ ಮಾಡತಕ್ಕ ಒಂದು ವ್ಯವಸ್ಥೆ ಈ ದೇಶದಲ್ಲಿ ಇಲ್ಲ ಎನ್ನುವುದನ್ನು ತಮ್ಮ ಗಮನಕ್ಕೆ ನಾನು ತರುತ್ತಿದ್ದೇನೆ. ಹಾಲು ನಮಗೆ ಅಧಿಕ ಬೆಲೆ ಆಗಬೇಕಾದರೆ, ರೈತನಿಗೆ ಕಡಿಮೆ ಬೆಲೆ ಸಿಗಬೇಕಾದರೆ ಏನು ಕಾರಣ ಎಂದು ವಿಚಾರ ಮಾಡಿದರೆ ಇಲ್ಲಿರತಕ್ಕ ಅವ್ಯವಹಾರಗಳೇ ಕಾರಣ. ಈ ಅವ್ಯವಹಾರಗಳಲ್ಲಿ ಮೂಲತಃ ಏನಿದೆ ಯೆಂದರೆ ಯಾವ ಅಧಿಕಾರಿಗಳನ್ನು ನೀವು ನೇಮಿಸುತ್ತಿದ್ದೀರಿ ಈ ಅಧಿಕಾರಿಗಳಿಗೆ ಕೊಡತಕ್ಕಂಥ ಲೆಕ್ಕ ವಿಲ್ಲದಂಥ ವೇತನ. ಇತರ ಇಲಾಖೆಗಳಲ್ಲಿರತಕ್ಕ ವೇತನಕ್ಕೂ ಇಲ್ಲಿರತಕ್ಕ ವೇತನಕ್ಕೂ ಅಜಗಜಾಂತರ ವ್ಯತ್ಯಾಸ ಇರುವುದನ್ನು ನಾವು ನೋಡುತ್ತಾ ಇದ್ದೇವೆ ಈ ಒಂದು ಇಲಾಖೆಯಲ್ಲಿ ಕೆಲಸಮಾಡುವುದಕ್ಕೆ ೧೦೦ ಜನ ಬೇಕಾದರೆ ಅಲ್ಲಿ ಯಾವ ಒಂದು ನಿಯಮವಿಲ್ಲದೆ ೧೫೦–೨೦೦ ಜನರನ್ನೂ ಕೂಡ ನೇಮಿಸು ತ್ತಿದ್ದೀರಿ. ಇದು ಸರಿಯೇ? ಇದರ ಬಗ್ಗೆ ಏನಾದರೂ ತೀವ್ರವಾಗಿ ಯೋಚನೆ ಮಾಡುತ್ತಿದ್ದೀರಾ? ಇದನ್ನೂ ಕೂಡ ನೀವು ಗಮನಿಸಬೇಕು. ಅದೂ ಅಲ್ಲದೆ ನೌಕರರನ್ನು ನೇಮಿಸತಕ್ಕ ಕಾಲದಲ್ಲಿ ಆಗುವಂಥ ಅವ್ಯವಹಾರಗಳು ಏನಿದೆ ಅಂದರೆ ಹತ್ತಾರು ವರ್ಷಗಳಿಂದ ಕೆಲಸಮಾಡುತ್ತಿದ್ದವರಿಗೆ ದಿನಗೂಲಿ ೬ ರೂಪಾಯಿಗಳನ್ನು ಕೊಡುತ್ತಾ ಇದ್ದೀರಿ. ಇವತ್ತು ಎಲ್ಲಾ ಡೈರಿಗಳಿಂದ ಅಧಿಕಾರವನ್ನು ಕೇಂದ್ರಕ್ಕೆ ತೆಗೆದುಕೊಂಡು, ಕೇಂದ್ರದಿಂದ ನಿಮಗೆ ಇಚ್ಛೆ ಬಂದವರನ್ನು ೧೦ ರೂಪಾಯಿಗಳ ಕೂಲಿಗೆ ನೇಮಿಸಿ ಕೊಂಡು ಅವರ ತಲೆ ಮೇಲೆ ಕೂಡಿಸುತ್ತಾ ಇದ್ದೀರಿ. ಅವನು ೧೦ ವರ್ಷಗಳಿಂದ ಅದೇ ಕೆಲಸ ಮಾಡುತ್ತಾ ಇದ್ದಾನೆ, ಅವನಿಗೆ ೬ ರೂಪಾಯಿಗಳನ್ನು ಕೊಟ್ಟು ಇವನಿಗೆ ೧೦ ರೂಪಾಯಿಗಳನ್ನು ಕೊಟ್ಟು ನೇಮಿಸತಕ್ಕ ದುರಾಡಳಿತ ನಡೆಯುತ್ತಾ ಇದೆ. ಆದುದರಿಂದ ಅವರ ಬಗ್ಗೆ ತೀವ್ರ ಗಮನ ಕೊಡುವುದು ಅವಶ್ಯಕ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಇನ್ನು ಒಂದೆರಡು ಮಾತುಗಳನ್ನು ನ್ಯಾಯಾಲಯದ ಬಗ್ಗೆ ಹೇಳಿ, ಮುಖ್ಯವಾದಂಥ ಶಾಸಕಾಂಗಕ್ಕೆ ಬರು ತ್ತೇನೆ ತಮ್ಮ ಗಮನಕ್ಕೆ ಒಂದು ವಿಷಯವನ್ನು ತರಬೇಕು ಅಂದರೆ, ನಮ್ಮ ನ್ಯಾಯಾಂಗ ಇಲಾಖೆಯ ಬಗ್ಗೆ ತಾವು ಕೆಲವು ಪ್ರಶಂಸನೀಯವಾದ ಮಾತುಗಳನ್ನು ಹೇಳಿದ್ದೀರಿ. ೧೦ ವರ್ಷ ಆಗಿದೆ. ಈ ವರ್ಷದವರೆಗೆ ೫೨ ಶಾಸನಗಳನ್ನು ಪಾಸ್ ಮಾಡಿದಿರಿ ೨೩ ಆರ್ಡಿನೆನ್ಸ್ ಪಾಸ್ ಮಾಡಿದಿರಿ. ೧೦ ವರ್ಷಗಳಿಂದ ಒಂದಾದರೂ ಪರಿಪೂರ್ಣವಾದಂಥ ಶಾಸನ ಜಾರಿಗೆ ಬರಲಿಲ್ಲ. ಸಬ್‌ಸ್ಟ್ಯಾನ್‌ಷಿಯಲ್ ಲಾ ಜಾರಿಗೆ ಬರಲಿಲ್ಲ. ಯಾವುದು ನೋಡಿದರೂ ಅಮೆಂಡ್‌ಮೆಂಟ್, ತಿದ್ದುಪಡಿ—ಇಷ್ಟು ಬಂದಿ ದೆಯೇ ಹೊರತಾಗಿ ಸಮಗ್ರವಾದಂಥ ಒಂದು ಶಾಸನ ತರುವುದಕ್ಕೆ ೧೦ ವರ್ಷಗಳಿಂದ ಶಾಸನ ಸಭೆ ವಿಫಲವಾಗಿದೆಯೆಂದರೆ, ಶಾಸನಸಭೆ ಕೆಲಸ ಮಾಡುತ್ತಿದೆಯೇ ಎನ್ನತಕ್ಕಂಥ ಪ್ರಶ್ನೆಯನ್ನು ಕೇಳಬೇಕಾ

ಗಿದೆ. ಜನರ ಸಮಸ್ಯೆಗಳನ್ನು ಬಗೆಹರಿಸತಕ್ಕಂಥ ಅನೇಕ ಪ್ರಸಂಗಗಳು ಇದ್ದಾಗಲೂ ಕೂಡ, there is not even a single substantive law enacted in this House for the last ten years. ಇದರ ಜೊತೆಗೆ ನೀವು ಮಾಡಿರತಕ್ಕ ಶಾಸನಗಳು ಸಾರ್ವಜನಿಕರ ಗಮನಕ್ಕೆ ಬರುವ ರೀತಿಯಲ್ಲಿ ಯಾವ ವ್ಯವಹಾರ ಮಾಡಿಲ್ಲ. ಸಾರ್ವಜನಿಕರಿಗೆ ಯಾವ ಶಾಸನಗಳು ಬಂದಿವೆ, ಎಷ್ಟರಮಟ್ಟಿಗೆ ಪರಿಣಾಮಕಾರಿಯಾಗಿ ಇವೆ ಎನ್ನತಕ್ಕ ವಿವರಣೆ ಸಿಕ್ಕಿಲ್ಲ ಎಂದು ಈ ಸಂದರ್ಭದಲ್ಲಿ ಹೇಳು ವುದಕ್ಕೆ ಇಷ್ಟಪಡುತ್ತೇನೆ. ಕೋರ್ಟ್‌ಗಳಲ್ಲಿ ಅಧಿಕಾರಿಗಳು ಕಡಿಮೆ ಇದ್ದಾರೆ ಎಂದು ಹೇಳಿದ್ದಾರೆ. ಅಲ್ಲಿ ಸ್ಟಾಂಪ್ ಮತ್ತು ಕಾಪಿಯಿಂಗ್ ಷೀಟ್ಸ್ ಸಿಗುತ್ತಾ ಇಲ್ಲ ಹಾಗೂ ಹೈಕೋರ್ಟ್‌ವರೆಗೆ ಎಲ್ಲಾ ಕೋರ್ಟ್‌ಗಳಲ್ಲೂ ಕನ್ನಡ ಕಡ್ಡಾಯ ಆಗಬೇಕು. ಮತ್ತೆ ಕೋರ್ಟ್‌ಗಳಲ್ಲಿ ನ್ಯಾಯಗಳು ವಿಳಂಬವಾಗು ತ್ತಿದೆ ಎಂದು ಕೊಟ್ಟಿದ್ದೀರಲ್ಲ ಇದಕ್ಕೆ ಅಧಿಕಾರಿಗಳು ಇಲ್ಲದೇ ಇರುವುದು ಒಂದು ಕಾರಣ, ನ್ಯಾಯ ಮೂರ್ತಿಗಳು ಇಲ್ಲದೇ ಇರುವುದು ಒಂದು ಕಾರಣ. ಎರಡನೆಯದು, ನಮ್ಮಲ್ಲಿರತಕ್ಕ ಇಲಾಖೆಗಳು ಸರಿಯಾಗಿ ಪ್ರಾಮಾಣಿಕವಾಗಿ ಕೆಲಸಮಾಡದೇ ಇರುವುದು ಒಂದು ಕಾರಣ. ಪಹಣಿ ಬರೆಯುವಾಗ ತನಗೆ ಇಚ್ಛೆಬಂದಂಥವರಿಗೆ ಪಹಣಿ ಬರೆಯುತಕ್ಕಂಥ ಅಧಿಕಾರಿಗಳಿದ್ದಾರೆ. ಖಾತೆ ಇಡತಕ್ಕಂಥವರು ಇಚ್ಛಾನುಕೂಲವಾಗಿ, ಒತ್ತಡಕ್ಕನುಗುಣವಾಗಿ ಖಾತೆ ಇಡತಕ್ಕವರಿದ್ದಾರೆ. ಇವು ಕಾರಣಗಳು, ಇವೆಯೇ ಹೊರತು ನ್ಯಾಯಾಲಯಗಳು ಸರಿಯಾಗಿ ಕೆಲಸಮಾಡಿಲ್ಲ ಎಂಬ ಒಂದು ಬಿರುದು ನಮ್ಮ ತಲೆ ಯಲ್ಲಿ ಇರುವುದು ಸರಿಯಲ್ಲ, ಇತರ ಇಲಾಖೆಗಳಲ್ಲಿ ರಿಕಾರ್ಡ್ಸ್ ಸರಿಯಾಗಿದ್ದರೆ ಪಕ್ವವಾಗಿದ್ದರೆ ನ್ಯಾಯಾ ಲಯಗಳಲ್ಲಿ ಇಷ್ಟು ತಡವಾಗುತ್ತಾ ಇರಲಿಲ್ಲ. ಮತ್ತೆ ಹಳೇ ಪ್ರೊಸೀಜರನ್ನೇ ಇಟ್ಟಿದ್ದೀರಿ. ಈಗ ನೀವು ಇಲ್ಲಿ ತುರಾತುರಿಯಾಗಿ ಕೆಲವು ಶಾಸನಗಳನ್ನು ಮಾಡಿ ಇದನ್ನು ಜಾರಿಗೆ ತರಬೇಕು ಎಂದು ಇಚ್ಛೆಪಡು ತ್ತಿದ್ದೀರಲ್ಲ, ಹಳೇ ಕಂದಾಚಾರದ ಮೆಕಾಲೆ ಕಾಲದಲ್ಲಿ ಎವಿಡೆನ್ಸ್ ಆಕ್ಟ್ ಬಂದ ಕಾಲದಲ್ಲಿ ಏನು ಪ್ರೊಸೀಜರ್ ಇತ್ತು ಅದನ್ನೇ ಇವತ್ತು ನಾವು ಮಾಡುತ್ತಾ ಇದ್ದೇವೆ ಹೊಸ ಶಾಸನ ಮಾಡಿದಾಗ ಹೊಸ ಪ್ರೊಸೀಜರನ್ನೇ ಅಳವಡಿಸುವುದಾದರೆ ಅತಿ ಶೀಘ್ರದಲ್ಲಿ ಸಮಸ್ಯೆಗಳನ್ನು ಬಗೆಹರಿಸುವುದಕ್ಕೆ ಸಾಧ್ಯ ವಾಗುತ್ತದೆ, ಇದರ ಕಡೆ ತಾವು ಗಮನಕೊಡಬೇಕು. ಸೆಷನ್ಸ್ ಕೋರ್ಟ್ ಬಗ್ಗೆ ಒಂದು ಮಾತನ್ನು ಕಳಕಳಿಯಿಂದ ಹೇಳುವುದಾದರೆ, ಈ ಎವಿಡೆನ್ಸ್ ಬರೆದುಕೊಳ್ಳುತ್ತಾರಲ್ಲ ಅಲ್ಲಿ ಕನ್ನಡವನ್ನು ಇಂಗ್ಲೀಷಿಗೆ ಟ್ರಾನ್ಸ್‌ಲೇಷನ್ ಮಾಡುವುದರಲ್ಲಿ ಮತ್ತು ಇಂಗ್ಲೀಷನ್ನು ಕನ್ನಡಕ್ಕೆ ಟ್ರಾನ್ಸ್‌ಲೇಷನ್ ಮಾಡುವುದರಲ್ಲಿ ಅನೇಕ ಆಭಾಸಗಳಾಗಿ ಅನ್ಯಾಯವಾಗತಕ್ಕಂಥ ಪರಿಸ್ಥಿತಿ ಇದೆ. ಅದಕ್ಕೆ ಬದಲಾಗಿ ಆರ್ಗ್ಯುಮೆಂಟ್ ಮತ್ತು ಎವಿಡೆನ್ಸ್‌ನ್ನು ಟೇಪ್ ರಿಕಾರ್ಡ್ ಮೂಲಕ ರಿಕಾರ್ಡ್ ಮಾಡತಕ್ಕ ವ್ಯವಸ್ಥೆ ಮಾಡಿದರೆ ಬಹಳಷ್ಟು ತೊಂದರೆಗಳನ್ನು ಕಡಿಮೆ ಮಾಡಬಹುದು ಎನ್ನತಕ್ಕ ವಿಚಾರವನ್ನು ಈ ಸಂದರ್ಭದಲ್ಲಿ ನ್ಯಾಯಾಲಯದ ಬಗ್ಗೆ ಹೇಳುತ್ತಿದ್ದೇನೆ.

ಇನ್ನು ಶಾಸಕಾಂಗದ ಬಗ್ಗೆ ಒಂದು ಮಾತು ಹೇಳಬೇಕಾಗುತ್ತದೆ. ನಮ್ಮಲ್ಲಿ ಒಂದು ಗಾದೆ ಇದೆ, 'ಕೋಣನ ಮುಂದೆ ಕಿನ್ನರಿ ಬಾರಿಸಿದ ಹಾಗೆ' ಎಂದು. ಪಾಪ ಅದು ಕೇಳುವುದೂ ಇಲ್ಲ, ಹೇಳುವುದೂ ಇಲ್ಲ. ಈ ಪರಿಸ್ಥಿತಿ ದೇಶದಲ್ಲಿದೆ. ಎಷ್ಟು ವರ್ಷಗಳಿಂದ ಹೇಳಿದರೂ ಹೀಗೇನೇ. ಮಾನ್ಯ ಅಧ್ಯಕ್ಷರೆ, ನಮ್ಮಲ್ಲಿ ಜನತಾ ಪಕ್ಷ ಇದ್ದಾಗ ಮಾನ್ಯ ಮಿತ್ರರೊಬ್ಬರು ಶ್ರೀಮಾನ್ ರಾಮ ಕೃಷ್ಣ ಎಂಬ ವರು ಒಬ್ಬರು ಸದಸ್ಯರಿದ್ದರು, ಅವರು ೧೪ನೇ ಮೇ ೧೯೭೮ರಲ್ಲಿ ಒಂದು ಮಾತನ್ನು ಹೇಳಿದರು. ಕರ್ನಾಟಕ ವಿಧಾನ ಮಂಡಲದ ವರದಿಗಾರರ ೫ ಅಂಶಗಳ ಬೇಡಿಕೆಗಳನ್ನು ಸಭೆಯ ಮುಂದಿಟ್ಟಿದ್ದರು. ಅವು ಯಾವು ವೆಂದರೆ :

೧) ವರದಿಗಾರರ ಹಾಲಿ ಇರತಕ್ಕ ಬಡ್ತಿ ಪ್ರಮಾಣವನ್ನು ಶೇಕಡ ೨೫ ರಿಂದ ಶೇಕಡ ೫೦ಕ್ಕೆ ವಿಸ್ತರಿಸುವುದು.

೨) ಚರ್ಚಾ ಸಂಪಾದಕರ ಹುದ್ದೆಯನ್ನು ದ್ವಿಗುಣಗೊಳಿಸಿ ಅದಕ್ಕೆ ವರದಿಗಾರರಿಂದಲೇ ನೇರ ನೇಮಕಾತಿ ಮಾಡುವುದು.

೩) ಸಹಾಯಕ ಚರ್ಚಾ ಸಂಪಾದಕರ ಹುದ್ದೆಯನ್ನು ದ್ವಿಗುಣಗೊಳಿಸಿ ಸದರಿ ಹುದ್ದೆಗಳಿಗೆ ವರದಿ ಗಾರರಿಂದಲೇ ನೇರವಾಗಿ ನೇಮಿಸುವುದು.

೪) ಮೊದಲು ಇದ್ದ ಪದ್ಧತಿಯಂತೆ ಅಧ್ಯಕ್ಷರ ಮತ್ತು ಸಭಾಪತಿಯವರ ಆಪ್ತ ಕಾರ್ಯದರ್ಶಿಗಳ ಹುದ್ದೆಗಳಿಗೆ ನೇರವಾಗಿ ವರದಿಗಾರರಿಂದಲೇ ನೇಮಿಸುವುದು, ಹಾಗೂ

೫) ಸಬಾರ್ಡಿನೇಟ್ ಲೆಜಿಸ್ಲೇಷನ್ನಿನ ಅಧೀನ ಕಾರ್ಯದರ್ಶಿ ಹುದ್ದೆಯನ್ನು ಭರ್ತಿ ಮಾಡುವಾಗ ವರದಿಗಾರರಿಗೆ ಆದ್ಯತೆ ಕೊಡುವುದು.

ಈ ೫ ಅಂಶಗಳ ಬೇಡಿಕೆಯನ್ನು ಅವರು ಆವತ್ತು ಸಭೆಯ ಮುಂದಿಟ್ಟಿದ್ದರು.

ಶ್ರೀ ಎ. ಲಕ್ಷ್ಮೀಸಾಗರ್.—ಈಗ ಅವರು ಮರೆತು ಹೋಗಿದ್ದಾರೆ. ಅವರು ಅಲ್ಲಿಗೆ ಹೋದಮೇಲೆ ಅದೆಲ್ಲಾ ಸಂಪೂರ್ಣವಾಗಿ ಮಾಯವಾಗಿಹೋಗಿದೆ.—

ಶ್ರೀ ಹೆಚ್ ಗಂಗಾಧರನ್.—ಶ್ರೀಮಾನ್ ರಾಮಕೃಷ್ಣರವರು ಇಲ್ಲಿದ್ದರು. ಅದು ಆದಮೇಲೆ ಎಲ್ಲಿ ಹೋದರೋ ಗೊತ್ತೇ ಆಗಲಿಲ್ಲ ಸ್ವಾಮಿ, ಎಲ್ಲಿಗೆ ಹೊರಟು ಹೋದರು ಎಂದು ಪತ್ತೇನೇ ಆಗಲಿಲ್ಲ, ಆಮೇಲೆ ಶ್ರೀಮಾನ್ ರಾಮಕೃಷ್ಣ ಎನ್ನುವವರು ಇದೇ ಇಲಾಖೆಗೆ ಅಲ್ಲಿ ಮಂತ್ರಿಗಳಾದರು. ಅವರು ದಿನಾಂಕ ೧೪ನೇ ಜುಲೈ ೧೯೮೧ರಲ್ಲಿ ಹೀಗೆ ಹೇಳಿದರು.

"ಇನ್ನು ಎರಡನೆಯದಾಗಿ ನಮ್ಮ ವಿಧಾನ ಮಂಡಲದ ವರದಿಗಾರರಿಗೆ ಬಡ್ತಿ ಕೊಡುವುದಿಲ್ಲವೆಂದು ಮಾನ್ಯ ಸದಸ್ಯರು ಹೇಳಿದ್ದಾರೆ. ಅವರಿಗೆ ಈಗ Question of granting higher scale of pay (Class-II) ೭೫೦-೧೫೫೫ ರೂಪಾಯಿ ಕೊಡಬೇಕು ಎನ್ನತಕ್ಕ ವಿಚಾರ ಇವತ್ತು ಸರ್ಕಾರದ ಪರಿಶೀಲನೆಯಲ್ಲಿದೆ. ಇದನ್ನು ನಾನು ಮರೆತಿಲ್ಲ ಇದನ್ನು ಆದಷ್ಟು ಶೀಘ್ರವಾಗಿ ಹಣಕಾಸಿನ ಖಾತೆ ಜೊತೆ ಮಾತುಕತೆ ನಡೆಸಿ ಅವರಿಗೆ ಪ್ರಮೋಷನ್ ಕೊಡುತ್ತೇನೆ-ಎಂಬ ಘೋಷಣೆ ಮಾಡುತ್ತೇನೆ. ಮಾನ್ಯ ಸದಸ್ಯರೆಲ್ಲರೂ ನಾನು ಮಂಡಿಸಿದಂತಹ ಬೇಡಿಕೆಗಳಿಗೆ ಮಾತ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.''

ಮಾತುಕತೆ ನಡೆಯ ತ್ತಲೇ ಇದೆ ಘೋಷಣೆಯನ್ನು ಕಿವಿಯಲ್ಲಿ ಕೇಳುತ್ತಲೇ ಇದ್ದೇವೆ. ಶ್ರೀಮಾನ್ ರಾಮಕೃಷ್ಣರವರು ಮಂತ್ರಿಗಳಾದ ಮೇಲೆ ಇದೊಂದು ಸಣ್ಣ ವಿಷಯವನ್ನು ಮಾಡಲಿಲ್ಲವಲ್ಲ ಎಂದು ಬಹಳ ವಿಷಾದದಿಂದ, ದುಃಖದಿಂದ ಹೇಳುವುದಕ್ಕೆ ಇಷ್ಟಪಡುತ್ತಾ ಇದ್ದೇನೆ. ಇದರ ಮೇಲೆ ತೀವ್ರ ಕ್ರಮ ತೆಗೆದುಕೊಳ್ಳಬೇಕು ಎಂದು ಹೇಳುತ್ತಾ ಬಹುಶಃ ಉದಾರದಿಂದ ತಾವು ಈ ಕೆಲಸ ಮಾಡುತ್ತೀರಿ ಎಂದು ಭಾವಿಸಿಕೊಂಡು, ಈಗಲಾದರೂ ಕೂಡ ದೇವರು ಅವರಿಗೆ ಸದ್ಬುದ್ಧಿಯನ್ನು ಕೊಡಲಿ, ಏಕೆಂದರೆ ಅವಧಿ ಮುಗಿಯುತ್ತಾ ಇರುವಾಗಲಾದರೂ ಕೂಡ, ಹೋಗುವ ಕಾಲದಲ್ಲಿ ಕೆಲವರು ಒಳ್ಳೆಯದು ಮಾಡಿ ಹೋಗೋಣ ಎಂದು ಇರುತ್ತಾರೆ. ಆ ಒಂದು ಪ್ರಯತ್ನವನ್ನು ತಾವು ಮಾಡುತ್ತೀರಿ ಎಂದು ನಾನು ಇಚ್ಛೆಪಡುತ್ತಾ ಇದ್ದೇನೆ.

ಮಾನ್ಯ ಅಧ್ಯಕ್ಷರೇ, ಇವತ್ತು ನಾವು ಅನೇಕ ಸಮಸ್ಯೆಗಳ ಬಗ್ಗೆ ಚರ್ಚೆ ಮಾಡಬೇಕಾಗಿದೆ. ನಾವು ಇಲ್ಲಿ ಅನೇಕ ಸಮಸ್ಯೆಗಳ ಬಗ್ಗೆ ಚರ್ಚೆ ಮಾಡಿದರೆ ಅದಕ್ಕೆ ಮಾನ್ಯ ಮಂತ್ರಿಗಳವರು ಪರಿಶೀಲನೆ ಮಾಡುತ್ತೇನೆಂದು ಉತ್ತರ ಕೊಟ್ಟು ಬಿಡುತ್ತಾರೆ. ನಿನ್ನೆಯ ದಿವಸ ಮಾನ್ಯ ಸಾರಿಗೆ ಮಂತ್ರಿಗಳವರಿಗೆ ನಾವು ನಿಮ್ಮ ಬಸ್‌ಗಳು ಸರಿಯಾಗಿ ಓಡುತ್ತಿಲ್ಲ. ಬಸ್‌ಗಳಿಗೆ ಒಳ್ಳೆಯ ಟೈರ್ ಇರುವುದಿಲ್ಲ. ಇಂಜಿನ್ ಇರುವುದಿಲ್ಲ. ಹಾರನ್ ಇರುವುದಿಲ್ಲವೆಂದು ಹೇಳಿದರೆ ಅದಕ್ಕೆಲ್ಲಾ ಅವರು ಪರಿಶೀಲನೆ ಮಾಡುತ್ತೇವೆ, ಸರಿಪಡಿಸುತ್ತೇವೆಂದು ಹೇಳಿ ಈಗಾಗಲೇ ಆದೇಶ ಕೊಟ್ಟಿದ್ದೇವೆಂದು ಹೇಳಿದರು. ಈ ದೇಶವನ್ನೇ ನುಂಗುವಂಥಾ ಜನಕ್ಕೆ ಆದೇಶ ಕೊಟ್ಟರೆ ಅದನ್ನೇ ತಿನ್ನುತ್ತಾರೆ-ಏನೂ ಉಳಿಯುವುದಿಲ್ಲ. ಯಾವ ಮಾನ್ಯ ಸದಸ್ಯರೇ ಆಗಲೀ ಸಲಹೆಗಳನ್ನು ಕೊಟ್ಟಿದ್ದಾರೆ, ಸೂಚನೆಗಳನ್ನು ಕೊಟ್ಟಿದ್ದಾರೆ ಅದರ ಬಗ್ಗೆ ಏನು ಕ್ರಮ ಕೈಗೊಂಡಿದ್ದಾರೆ ಇಲ್ಲವೇ ಮುಂದಿನ ವರ್ಷದಲ್ಲಿ ಅದನ್ನು ಕಾರ್ಯಗತಗೊಳಿಸುತ್ತೇವೆ ಎಂದು ಹೇಳಿ ಅದನ್ನು ಕಾರ್ಯಗತಗೊಳಿಸಿದ್ದನ್ನು ಸಭೆಯ ಮುಂದಿಡತಕ್ಕ ವರದಿಯಲ್ಲಿ ಪ್ರಸ್ತಾಪ ಮಾಡಿ ಹೇಳಿಲ್ಲ. ಆ ಒಂದು ಕ್ರಮ ನಮ್ಮ ದೇಶದಲ್ಲಿ, ರಾಜ್ಯದಲ್ಲಿ ನಡೆದು ಬಂದಿಲ್ಲ. ಇದು ಬಹಳ ಮುಖ್ಯವಾಗಿ ಗಮನಿಸಬೇಕಾದ ಅಂಶ ಎನ್ನತಕ್ಕದ್ದನ್ನು ಹೇಳ ಬಯಸುತ್ತೇನೆ.

ಇನ್ನು ಕೈಗಾರಿಕೆಯ ಬಗ್ಗೆಯಾಗಲೀ, ವ್ಯವಸಾಯದ ಬಗ್ಗೆಯಾಗಲೀ ಮಾಹಿತಿಯನ್ನು ಒದಗಿಸತಕ್ಕಂಥ ಸೌಲಭ್ಯವಾಗಿಲ್ಲ. ಇನ್ನು ಕೇಂದ್ರದಲ್ಲಿ ನಡೆಯುವ ಸಂಸತ್ತಿನ ಚರ್ಚೆ ನಡವಳಿಕೆಗಳ ಪುಸ್ತಕಗಳು ನಮ್ಮಲ್ಲಿಗೆ ೩ ವರ್ಷಗಳಾದರೂ ಬಂದಿರುವುದಿಲ್ಲ. ಎಕಾನಮಿಕ್ ಸರ್ವೆ ಎನ್ನತಕ್ಕಂಥಾ ಅತ್ಯುತ್ತಮವಾದ ಲೇಟೆಸ್ಟ್ ಪುಸ್ತಕ ಸಹ ಬಂದಿರುವುದಿಲ್ಲ. ಇನ್ನು ನಮ್ಮ ರಾಜ್ಯದ ಅಭಿವೃದ್ಧಿ ಕಾರ್ಯಗಳಿಗೆ ಕೇಂದ್ರದಿಂದ ಬರತಕ್ಕಂಥ ಹಣವನ್ನು ಒದಗಿಸಿಕೊಡಲು ಶೀಘ್ರವಾಗಿ ಕ್ರಮ ಕೈಗೊಳ್ಳಲು ಅಲ್ಲಿ ನಮ್ಮವರೇ ಆದ

ಒಬ್ಬ ಲೈಸನ್ಸ್ ಆಫೀಸರ್ ಇರಬೇಕು. ಈ ಕೆಲಸವನ್ನು ಮಾಡುವುದು ಬಹಳ ಅಗತ್ಯವಾಗಿದೆ. ಇನ್ನು ಸಾರ್ವಜನಿಕರಿಗೆ ಸಂಬಂಧಪಟ್ಟ ವಿಷಯಗಳ ಬಗ್ಗೆ ನಿಮ್ಮಲ್ಲಿ ಬಹಳ ಮುಖ್ಯವಾದ ಒಂದು ಬದಲಾವಣೆಯನ್ನು ಮಾಡಿಕೊಳ್ಳಬೇಕಾಗಿದೆ. ಅದು ಏನೆಂದರೆ, ನಮ್ಮ ಊರಿಗೆ ಚರಂಡಿ ತೆಗೆದಿಲ್ಲ, ನಮ್ಮ ಊರಿನಲ್ಲಿ ಬೀದಿ ದೀಪ ಹಾಕಿಲ್ಲ, ಕೊಳಾಯಿ ಹಾಕಿಲ್ಲ ಎನ್ನತಕ್ಕದ್ದರ ಬಗ್ಗೆ ನಾವು ಇಲ್ಲಿ ಪ್ರಸ್ತಾಪ ಮಾಡುವುದಕ್ಕಿಂತ ಮಾನ್ಯ ಮಂತ್ರಿಗಳವರಿಗೆ ಪತ್ರ ಬರೆದರೆ ಒಂದು ವಾರದೊಳಗೇ ಉತ್ತರ ಕೊಡತಕ್ಕಂಥ ವ್ಯವಸ್ಥೆ ಮಾಡಬೇಕಾಗಿದೆ. ಇಲ್ಲದಿದ್ದರೆ ಅಂಥಾ ಸಮಸ್ಯೆಗಳನ್ನೆಲ್ಲಾ ನಾವು ಇಲ್ಲಿ ಚರ್ಚೆ ಮಾಡುವುದರಲ್ಲಿಯೇ ವೇಳೆಯೆಲ್ಲಾ ವ್ಯರ್ಥವಾಗಿ ಹೋಗುತ್ತದೆ ಇದನ್ನು ಮಾಡುವುದು ಬಹಳ ಅಗತ್ಯವಾಗಿರುವುದರಿಂದ ಇದನ್ನು ತಮ್ಮ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ. ಇನ್ನು ನಾವು ಈ ಸದನದಲ್ಲಿ ಅನೇಕ ವಿಷಯಗಳನ್ನು ಚರ್ಚೆ ಮಾಡುತ್ತಿರುತ್ತೇವೆ, ಅದೆಲ್ಲಾ ಟೇಪ್ ರಿಕಾರ್ಡ್ ಆಗುವುದು ಒಳ್ಳೆಯದು, ಇದನ್ನು ಪಂಜಾಬ್ ಸರ್ಕಾರದವರು ಮತ್ತು ಹರಿಯಾಣ ಸರ್ಕಾರದವರು ಮಾಡಿದ್ದಾರೆ. ನಮ್ಮಲ್ಲಿಯೂ ಆ ರೀತಿ ಮಾಡುವುದು ಒಳ್ಳೆಯದು, ಇದರಿಂದ ಅದನ್ನು ಬರೆದುಕೊಳ್ಳುವ ವರದಿಗಾರರಿಗೆ ಅನುಕೂಲವಾಗುತ್ತದೆ. ಇಲ್ಲದೇ ಹೋದರೆ ನಾವು ಹೇಳಿದಂಥ ಎಷ್ಟೋ ವಿಷಯಗಳು ಹಾರಿ ಹೋಗಿ ಬಿಟ್ಟಿರುತ್ತವೆ. ಆದುದರಿಂದ ನಮ್ಮಲ್ಲಿಯೂ ಸಹ ಟೇಪ್ ರೆಕಾರ್ಡ್ ಮಾಡುವ ವ್ಯವಸ್ಥೆ ಜಾರಿಗೆ ತರಬೇಕೆಂದು ಹೇಳಬಯಸುತ್ತೇನೆ.

ಇನ್ನು ಈ ಸದನದಲ್ಲಿ ನಡೆಯತಕ್ಕ ಕಾರ್ಯಕ್ರಮಗಳನ್ನು ಏತಕ್ಕೆ ರೇಡಿಯೋದಲ್ಲಿ ಲೈವ್ ರಿಲೇ ಮಾಡುವ ವ್ಯವಸ್ಥೆ ಮಾಡಬಾರದು? ಅದೇ ಕ್ರಿಕೆಟ್ ಆಟವನ್ನು ರಿಲೇ ಮಾಡುತ್ತಿದ್ದೀರಿ. ಇದರಿಂದ ಆಫೀಸ್‌ನಲ್ಲಿ ಕೆಲಸ ಮಾಡುವವರು ಸಹ ಕೆಲಸ ಮಾಡದೇ ರೇಡಿಯೋ ಕೇಳಿಕೊಂಡು ಕುಳಿತಿರುತ್ತಾರೆ ನಾವು ಈ ಸದನದಲ್ಲಿ ಬಹಳ ಪ್ರಾಮುಖ್ಯವಾದ ಸಮಸ್ಯೆಗಳನ್ನು ಕುರಿತು ಚರ್ಚೆ ಮಾಡುವಾಗ ಈ ಸದನದ ಕಾರ್ಯ ಕಲಾಪಗಳನ್ನು ರೇಡಿಯೋ ಮೂಲಕ ಏತಕ್ಕೆ ಲೈವ್ ರಿಲೇ ಮಾಡಬಾರದು ?

ಶ್ರೀ ಬಿ. ಮೈಕಲ್ ಫರ್ನಾಂಡೀಸ್.—ಇಲ್ಲಿ ಎಕ್ಸ್‌ಪಂಜ್ ಆದದ್ದನ್ನು ತೋರಿಸುವುದು ಹೇಗೆ?

ಶ್ರೀ ಎಚ್. ಗಂಗಾಧರನ್.—ಅದರಿಂದ ಅನೇಕ ವಿಚಾರಗಳು ಬರುತ್ತವೆ ಇಲ್ಲವೆಂದು ಅಲ್ಲ. ಅದರಿಂದ ನಮ್ಮ ಚರ್ಚೆಯ ಸ್ಟ್ಯಾಂಡರ್ಡ್ ಕೂಡ ಹೆಚ್ಚಾಗುತ್ತದೆ. ಮಾನ್ಯ ಅಧ್ಯಕ್ಷರೇ, ತಮಗೆ ಗೊತ್ತಿರುವ ಹಾಗೆ ಸಾರ್ವಜನಿಕ ಉಪಯುಕ್ತ ಇಲ್ಲದೇ ಇರತಕ್ಕಂಥ ವಿಷಯದ ಬಗ್ಗೆ ನಾವು ಹಲವಾರು ಗಂಟೆಗಳ ಕಾಲ ಮಾತನಾಡಿರುತ್ತೇವೆ. ಯಾವನಿಗೋ ಒಬ್ಬನಿಗೆ ಪೋಲೀಸ್‌ನವರು ಹೊಡೆದರು, ಅಲ್ಲಿ ಒಬ್ಬ ಸತ್ತ, ಇಲ್ಲಿ ಒಬ್ಬ ಸತ್ತ ಎಂದು ನಾವು ೩-೪ ಗಂಟೆಗಳ ಕಾಲ ಸಮಯವನ್ನು ವ್ಯರ್ಥ ಮಾಡುತ್ತೇವೆ. ಆದುದರಿಂದ ನಾವು ಇಲ್ಲಿ ಚರ್ಚೆ ಮಾಡತಕ್ಕ ವಿಷಯಗಳ ಬಗ್ಗೆ ನಮಗೆ ಮುಂಚಿತವಾಗಿ ಗೊತ್ತಿರಬೇಕು, ಆಗ ಅದರ ಬಗ್ಗೆ ಮಾನ್ಯ ಸದಸ್ಯರುಗಳು ಸಹ ಚೆನ್ನಾಗಿ ಓದಿಕೊಂಡು ಬಂದು ಮನದಟ್ಟಾಗುವ ಹಾಗೆ ಚರ್ಚೆ ಮಾಡಲು ಅನುಕೂಲವಾಗುತ್ತದೆ. ಮಾನ್ಯ ಅಧ್ಯಕ್ಷರೇ, ಅಮೇರಿಕಾದ ಅಧ್ಯಕ್ಷರ ಸಹೋದರರಿಗೆ ಸೆನೆಟ್‌ನಲ್ಲಿ ಒಂದು ವಿಷಯದ ಬಗ್ಗೆ ಮಾತನಾಡಲು ೩-೪ ಮೇಧಾವಿಗಳನ್ನು ಕೊಟ್ಟು ೩ ತಿಂಗಳ ಮುಂಚಿತವಾಗಿ ಅವಕಾಶ ಮಾಡಿಕೊಟ್ಟಿದ್ದರು. ಇದರ ಜೊತೆಗೆ ಅವರು ಸಿದ್ಧತೆ ಮಾಡಿಕೊಳ್ಳಲು ಪ್ರೈವೇಟ್ ಆಗಿ ಕೆಲವರನ್ನು ನೇಮಿಸಿಕೊಂಡು ಸಿದ್ಧತೆ ಮಾಡಿಕೊಂಡು ಅನಂತರ ಅವರು ಸೆನೆಟ್‌ನಲ್ಲಿ ಭಾಷಣ ಮಾಡಿದ್ದರು. ಆ ರೀತಿಯ ವ್ಯವಸ್ಥೆ ಇಲ್ಲಿದೆ ಆದುದರಿಂದ ಆ ರೀತಿಯಾಗಿ ನಮಗೂ ಸಹ ಒಂದು ತಿಂಗಳು ಮುಂಚಿತವಾಗಿ ತಿಳಿದಿದ್ದರೆ ನಾವು ಸಹ ವಿಷಯಗಳನ್ನು, ಮಾಹಿತಿಗಳನ್ನು ಸಂಗ್ರಹಿಸಿಕೊಂಡು ಚರ್ಚೆಯಲ್ಲಿ ಭಾಗವಹಿಸುವುದಕ್ಕೆ ಅನುಕೂಲವಾಗುತ್ತದೆ. ಅಂಥಾ ಪ್ರಾಮುಖ್ಯವಾದ ಚರ್ಚೆಗಳನ್ನು ಲೈವ್ ರಿಲೇ ಮಾಡುವುದರಿಂದ ಜನತೆಗೂ ಕತ್ತಲಿನಲ್ಲಿದ್ದವರಿಗೆ ಬೆಳಕನ್ನು ತೋರಿಸಿದ ಹಾಗಾಗುತ್ತದೆ. ಈ ದೃಷ್ಟಿಯಿಂದ ಇದನ್ನು ಮಾಡುವ ಬಗ್ಗೆ ಸರ್ಕಾರದವರು ಗಮನ ಹರಿಸಲಿ ಎಂದು ಸಲಹೆ ಮಾಡಬಯಸುತ್ತೇನೆ.

ಶ್ರೀ ಎಂ. ಸಿ. ನಾಣಯ್ಯ.—ಲೈವ್ ರಿಲೇ ಮಾಡುವುದನ್ನು ಒಪ್ಪಿಕೊಂಡರು ಎಂದು ಇಟ್ಟುಕೊಳ್ಳೋಣ. ಆಗ ಲೈವ್ ರಿಲೇಯಿಂದ ಸರ್ಕಾರವನ್ನು ಉರುಳಿಸತಕ್ಕಂಥ ಪ್ರಯತ್ನವಾದರೆ, ಆಗ ಏನು ಪರಿಣಾಮವಾಗುತ್ತದೆ ?

ಶ್ರೀ ಎಚ್. ಗಂಗಾಧರನ್.—ಲೈವ್ ರಿಲೇ ಮಾಡಲು ಅವರು ಒಪ್ಪಿಕೊಂಡರೆ, ಸರ್ಕಾರವನ್ನು ಉರುಳಿಸುವುದು ಅಥವಾ ಬಿಡುವುದನ್ನು ಜನತೆಗೆ ಬಿಡೋಣ

ಇನ್ನು ಪ್ರತಿಯೊಬ್ಬ ಶಾಸಕರಿಗೂ ಒಬ್ಬ ಗುಮಾಸ್ತ, ಒಬ್ಬ ಟೈಪಿಸ್ಟ್, ಒಬ್ಬ ಜವಾನನನ್ನು ಕೊಟ್ಟು ತಾಲ್ಲೂಕ್ ಆಫೀಸ್‌ಗಳಲ್ಲಿ ಒಂದು ರೂಮನ್ನು ಕೊಟ್ಟರೆ ಒಳ್ಳೆಯದು. ಇದರಿಂದ ಶಾಸಕರು ಸ್ಥಳೀಯ ನಾಗರೀಕರೊಂದಿಗೆ ವ್ಯವಹರಿಸಲು ಮತ್ತು ಸರ್ಕಾರದ ಕಾರ್ಯ ಕಲಾಪಗಳನ್ನು, ಮತ್ತು ಕಾರ್ಪೋರೇಷನ್ನಿನ ಕೆಲಸ ಕಾರ್ಯಗಳನ್ನು ನೋಡಿ ಅದು ಸರಿಯಾಗಿ ಮಾಡುತ್ತಿದೆಯೋ ಇಲ್ಲವೋ ಎಂಬುದನ್ನು ನೋಡಿ ಸರ್ಕಾರಕ್ಕೆ ಆಗಿಂದಾಗ್ಗೆ ಎಚ್ಚರಿಕೆ ನೀಡಲು ಅನುಕೂಲವಾಗುತ್ತದೆ. ಈ ಸೌಲಭ್ಯವಿಲ್ಲದೇ ಬಹಳ ಅನಾನುಕೂಲವಾಗಿರುವುದರಿಂದ ಇದು ಅತ್ಯಂತ ಅಗತ್ಯವಾಗಿ ಆಗಬೇಕಾಗಿರತಕ್ಕಂಥ ಕೆಲಸ ಇದರ ಕಡೆಗೆ ಸರ್ಕಾರದವರು ಲಕ್ಷ್ಯ ಕೊಟ್ಟು ಮಾಡುತ್ತಾರೆಂದು ತಿಳಿದು ನಾನು ಈ ಸಲಹೆಯನ್ನು ಮಾಡುತ್ತಿದ್ದೇನೆ.

ಇನ್ನು ಈ ಸದನದಲ್ಲಿ ನಡೆಯುತಕ್ಕ ಚರ್ಚೆಗಳು ಮತ್ತು ತೀರ್ಮಾನಗಳು ಮತ್ತು ಮಸೂದೆಗಳು ಸಾಮಾನ್ಯ ಜನರಿಗೆ ತಲುಪುತ್ತಿಲ್ಲ. ಇದನ್ನು ವರದಿ ಮಾಡತಕ್ಕ ವರದಿಗಾರರು ಬರೆದುಕೊಂಡು ಹೋದರೂ ಸಹ ಸ್ಥಳದ ಅಭಾವದಿಂದ ಅದನ್ನು ಎಡಿಟರ್‌ರವರು ಕಟ್ ಮಾಡಿಬಿಟ್ಟಿರುತ್ತಾರೆ. ಮತ್ತೆ ಕೆಲವು ಸಂದರ್ಭಗಳಲ್ಲಿ ಅದನ್ನು ಕಂಪೋಜ್ ಮಾಡುವಾಗ ಕೆಲವು ಲೈನ್‌ಗಳು ಹೋಗಿ ಬಿಟ್ಟಿರುತ್ತವೆ. ಕಾಂಪೋಜಿಂಗ್ ಆದಮೇಲೆ ಅಲೈನ್‌ಮೆಂಟ್ ಮಾಡುವಾಗ ಅವನು ಕೆಲವು ಅಕ್ಷರಗಳನ್ನೇ ಬಿಟ್ಟು ಬಿಟ್ಟಿರುತ್ತಾನೆ. ಅಂಥಾ ಸಂದರ್ಭಗಳಲ್ಲಿ ಅದು ಹಾಗೆಯೇ ಪ್ರಿಂಟ್ ಆಗಿ ಬಂದು ಎಷ್ಟೋ ಅನಾಹುತಗಳು ಆಗಿದ್ದು ಇದೆ. ಮತ್ತು ಅದು ಹಾಗೆ ಪ್ರಿಂಟ್ ಆಗುವುದರಿಂದ ಎಷ್ಟೋ ಅಭಾಸಕೂಡ ಆಗಿರುವುದು ಉಂಟು.

ಹಿಂದೆ ಶ್ರೀ ಗೋಪಾಲರಾವ್ ಬಗ್ಗೆ ತನಿಖೆ ನಡೆಯುತ್ತಿದ್ದಾಗ ಕೆಲವು ವಿಚಾರಗಳನ್ನು ಪತ್ರಿಕೆಗೆ ಪ್ರಕಟಣೆಗಾಗಿ ಕೊಟ್ಟರು. ಪತ್ರಿಕೆಯಲ್ಲಿ ಹಾಕುವಾಗ ಎರಡು ಸಾಲು ಜಾಸ್ತಿಯಾಯಿತೆಂದು ಕಿತ್ತು ಹಾಕಿದರು. ಅದರಿಂದ ಕೊನೆಗೆ ಅನಾಹುತವಾಗುವ ಪ್ರಸಂಗ ಉಂಟಾಯಿತು. ಆಮೇಲೆ ಅದನ್ನು ಹಿಂದಕ್ಕೆ ತೆಗೆದುಕೊಳ್ಳುವ ಪರಿಸ್ಥಿತಿ ಬಂತು. ಆದ್ದರಿಂದ ಈ ರೀತಿಯಾಗಿ ಸದಸ್ಯರುಗಳು ಕೊಟ್ಟ ಸಲಹೆಗಳು ಪತ್ರಿಕೆ ಮೂಲಕ ಸಾರ್ವಜನಿಕರನ್ನು ಮುಟ್ಟುವುದು ಕಠಿಣವಾದ ಕಾರಣ ರೇಡಿಯೋ ಮುಖಾಂತರ ಪ್ರಚಾರ ಮಾಡುವುದರಲ್ಲಿ ಕಷ್ಟನಷ್ಟವೇನು ಆಗುವುದಿಲ್ಲ.

ಶ್ರೀ ವೈ. ರಾಮಕೃಷ್ಣ.—ತಮ್ಮ ಅನುಭವದಲ್ಲಿ ಯಾವುದಾದರೂ ರಾಜ್ಯದಲ್ಲಿ ರಾಷ್ಟ್ರದಲ್ಲಿ ಇಂಥ ಪದ್ಧತಿ ಇದ್ದರೆ ದಯವಿಟ್ಟು ಹೇಳಿ, ನಾವು ಇಲ್ಲಿ ಅನುಸರಿಸೋಣ.

ಶ್ರೀ ಎ. ಲಕ್ಷ್ಮೀಸಾಗರ್.—ನಾವೇ ಮೊದಲಿಗೆ ಪ್ರಾರಂಭ ಮಾಡೋಣ, ಬೇರೆಯವರು ಮಾಡದಿದ್ದರೇನಂತೆ. ನಾವೇ ಇಲ್ಲಿ ಮೊದಲು ಮಾಡುವುದರಿಂದ ನಿಮಗೆ ಆಗತಕ್ಕ ಅನಾನುಕೂಲ ಆದರೂ ಏನು ? ನಾಳೆ ದಿವಸ ಶ್ರೀ ರಾಮಕೃಷ್ಣರವರು ಇಂಥದನ್ನು ಮಾಡಿದರು ಎಂದು ಚರಿತ್ರೆಯಲ್ಲಿ ಬರುತ್ತದೆ.

ಶ್ರೀ ಹೆಚ್. ಗಂಗಾಧರನ್.—ವಿದೇಶಗಳಲ್ಲಿ ಟಿ ವಿ. ಮೂಲಕ ಪ್ರಸಾರ ಮಾಡುವುದನ್ನು ಕೇಳಿದ್ದೇವೆ. ಅದನ್ನು ಯು.ಎನ್.ಓ ದವರು ರಿಲೇ ಮಾಡುವುದನ್ನು ಕೇಳಿದ್ದೇವೆ. ಇದನ್ನು ತಾವು ಗಮನಿಸಬೇಕು. ಎಲ್ಲಿಯೂ ಮಾಡಿಲ್ಲ, ನಾವು ಏತಕ್ಕೆ ಮಾಡೋಣವೆಂದು ಹೇಳುತ್ತೀರಿ, ಆದರೆ ಎಲ್ಲಿಯೂ ಮಾಡದೆ ಇರುವ ಅನಾಹತವನ್ನು ಏಕೆ ಮಾಡಿದ್ದೀರಿ ?

SRI M.C. NANAIAH.—In the House of Commons, it has been done, In America when the Clean-Air Act Bill was introduced, the discussion on the Bill was filmed and it was filmed here also.

ಶ್ರೀ ಪಿ. ರಾಮದೇವ್.—ಟಿ.ವಿ.ಯಲ್ಲಿ ಪ್ರಚಾರ ಮಾಡಿದರೆ ನೀವು ರಂಗುರಂಗಾಗಿ ಕಾಣುತ್ತೀರಿ.

ಶ್ರೀ ಹೆಚ್. ಗಂಗಾಧರನ್.—ಇದರಿಂದ ಪ್ರಮುಖವಾದ ಲಾಭ ಇದೆ. ಈ ಸದನದ ಚರ್ಚೆಯ ಗಾಂಭೀರ್ಯ ಕೂಡ ಹೆಚ್ಚುತ್ತದೆ. ಆಗ ಪ್ರಮುಖ ವಿಷಯಗಳ ಚರ್ಚೆಯಾಗುತ್ತದೆ ಮತ್ತು ಉತ್ತಮವಾದ ಸಲಹೆಗಳು ಬರುತ್ತದೆ. ಯಾರು ಒಳ್ಳೆಯ ಕೆಲಸ ಮಾಡುತ್ತಾರೆಂಬುದು ಮುಖ್ಯ. ಇದರಿಂದ ಜನರಿಗೆ ಕೂಡ ಸಾಕಷ್ಟು ಪ್ರಯೋಜನವಾಗುತ್ತದೆ. ಆದ್ದರಿಂದ, ಈ ಒಂದು ಕೆಲಸವನ್ನು ಅಗತ್ಯವಾಗಿ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಈ ಸದನದಲ್ಲಿ ನಡೆಯುತಕ್ಕ ಚರ್ಚೆಗಳು ಸಾರ್ವಜನಿಕರ ಗಮನಕ್ಕೆ

ಬರತಕ್ಕ ವ್ಯವಸ್ಥೆಯನ್ನು ಅತಿ ಶೀಘ್ರವಾಗಿ ಮಾಡಬೇಕು. ಇಲ್ಲದಿದ್ದರೆ ನಾವು ಏನು ಕಾನೂನು ಮಾಡುತ್ತೇವೆಂಬುದು ಅವರಿಗೆ ಗೊತ್ತಾಗುವುದಿಲ್ಲ. ನಾವು ಇಂಥ ಕಾನೂನನ್ನು ಮಾಡಿ ಪಾಸ್ ಮಾಡುತ್ತಿದ್ದೇವೆಂದು ರೇಡಿಯೋ ಮತ್ತು ಪತ್ರಿಕೆಗಳ ಮೂಲಕ ವಿವರಕೆ ಕೊಡಬೇಕು. ಕಾನೂನು ಮಾಡುವಾಗ ಇದನ್ನು ಗಮನದಲ್ಲಿಟ್ಟುಕೊಳ್ಳಬೇಕು. ಏಕ್‌ದಂ ಕಾನೂನು ತಂದು ಚರ್ಚೆ ಮಾಡಿ ಪಾಸ್ ಮಾಡುವುದು ಸರಿಯಲ್ಲ. ಹಿಂದೆ ಬ್ರಿಟಿಷ್ ಸರ್ಕಾರ ಇದ್ದಾಗ್ಗೆ ಒಂದು ಕಾನೂನಾಗಬೇಕಾದರೆ ೧೮ ವರ್ಷಗಳ ಕಾಲ ಚರ್ಚೆಯಾಗುತ್ತಿತ್ತು. ಒಂದು ವಿಷಯ ಕಾನೂನು ಆಗಬೇಕಾಗಿದ್ದರೆ ಅದು ಸಾರ್ವಜನಿಕರಲ್ಲಿ, ವಿಚಾರವಂತರಲ್ಲಿ ಚರ್ಚೆಯಾಗಬೇಕು. ಸರ್ಕಾರ, ಇಂಥ ಕಾನೂನು ಮಾಡುವ ಆಲೋಚನೆ ಇದೆ, ಇದರ ಬಗ್ಗೆ ಏನ ಮಾಡಬಹುದೆಂಬುದನ್ನು ತಿಳಿಯಲು ಅದನ್ನು ಸಾರ್ವಜನಿಕರ ಮುಂದೆ ಇಡಬೇಕು. ಈ ಬಗ್ಗೆ ಗೋಷ್ಠಿಗಳು ನಡೆಯಬೇಕು. ಅದನ್ನು ಬಿಟ್ಟು ಒಮ್ಮಿಂದೊಮ್ಮೆಗೇ ಆರ್ಡಿನೆನ್ಸ್ ಹೊರಡಿಸತಕ್ಕದು ಸರಿಯಲ್ಲ. ಈಗ ಪರೀಕ್ಷೆಗಳನ್ನು ನಡೆಸುವ ಬಗ್ಗೆ ಮತ್ತು ಪರೀಕ್ಷಾ ಕೇಂದ್ರಗಳಲ್ಲಿ ಪೋಲೀಸರನ್ನು ಹಾಕುವ ಬಗ್ಗೆ ಕಾನೂನು ತರುತ್ತಿದ್ದೀರಿ. ಅದರ ಬಗ್ಗೆ ಸಾರ್ವಜನಿಕರ ಅಭಿಪ್ರಾಯಗಳನ್ನು ಸಂಗ್ರಹಿಸಿದ ನಂತರ ಅದನ್ನು ರೂಪಿಸಬೇಕು. ಈ ರೀತಿ ಸಾರ್ವಜನಿಕರ ಅಭಿಪ್ರಾಯವನ್ನು ತೆಗೆದುಕೊಂಡ ಬಳಿಕ ಕಾನೂನು ಮಾಡುವ ಪದ್ಧತಿಯನ್ನು ಜಾರಿಗೆ ತರಬೇಕೆಂದು ಹೇಳಿ ಮಾನ್ಯ ಅಧ್ಯಕ್ಷರಿಗೆ ವಂದಿಸಿ ನನ ಮಾತನ್ನು ಮುಗಿಸುತ್ತೇನೆ.

† ಶ್ರೀ ಕೆ. ಭಾಸ್ಕರ ನಾಯ್ಡು (ಬಳ್ಳಾರಿ).—ಮಾನ್ಯ ಉಪಾಧ್ಯಕ್ಷರೇ. ಈ ದಿನ ನಾನು ಕನ್ನಡದಲ್ಲಿ ಮಾತನಾಡಬೇಕೆಂದು ಇದ್ದೆ. ಆದರೆ ಅನಿಮಲ್ ಹಸ್ಬೆಂಡರಿಗೆ ಸಂಬಂಧಪಟ್ಟ ಕೆಲವು ಪದಗಳನ್ನು ಕನ್ನಡಕ್ಕೆ ತರ್ಜುಮೆ ಮಾಡಬೇಕೆಂದರೆ ಕು. ಪ್ರಮೀಳರವರನ್ನು ಕೇಳಬೇಕಾಗುತ್ತದೆ. ಆದ್ದರಿಂದ, ಮುಂದೆ ಚನ್ನಾಗಿ ಕಲಿತುಕೊಂಡು ಮಾತನಾಡುತ್ತೆನೆ. ಅದಕ್ಕೆ ಇವತ್ತು ಇಂಗ್ಲೀಷಿನಲ್ಲಿ ಮಾತನಾಡುತ್ತೇನೆ. ಕುಮಾರಿ ಪ್ರಮೀಳರವರು ವಾಕ್‌ಔಟ್ ಮಾಡುವುದು ಬೇಡ.

ಉಪಾಧ್ಯಕ್ಷರು.—ಪಂಪಾಪತಿಯವರನ್ನು ಕೇಳಿಕೊಳ್ಳಿ.

ಶ್ರೀ ಕೆ. ಭಾಸ್ಕರನಾಯ್ಡು.—ಅವರು ವಾಕ್‌ಔಟ್ ಮಾಡುವುದಿಲ್ಲ. ಈ ಅಮ್ಮ ಇತ್ತೀಚೆಗೆ ವಾಕ್‌ಔಟ್ ಮಾಡುತ್ತಿದ್ದಾರೆ.

ಶ್ರೀ ಪಂಪಾಪತಿ.—ಅವರು ಕನ್ನಡದಲ್ಲೇ ಮಾತನಾಡಲಿ. ಅಕಸ್ಮಾತ್ ಕಷ್ಟವಾದರೆ ಇಂಗ್ಲೀಷಿನಲ್ಲಿ ಹೇಳಲಿ.

SRI K. BHASKAR NAIDU.—Sir, today it is a great pleasure for me to speak on this demand, Already eminent lawyers have spoken about courts and Sri H. Gangadharan spoke about the Parlimentary Affairs. I would like to spend my time on Animal Husband y.

I have referred to the dictionary and the meaning given for 'animal' is organised being endowed with life, sensation and voluntary motion; such being other than man." The meaning given for 'husbandry' is forming; management of affairs; careful management.' Sir, this Animal Husbandry department has been looked down by this Government to such an extent that it has been made of no importance at all. It has been said in our Puranas that animals are most important next to the man. Gods have taken animals as their 'Vahanas'. Particularly in our Government. ಚಿಕ್ಕನ್, ಎಗ್ಸ್ ಇಂಥದಕ್ಕೆ ಏಕೋ ಬಹಳ ತುಚ್ಛವಾದ ಭಾವನೆಯನ್ನು ತಾಳುತ್ತಾರೆ.

ಉಪಾಧ್ಯಕ್ಷರು.—ನಿಮಗೆ ಎಷ್ಟು ಕಾಲ ಬೇಕು ?

ಶ್ರೀ ಕೆ. ಭಾಸ್ಕರ ನಾಯ್ಡು.—ಬೇರೆಯವರು ಎಷ್ಟು ಬೇಕಾದರೂ ಮಾತನಾಡಬಹುದು, ಆದರೆ ನಾವು ಮತ್ತು ಶ್ರೀ ಪಂಪಾಪತಿಯವರು ಮಾತನಾಡಿದರೆ ಕಾನೂನು ಪ್ರಕಾರ ಆಗುವುದಿಲ್ಲವೆಂದು ಹೇಳುತ್ತಾರೆ.

ಒಬ್ಬ ಸದಸ್ಯರು.—ಅವರು ವಯಸ್ಸಾದವರು, ಹೆಚ್ಚು ಮಾತನಾಡುವುದಿಲ್ಲ.

SRI K. BHASKAR NAIDU.—Iam an old man. I require lot of tim to speak.

AN HON'BLE MEMBER.— You are not old.

SRI K. BHASKAR NAIDU.—Sir, this particular department namely the Animal Husbandry Department should have been held atleast by one Minister because this portfolio is as important as the food portfolio. The other day I went to meet Sri Y. Ramakrishna. I ust halloed him and said "hallo Veterinary Minister", Immediately he lost his balance. He said, Don't call me like that. I am also a Parliamentary Affairs Minister."

11-00 A.M.

He though that I have tried to degrade him by calling him a Veterinery Minister. Sir, I consider this portfolio more important than law or other things, because this country or any other country or the world has depended on animals so much that without animals you will not exist. It is a great thing. A cow in this country is revered as mother. a horse your companion, and a dog your loving friend. If you become a bold man they don't compare you to any other man. they will say you are as bold as a lion. If you are cunning as a fox, they will say he is like a fox, or if he is bad character, they will say he is a snake under the green grass Why I am telling all these things is, the animals, the flora and other things have lived with us and even our Puranas have said they have lived with us. You know when the Archaka blessed me, he said: "ಧನಂ ಧಾನ್ಯಂ ಪಶು ಪುತ್ರ ಲಾಭಂ". That means, money, land, animals, grains and childern. so the animals are part our life, without which we uot't live. But in these days we are thinking on aeroplanes, rockets and other things. Sir, battles were fought of elephants by holding flags. If the elephant is struck down and the flag is not there, the battle is lost.

When this has been the practice and when a portfolio of this importance is just not even cared and has been given a pittance of Rs. 22 crores or something like that, it is not correct. My friend was asking what I am trying to tell. Animal life is such a thing which you can see their activities directly outside.

Sir, once a man was married. It was found that he was not that potent. His wife complained to her parents, who thought of giving the man divorce. So that man learnt that he is going to get a divorce. He immediately thought what he should do. So he went to the forest and started praying Cupid, the God of love. The God of

love felt this man has forgotten Eshwara and Bramha and is praying for me. So at least there is a fellow who has prayed for me. Feeling happy with the prayer, the Cupid asked the man what is that he want. The man replied, he is going to get a divorce on this account and so he wants three-in-one. The God of love thought, this stupid fellow has been praying for three-in-one which he can buy in Commercial Street, meaning a radio, a transistor and a tape-recorder. Then he lust put his hand like that and gave the man a beautiful National Panasonic. The man said, "this is not what I wanted. I prayed for something that no male species in this world has ever had". The God asked what is that you want ? The man replied that he would like to have the power i.e., the penetration of pig, duration of the dog and the sequence of a sparrow. So the man did not asked to gioe him this and that. He only wanted what the animals had. That is why I say animals are very very important in life.

Sir, a frozen semen bank has been established at Hebbal with liquid nitrogen It is very essential. But in places like Bellary where the ice will melt, the liquid nitrogen has absolutely no effect. The semen doesn't function there at all because you yourself has said about cross-breeding at Munirabad and other places. How many cows have been injected with this semen and how many calves you have got ? It is a very difficult task. I am just trying to tell how important this department is. Sir, there is dearth of Veterinary doctors. Today they are on strike, and you don't want to recognise them. You think they are nothing. You think it is only the dactors who attend to human beings are great men. The men who are giving food, milk and other things are also very important. Sir, as per World Health Organisation statement are supposed to have 210 grams of milk. But here we are getting only 70 grams. Karnataka is still poor in this and we say we are very good. We are very very poor so for as milk supply is concerned In cities you might get, but in our village where are supposed to have healthy cattles, we don t get even one litre of milk. To get one litre of milk we have to milch about three cows. They don't have fodder. This is the position as far as milk is concerned. For example, in Newzealand they get 762 grams, Denmark 732 grams and in USA it is 671 grams. In these countries the per capita consumption is very high. How it is happening ? It is because of better management and because they produce more doctors I don't know why people here don't fight for veterinary hospitals. They fight only for medical and engineering colleges. How many veterinary doctors are passing every year ? It is only about 50 or 60

or 70 and something like that. My friend Mr. H. Gangadharan said an ordinary man who has just passed SSLC is given three months training to look after our cattle wealth. Is it possib'e ? A doctor who studies for five years and veterinary doctor who also studies for five years, what is the salary you are paying ? Some how you produce doctors. If they get better opportunity in some other place they will go away, because you are not looking after them as you should. As a matter of fac you must retain them by giving them more perks and they must have better treatment here. Then only they will stick here. Otherwise, why they would like to stay here?

†Sir Mechanisation of Indian agriculture is impossible because of the land ceiling that you have brought in. For five acres nobody is going to have a tractor and all that. Bulls are very essential for a farmer. A pair of bulls are necessary. But what is that you are doing to produce good bulls ? There are no bulls, there is no fodder, there is no water for the bulls and there is no doctor to look after the bulls if they get slightest disease. If this is the position, with 52 doctors what are you going to do ? There are about five lakh villages and where are you going to send them. So, with all the hydro-thermal plants are put tog ther they will not come and touch the bull power. It is only the Railways that has more power than the bull power. So, the bull power is very essential for a farmer in this country.

Then Sir, about rinderpest disease. It is such a dreadful disease that as soon as you come to know of the disease you should isolate the animal, otherwise they will die in hundreds of numbers Today a pair of good bullocks costs a farmer about six thousand rupees. If those bullocks die what would happen to the fate of the farmer? All his earnings and all his property spent on a pair of bullocks would go waste. Here, we say that we are taking care of animals. I request the Hon'ble Minister to give up the other portfolios and stick only to animal husbandry because here he will be doing better service to the poorer people Here, I would like to draw the attention of the Hon'ble Minister to the dreadful disease among the sheep. Sir, A kilogram of meat in Bellary costs about Rs 22 Thousands of animals peristed Overnight. The particular shephard community had to cry. They were crying there in Bellary what is it that our Minister was doing here? He was fiddling while Rome was burning there. Thousands and millions of sheep died overnight. the shephards became paupers It took two and a half days for the Minister to reach that place because they could not send any message or anything because they could not identify due to what disease the sheep were dying, particularly In Chitradurga and Bellary taluk. I don't know

whether compensation has been paid to them. this is how overnight we make honest livig people paupers in this county. This is all because of lack of technical s aff, because you don't produce enough doctors because you don't pro i ce enough men. You don't have the facilities. You only talk here sitting in vidhana Soudha that you are going to do this and that. what about difficulties of the doctors. How much physical risk he undergoes? A doctor cannot neatly dress himself and he cannot look at the animals. Sir, if an animal has fever, do you know where he has to insert the thermometer? If it gives a kick where will be you and me. Our teeth will be in our hand It may give a kick that can break our bones. That is what actually the Doctor suffers. There are some dreadful diseases Abortions in the cows Sir, they are so contagious that if a doctor who has a cut or wound in his hand attempts to those abortions, he will lose the power of a man This is known as brucellosis. I came to know that 30 doctors have been affected by this That is my inf rmation. Then one more thing, S r. Tuberculosis is a disease that is mostly spread by the cows. The red danes have proved that they are unseless cows. It is our own Jersey cows which are very useful. Your Red-danes have brought in T.B and the doctor who attend on it may be affected with T.B. within no time. So, don't think that the veterinary doctor has all the luxuries in life and as such he may be paid much less than a medical doctor. I am just telling why a veterinary doctor deserves better treatment. Let us not ignore him. You are not paying him enough salary. Then you said about the injection of semen in the cows. I am quite sure it is not functioning well. Sir, bulls are very important. These days even for a powerful bull or e beautiful bull you must have a cow to tease. A teaser must be there. Then only the bull will think that there is an opponent and then he will try. Now even teasers are not working. This is the fate.

AN. HON. MEMBER.—Very romantic.........

SRI. K.BHASKAR NAIDU.—No, Sir. It is daily life. Sir. I want to tell you one more thing. One Governor General of British raj was very much interested in Agriculture nnd Animal Husbandry. One day he went with a lady viceroy to a farm. The lady was looking at a small den where the bull was crossing. She was curious. within 15 minutes the bull served the cow four times. She called the lady servânt an said, "look here." She came and asked "What is your excellency7" Lady viceroy said, "Go and tell his Excellency that the bull here has served the cow four times." So, the lady went there and told "Sir, Her Excellency said that the cow has been served by the bull four times." His Excellency throught for a

minute and then said, "Go and tell her that is not the only cow that the bull will be serving in a day. Bull will be having so many cows to service." So, Sir, the bull must be capable. That is what I am telling and the people who are looking at the bulls must know that they are bulls. What is the use of having bulls which are not capable to serve the cows.

All this I say it is only a Veterinary Doctor that can understand the sterility of the Bull. What I want to say is, Karnataka needs them; poor ryots need them; Sheperds needs them. We are only producing 50 doctors a year. Let us retain them here. My final advice to my hon. friend Mr. Ramakrishna take up the portfolios you want but you serve the country well. I had some other more stories to tell but I would stop at this. Thank you.

ಶ್ರೀ ಜಿ. ರಾಮೇಗೌಡ (ದೊಡ್ಡ ಬಳ್ಳಾಪುರ).—ಮಾನ್ಯ ಅಧ್ಯಕ್ಷರೇ, ನನ್ನ ಸ್ನೇಹಿತರನೇಕರು ಪಶುಸಂಗೋಪನೆ ಮತ್ತು ಪಶುವೈದ್ಯ ಸೇವೆಗಳ ಬಗ್ಗೆ ಬಹಳ ಸ್ವಾರಸ್ಯವಾಗಿ ಹಾಗೂ ಚೆನ್ನಾಗಿ ಮಾತನಾಡಿದ್ದಾರೆ. ಆ ಶಕ್ತಿ ನನಗಿದೆಯೋ ಇಲ್ಲವೋ ಹೇಳಲಾರೆ. ಆದರೂ ಶ್ರೀ ಭಾಸ್ಕರನಾಯ್ಡು ಅವರನ್ನು ಮೀರಿಸುವಂತಹ ಶಕ್ತಿ ನನಗಿಲ್ಲ. ಅವರದೇ ಆದಂತಹ ಸ್ವತಃ ಶೈಲಿಯಲ್ಲಿ ಅವರು ಮಾತನಾಡುತ್ತಾರೆ. ಪಶುಸಂಗೋಪನಾ ಇಲಾಖೆಯ ಬಗ್ಗೆ ಎರಡು ಮುಖ್ಯವಾದ ಕರ್ತವ್ಯಗಳನ್ನು ನಮ್ಮ ಮಂತ್ರಿಯವರು ಮಾಡಬೇಕಾಗಿದೆ. "ಸೋಂಕು ರೋಗ ತಗುಲದಂತೆ ಸಾಕು ಪ್ರಾಣಿಗಳ ಆರೋಗ್ಯವನ್ನು ಕಾಪಾಡುವುದು" ಮತ್ತು ಜಾನುವಾರುಗಳ ಆಡಳಿತ ನಿರ್ವಹಣೆ, ಪಾಲನೆ, ಪೋಷಣೆ, ಹೆಚ್ಚು ಉತ್ಪಾದನೆ ಹಾಗೂ ಜಾನುವಾರು ತಳಿ ವರ್ಧನೆ. ಈ ಎರಡು ಕೆಲಸಗಳನ್ನು ತಾವು ಮಾಡಿಬಿಟ್ಟರೆ ಇದಕ್ಕಿಂತ ಶ್ರೇಷ್ಠವಾದ ಕೆಲಸ ಯಾವುದೂ ಇಲ್ಲವೆಂದು ನನಗನ್ನಿಸುತ್ತದೆ. ಇದನ್ನು ನನ್ನ ಸ್ನೇಹಿತರೆಲ್ಲರೂ ಒಪ್ಪುತ್ತಾರೆಂದು ನನ್ನ ಭಾವನೆ ತಾವು ಕಳೆದ ಸಾರಿ ಅನೇಕ ಆಶ್ವಾಸನೆಗಳನ್ನು ಕೊಟ್ಟಿರಿ. ಅದರಲ್ಲಿ ಸೋಂಕು ರೋಗಗಳ ನಿವಾರಣೆಗಾಗಿ ಉಚಿತವಾಗಿ ಔಷದಿ ಕೊಡುತ್ತೇವೆಂದು ಹೇಳಿದಿರಿ, ಕಾಲು ಜ್ವರ ಮತ್ತು ಬಾಯಿ ಜ್ವರದಂತ ಕಾಯಿಲೆಗಳಿಗೆ ಉಚಿತವಾಗಿ ಔಷದಿ ಕೊಡುತ್ತೇವೆಂದು ಹೇಳಿದಿರಿ. ಆದರೆ ಯಾವುದನ್ನೂ ಕಾರ್ಯಗತ ಮಾಡಲಿಲ್ಲ. ತಮ್ಮ ವರದಿಯಲ್ಲಿ ದೊಡ್ಡ ರೋಗದಿಂದ ೧೬೦೦ ದನಗಳು ಮಾತ್ರ ಸತ್ತಿವೆ ಯೆಂದು ಹೇಳಿರುವುದು ಸತ್ಯಕ್ಕೆ ದೂರವಾದ ಮಾತು. ಚಪ್ಪೆರೋಗದಿಂದ ೯೪೨ ರಾಸುಗಳು ಸತ್ತಿವೆ ಯೆಂದು ಹೇಳಿರುವುದು ಕೂಡ ಸತ್ಯಕ್ಕೆ ದೂರವಾದ ವಿಚಾರ. ಕುರಿ ಮತ್ತು ಮೇಕೆ ಸಿಡುಬು ರೋಗ ತಗುಲಿ ೯ ಮಾತ್ರ ಸತ್ತಿವೆ ಎಂದು ಹೇಳಿದ್ದೀರಿ. ಸ್ವಾಮಿ, ನನ್ನ ತೋಟದ ಸುತ್ತಮುತ್ತ ಇರತಕ್ಕ ರೈತರ ಮನೆಗಳಲ್ಲಿ ನೂರಾರು ಕುರಿ ಮೇಕೆಗಳು ಸತ್ತಿವೆ, ತಾವು ೯ ಮಾತ್ರ ಎಂದು ಹೇಳಿದ್ದೀರಿ, ಯಾರು ಬಂದು ಹೇಳುತ್ತಾರೆ. ಅದನ್ನು ಮಾತ್ರ ಪ್ರಿಂಟ್ ಮಾಡುತ್ತೀರಾ ? ಕರಾರುವಾಕ್ಕಾಗಿ ಎಷ್ಟು ಜಾನುವಾರುಗಳು ಸತ್ತಿವೆ ಎಂಬುದನ್ನು ಕಂಡುಹಿಡಿಯುವುದಕ್ಕೆ ಏನು ವ್ಯವಸ್ಥೆ ಮಾಡಿದ್ದೀರಿ ? ಜಾನುವಾರುಗಳಿಗೆ ರೋಗ ಬಂದಿದೆಯೆಂದು ಹೇಳಿಕಳಿಸಿದರೆ ಮಾತ್ರ ಬರುತ್ತೀರಿ ? ತಾವಾಗಿಯೇ ಬಂದು ಚಿಕಿತ್ಸೆ ಕೊಡತಕ್ಕಂಥ ವ್ಯವಸ್ಥೆ ಕಾಣುತಿಲ್ಲ. ನಾಯಿ ಹುಚ್ಚು ರೋಗದಿಂದ ೭೬ ಸತ್ತಿವೆ ಎಂದು ಹೇಳಿದಿರಿ. ಇದಕ್ಕೆ ಲೆಕ್ಕವೇ ಇಲ್ಲ ಇವತ್ತು ನಾಯಿಗಳು ಜಾಸ್ತಿಯಾಗಿವೆ. ಕಾರಣ ಕೂಡ ತಮಗೆ ಗೊತ್ತಿದೆ. ನಿಮ್ಮ ಸರ್ಕಾರದಲ್ಲಿ ಅವು ವಿಪರೀತ ಓಡಾಡುತ್ತಿವೆ. ಕಂಟ್ರೋಲ್ ಮಾಡುವ ಶಕ್ತಿ ಇಲ್ಲ. ಹುಚ್ಚು ಹಿಡಿದು, ತಲೆ ಅಲ್ಲಾಡಿಸಿಕೊಂಡು, ಜೊಲ್ಲುಸುರಿಸಿಕೊಂಡು ಓಡಾಡುತ್ತಿವೆ, ನಿಮ್ಮನ್ನು ಕಚ್ಚಬಹುದು. ಹುಚ್ಚುನಾಯಿ ಕಡಿದರೆ ಹೊಕ್ಕಳದ ಸುತ್ತಲೂ ೧೬ ಇಂಜಕ್ಷನ್ ಹಾಕಿಸಿ ಕೊಳ್ಳಬೇಕು. ಒಂದು ಇಂಜಕ್ಷನ್ ೫ ಸಿ.ಸಿ. ಮನುಷ್ಯರ ಗತಿ ಏನಾಗಬೇಕು ? ತಾವು ೭೬ ಎಂದು ಹೇಳಿದ್ದೀರಿ. ಹಾಲು ಕೊಡತಕ್ಕಂಥ ಹಸುಗಳು ಈ ರೋಗಕ್ಕೆ ತುತ್ತಾಗಿವೆ. ಇದು ಬಹಳ ತೀಕ್ಷಣವಾದುದು, ತಾವು ಇದರ ಬಗ್ಗೆ ಆಲೋಚನೆ ಮಾಡಬೇಕೆಂದು ಹೇಳುತ್ತೇನೆ.

ಸ್ವಾಮಿ, ಈ ಮಾತನ್ನು ಬಹಳ ದ:ಖದಿಂದ ಹೇಳಬೇಕಾಗಿದೆ. ಗರ್ಭಪಾತದಿಂದ ಎಷ್ಟು ಕರುಗಳು ಸಾಯುತ್ತವೆ? ನಿಮ್ಮ ಡಾಕ್ಟರು ಕರು ಸತ್ತರು ಪ್ರಾಣ ಇರಲಿಲ್ಲವೆಂದು ಹೇಳುತ್ತಾರೆ. It was not breathing and it was not a live animal. ಇದು ಖಂಡಿತವಾಗಿಯೂ ಸತ್ಯಕ್ಕೆ ದೂರವಾದುದು, ಇದನ್ನು ತಿದ್ದುಪಡಿ ಮಾಡಿಕೊಳ್ಳಬೇಕು. ಗರ್ಭಪಾತದಿಂದ ಆಗುವಂತಹ ನಷ್ಟವನ್ನು ಯಾವಾಗಲೂ ಸರಿಮಾಡುವುದಕ್ಕೆ ಆಗುವುದಿಲ್ಲ. ನಾನು ತಮ್ಮನ್ನು ಕೇಳಿಕೊಳ್ಳುತ್ತೇನೆ. ಒಬ್ಬರು ಡಾಕ್ಟರನ್ನು ಜಪಾನಿಗೆ ಇಂಥ ರೋಗಗಳ ಬಗ್ಗೆ ತರಬೇತಿ ಪಡೆದು ಕೊಂಡು ಬರಲು ಮೂರು ವರ್ಷ ಕಳಿಸಿದ್ದೀರಿ. ಅವರು ತರಬೇತಿ ಪಡೆದುಕೊಂಡು ಬಂದು ಪ್ರಸಿದ್ಧ ಡಾಕ್ಟರು ಆಗತಕ್ಕವರನ್ನು ನಿಮ್ಮ ಆಫೀಸಿನ ಸ್ಪೆಷಲ್ ಸೆಕ್ರೆಟರಿಯಾಗಿ ಮಾಡಿ ಕೊಂಡಿದ್ದೀರಿ ಏಕೆ? ರಾಜ್ಯದಲ್ಲೆಲ್ಲಾ ಓಡಾಡಿ ಈ ರೋಗವನ್ನು ತಡೆಯುವುದಕ್ಕೆ ಏನಾದರೂ ವ್ಯವಸ್ಥೆ ಮಾಡುವಂಥ ಅವಕಾಶವನ್ನು ಕೊಡಿ. ಏತಕ್ಕೆ ಕೊಡಬಾರದು ಫಲ ನೋಡಿ ಮಾಡುವುದೇನು ? ಗರ್ಭಪಾತದಂತಹ ರೋಗಗಳು ಜಾಸ್ತಿ ಆಗುವುದಕ್ಕೆ ಜಾನುವಾರು ಗಳಿಗೆ ಹಾಕತಕ್ಕಂಥ ತಿಂಡಿ ಕಾರಣ. ಪ್ರಾಣಿಗಳಿಗೆ ಹಾಕತಕಂಥ ಆಹಾರ ಪದಾರ್ಥಗಳಲ್ಲಿ ಸಕ್ಕರೆ ಪಾಕ ಹಾಕುತ್ತಾರೆ ? ಇದು ತೇವಾಂಶದಿಂದ ಕೂಡಿದು ೮ ದಿನದ ಮೇಲೆ ಬೂಸ್ಟ ಬಂದು ಬಿಡುತ್ತದೆ. ಇದನ್ನು ಪಶುಗಳಿಗೆ ಹಾಕುವುದರಿಂದ ಗರ್ಭಪಾತ ಉಂಟಾಗುತ್ತದೆ. ಸಕ್ಕರೆ ಪಾಕದಿಂದ ತಯಾರು ಮಾಡಿದಂತಹ ಪಶು ಆಹಾರವನ್ನು ೬ ದಿನಗಳ ಮೇಲೆ ಇಡಬಾರದೆಂದು ತಾವು ಕೂಡಲೇ ಒಂದು ಆಜ್ಞೆಯನ್ನು ಜಾರಿಮಾಡಬೇಕು. ಬೂಸ್ಟನಿಂದ ವಿಷಕ್ರಿಮಿ ಉತ್ಪತ್ತಿಯಾಗಿ ಗರ್ಭಪಾತವಾಗುತ್ತದೆ ಇದರ ಕಡೆ ತಾವು ನಿಗಾ ಕೊಡಬೇಕೆಂದು ಹೇಳುತ್ತೇನೆ. ಇನ್ನು ಕೃತಕ ಗರ್ಭದಾರಣ ಕೇಂದ್ರಗಳಿಂದ ಪಶುಗಳಿಗೆ ಗರ್ಭದಾರಣೆ ಮಾಡಲಾಗುತ್ತದೆ ನನ್ನ ಪಶುಗಳಿಗೆ ಶಿಕ್ಕ ಗರ್ಭಪಾತವಾಯಿತು. ಇದಕ್ಕೆ ಕಾರಣ ಏನು ? ಯೂನಿವರ್ಸಿಟಿಗೆ ಮತ್ತು ತಮ್ಮ ಇಲಾಖೆಗೆ ಟೆಸ್ಟ್‌ಗೆ ಕಳಿಸಿಕೊಟ್ಟೆ. ಅವರು ಟೆಸ್ಟ್ ಮಾಡಿ ಇದರಲ್ಲಿ ಆಗಬಹುದು ನಿಮ್ಮ ದನಗಳಿಗೆ ಆಗಿಲ್ಲವೆಂದು ಹೇಳಿದ್ದಾರೆ. ಅಂದರೆ ಆಗುವುದಕ್ಕೆ ಅನುಮಾನವಿದೆಯೆಂದು ಅರ್ಥವಾಗುತ್ತದೆ. ಪಶು ಆಹಾರದಲ್ಲಿರತಕ್ಕ ದೋಷವನ್ನು ತೆಗೆದು. ಪಶುಗಳನ್ನು ರಕ್ಷಣೆ ಮಾಡುವುದಕ್ಕೆ ಸೂಕ್ತ ಕಾರ್ಯಕ್ರಮವನ್ನು ತಾವು ಕೂಡಲೇ ತೆಗೆದಕೊಳ್ಳಬೇಕೆಂದು ಹೇಳುತ್ತೇನೆ, ಬಹಳ ಮಟ್ಟಿಗೆ ಕರ್ನಾಟಕ ಡೈರಿ ನಿಗಮದಿಂದ ಕೃತಕ ಗರ್ಭದಾರಣೆಯನ್ನು ಮಾಡು ವುದಕ್ಕೆ ಜನರನ್ನು ಕಳುಹಿಸಿಕೊಡುತ್ತೀರಿ ಅವರು ಹೇಗೆ ಮಾಡುತ್ತಾರೆನ್ನುವುದನ್ನು ತಾವೇ ನಿಂತುಕೊಂಡು ಒಮ್ಮೆ ನೋಡಿ. ಅವರಿಗೆ ತರಬೇತಿ ಕೊಡಲಾಗಿದೆಯೋ ? ತರಬೇತಿ ಕೊಡುವುದಕ್ಕೆ ತಾವು ಏನಾದರೂ ಆಲೋಚನೆ ಮಾಡಿದ್ದೀರಾ ? ನಾನು ಹೀಗೆ ಹೇಳುತ್ತೇನೆಂದು ತಾವು ಕೋಪ ಮಾಡಿಕೊಳ್ಳಬೇಡಿ. ಒತ್ತಿ ಹೇಳಿದರೂ ನಮ್ಮ ಮೂರ್ಖನಿಗೆ ನೂರ್ಕಾಲ ಬುದ್ಧಿ ಹೇಳಿದರೂ, ಫೋರ್ಕಲ್ ಮೇಲೇ ಮಳೆ ಹೊಯ್ದಂತೆ ಸರ್ವಜ್ಞ ಅಂತ ಹೇಳುತ್ತಾರೆ. ನಮಗೆ ಕಷ್ಟ ವಿರುವುದರಿಂದ ಒತ್ತಿ ಹೇಳುತ್ತೇವೆ. ತಮ್ಮನ್ನು ನೋಡಿದರೆ ನನಗೆ ಪರಮಾನಂದವಾಗುತ್ತದೆ. ಆದ್ದುದರಿಂದ ತಾವು ಇದನ್ನೆಲ್ಲಾ ಪರೀಕ್ಷಿಸಿ, ಗರ್ಭಪಾತವಾಗುವುದನ್ನು ತಡೆಗಟ್ಟುವುದಕ್ಕೆ ಸೂಕ್ತ ವ್ಯವಸ್ಥೆ ಮಾಡಬೇಕೆಂದು ಹೇಳುತ್ತೇನೆ. ಪಶುಗಳಲ್ಲಿ ಒಂದು ಗುಣ ಇದೆ. ಅದು ಹೀಟಿಗೆ ಬಂದಿದೆಯೋ ಇಲ್ಲವೇ ಎನುವುದನ್ನು ರೈತ ತಿಳಿದುಕೊಳ್ಳುವಷ್ಟು ಬುದ್ಧಿವಂತನಲ್ಲ. ರೈತ ದಡ್ಡ, ಅಂದರೆ ನನಗಿಂತಲೂ ದಡ್ಡ. ಅವನು ಬುದ್ಧಿವಂತನಾಗಿದರೆ ನಿಮ್ಮನ್ನು ಗೆಲ್ಲುವುದಕ್ಕೆ ಬಿಡುತ್ತಿರಲಿಲ್ಲ. ಹಸುಗಳು ನಿಜವಾಗಿ ಹೀಟಿಗೆ ಬಂದಿವೆಯೋ ? ಒಳಗಡೆ ಗರ್ಭಕೋಶ ತಿರುಗಿದೆಯೇ, ಒಳಗೆ ಕರ ಇದೆಯೇ, ಫಾರ್ಮೇಷನ್ ಆಗಿದೆಯೋ ? ಇದನ್ನೆಲ್ಲಾ ಅವನು ನೋಡುವುದಕ್ಕೆ ಹೋಗುವುದಿಲ್ಲ.

೧೧-೩೦ ಪಿ. ಎಂ.

ತಾವು ಒಂದು ಕಬ್ಬಿಣದ ರಾಡು ಕೊಟ್ಟಿದ್ದೀರಿ. ಅವರು ಅದನ್ನು ತೆಗೆದುಕೊಳ್ಳುತ್ತಾರೆ ತೂರಿಸುತ್ತಾರೆ, ತಳ್ಳುತ್ತಾರೆ. ಮನೆಗೆ ಹೋದ ಮೇಲೆ ರಕ್ತ ಬರುತ್ತದೆ, ಆ ಮೇಲೆ ಒಂದು ಸಣ್ಣ ಕರು ಈಚೆಗೆ ಬರುತ್ತದೆ. ಆದ್ದರಿಂದ, ಅವರಿಗೆ ಸರಿಯಾಗಿ ಟ್ರೈನಿಂಗ್ ಕೊಡತಕ್ಕದ್ದು ಅಗತ್ಯ ಇದೆ. ನಿಮಗೆ ಲೆಕ್ಕ ಬೇಕು ಅಂದರೆ ೫೦-೬೦ ಕೇಸ್ ಇದೆ, ಅದನ್ನು ನಾನು ನಿಮಗೆ ಕೊಡುತ್ತೇನೆ. ಮೂರು ತಿಂಗಳು ಆದ ಮೇಲೆ ಇನ್‌ಸೆಮಿನೇಷನ್ ಮಾಡಿ ರೈತರು ತೆಗೆದುಕೊಂಡು ಬಂದಾಗ ಡಾಕ್ಟರುಗಳು ಇನ್ನೊಂದು ಸಾರಿ ನೋಡುವಂತೆ ತಿಳಿಸಬೇಕು, ಅವನು ಏನೋ ತಂದ, ಇವನು ತಿವಿದ ನಿಮ್ಮ ಡಾಕ್ಟರು ಗಳನ್ನು ಸ್ವಲ್ಪ ಕರೆದು ಕೇಳಿ ತಿಳಿದುಕೊಳ್ಳಿ, ತಿಳಿದುಕೊಳ್ಳುವಂತಾದದ್ದು ಅಗೌರವ ಅಂಥ ತಿಳಿದುಕೊಳ್ಳ ಬೇಡಿ ವೆಟರ್ನರಿ ಮಿನಿಸ್ಟರ್ ಅಂದರೆ ತಮಗೆ ಕೋಪ ಬಂದೀತು, ಹಿಂದೆ ನನ್ನಲ್ಲಿದ್ದ ಅರಣ್ಯ ಖಾತೆ

ತೆಗೆದುಕೊಂಡು ವೆಟರ್ನರಿ ಖಾತೆ ಕೊಟ್ಟಾಗ ದೇವರುಗಳಿಗೆಲ್ಲಾ ಪೂಜೆ ಮಾಡಿಸಿದೆ. ಮೂಕ ಪ್ರಾಣಿಗಳ ಸೇವೆ ಯಾವಾಗಲೂ ಸಿಕ್ಕುವುದಿಲ್ಲ. ಏನೋ ನಿಮ್ಮ ಪೂರ್ವ ಜನ್ಮದ ಪುಣ್ಯ ನಿಮಗೆ ಸಿಕ್ಕಿದೆ ಮುಂದೆ ನೀವು ಏನು ಆಗುತ್ತೀರೋ ಹೇಳಲಿಕ್ಕೆ ಆಗುವುದಿಲ್ಲ, ತಾವು ಸೇವೆ ಮಾಡಿ ಮೋಕ್ಷ ಪಡೆಯಿರಿ. ಇನ್ನು ದೊಡ್ಡ ರೋಗದ ಬಗ್ಗೆ ನಿಮ್ಮ ಪುಸ್ತಕದ ೮ನೇ ಪುಟದಲ್ಲಿ ಹೇಳಿದ್ದೀರಿ. ಇದನ್ನು ನಿರ್ಮೂಲನೆ ಮಾಡುವ ಭರವಸೆ ಯಶಸ್ವಿಯಾಗಲಿಲ್ಲ ಎಂದು, ಏತಕ್ಕೆ ಆಗಲಿಲ್ಲ ಅಂದರೆ ಅವರು ಹೇಳುವುದು ಹೊರಗಡೆಯಿಂದ ದನಗಳು ಬರುತ್ತವೆ ಅವೆಲ್ಲಾ ರೋಗ ತೆಗೆದುಕೊಂಡು ಬಂದು ಇಲ್ಲಿ ಹರಡುತ್ತವೆ. ಅದರಿಂದ ಸಾಯುತ್ತವೆಂದು ಹೇಳುತ್ತಾರೆ. ಕಾರಣ ಸರಿ. ನೀವು ಎಲ್ಲಾ ಬೌಂಡರಿಯಲ್ಲೂ ಚೆಕ್ ಪೋಸ್ಟ್ ಇಟ್ಟಿದ್ದೀರಿ. ನೀವು ಮಂತ್ರಿಯಾಗಿ ೨-೩ ವರ್ಷವಾಯಿತು, ತಾವು ಎಷ್ಟು ಸಾರಿ ಚೆಕ್‌ಪೋಸ್ಟ್ ನೋಡಿದ್ದೀರಾ ಅಲ್ಲಿ ಎಷ್ಟು ಜನ ಡಾಕ್ಟರುಗಳು ಇದ್ದರೂ ಅಂಥ ನೋಡಿದ್ದೀರಾ ಅವರು ಇಲ್ಲದೇ ಹೋದ ಮೇಲೆ ಏನು ಕ್ರಮ ತೆಗೆದುಕೊಂಡಿದ್ದೀರಾ ಅಂಥವರಿಗೆ ಏನು ಶಿಕ್ಷೆ ಕೊಟ್ಟಿದ್ದೀರಾ ಈ ಕಾಯಿಲೆಗೆ ವ್ಯಾಕ್ಸಿನ್ ಕೊಟ್ಟು ಕಬ್ಬಿಣದ ರಾಡು ಆಸಿಡ್‌ನಲ್ಲಿ ಇಟ್ಟು ಪಿರ್ರೆ ಮೇಲೆ ಗುರುತು ಹಾಕುತ್ತಾರೆ. ತಾವು ಹಳ್ಳಿಗಳ ಕಡೆಗೆ ಹೋಗುತ್ತೀರಿ, ಯಾವ ದನಗಳ ಪಿರ್ರೆ ಮೇಲೆ ಈ ಗುರುತು ಇಲ್ಲ ನೋಡಿ ಆಗ ನಿಮ್ಮ ಡಾಕ್ಟರ್ ಕರೆದು ಈ ಹಸುಗೆ ದೊಡ್ಡ ರೋಗದ ಮದ್ದು ಕೊಟ್ಟಿದ್ದೀರಾ ಎಂದು ಕೇಳಬಹುದು ಈ ರೀತಿ ಮಾಡಿದರೆ ದನಗಳು ಸಾಯುವುದು ಕಡಿಮೆಯಾಗುತ್ತದೆ. ಮೇ ೧೩ನೇ ತಾರೀಖು ನನ್ನ ತಾಲ್ಲೂಕಿನಲ್ಲಿ ಕೋಡ ಹಳ್ಳಿಯಲ್ಲಿ ೧೫ ರಾಸುಗಳಿಗೆ ಒಂದು ವಾರದಲ್ಲಿ ದೊಡ್ಡ ರೋಗ ಬಂದಿತ್ತು. ನಿಮ್ಮ ಕೆ. ಡಿ. ಡಿ. ಸಿ. ಅವರಿಗೆ ಫೋನ್ ಮಾಡಿದೆ, ಅವರು ಬಂದರು ನೋಡಿ ಹೋದರು, ತಿರುಗಿ ದನಗಳು ಸಾಯುವವರೆಗೂ ಅವರು ಬರಲಿಲ್ಲ. ಇದನ್ನು ಬೇಕಾದರೆ ತಾವು ವಿಚಾರಿಸಿ, ಅನಂತರ ರೈತರು ಬಂದು ನನಗೆ ಹೇಳಿದಾಗ ಟೌನ್‌ನಲ್ಲಿದ್ದಂಥ ಡಾಕ್ಟರ್ ನಾನೇ ಕರೆದುಕೊಂಡು ಹೋಗಿ ಇಲ್ಲಿ ನೀವು ಪ್ರತಿದಿನ ಹಾಜರಾಗಿ ಟ್ರೀಟ್‌ಮೆಂಟ್ ಕೊಡಬೇಕೆಂದು ಕೇಳಿ ಕೊಂಡೆ. ನನ್ನ ಅರಿಕೆಯನ್ನು ಅವರು ಒಪ್ಪಿ ಪ್ರತಿದಿನವೂ ಅಲ್ಲಿ ಹೋಗಿ ಟ್ರೀಟ್‌ಮೆಂಟ್ ಕೊಟ್ಟರು ೬ ಹಸುಗಳು ಸತ್ತವು, ೯ ಹಸುಗಳು ಬದುಕಿದವು, ೬ ಹಸುಗಳ ಬೆಲೆ ಅಂದಾಜು ೩೦ ಸಾವಿರ ರೂಪಾಯಿಗಳು ಆಯಿತು, ಎಲ್ಲಾ ಹಾಲು ಕರೆಯುತ್ತಿದ್ದಂಥ ಹಸುಗಳು, ಅದು ಕೆ. ಡಿ. ಡಿ. ಸಿ. ಇರುವ ಊರು, ಬೆಂಗಳೂರಿಗೆ ಹತ್ತಿರ ಇರತಕ ಹಳ್ಳಿ, ಇಂಥ ಕಡೆ ದೊಡ್ಡ ರೋಗವನ್ನು ತಡೆಯಲಿಲ್ಲ ಅಂದರೆ ಇನ್ನು ಬೇರೆ ಕಡೆ ಹೇಗೆ ತಡೆಯಲಿಕ್ಕೆ ಸಾಧ್ಯವಾಗುತ್ತದೆ? ತಾವು ಅಸಿಸ್ಟೆಂಟ್ ಡೈರೆಕ್ಟರ್ ಹತ್ತಿರ ರಿಪೋರ್ಟ್ ತರಿಸಿ ಕೊಳ್ಳಿ. ಈಗ ತಾವು ಸಂಚಾರಿ ಆಸ್ಪತ್ರೆ ಕೊಟ್ಟಿದ್ದೀರಿ, ಸಂತೋಷ, ಆ ಆಸ್ಪತ್ರೆಗಳಿಗೆ ಒಳ್ಳೆಯ ಸ್ಟ್ಯಾಂಡರ್ಡ್ ವ್ಯಾನ್ ಕೊಟ್ಟಿದ್ದೀರಿ. ಅವು ಚೆನ್ನಾಗಿ ಇವೆ. ನಾನು ಆ ವ್ಯಾನ್ ನೋಡಿದ ಮೇಲೆ ಡ್ರೈವರ್ ಕರೆಯಿರಿ ಸ್ಟಾರ್ಟ್ ಮಾಡಲಿ ಎಂದು ಹೇಳಿದೆ. ಆಗ ಅದಕ್ಕೆ ಅವರು ಡ್ರೈವರ್ ಕೊಟ್ಟಿಲ್ಲ ಎಂದು ಹೇಳಿದರು, ಹೋಗಲಿ ಡೀಸಲ್ ಹಾಕಿಸಿಕೊಂಡು ಬನ್ನಿ ನಮ್ಮ ತೋಟಕ್ಕೆ ಹೋಗಿ ಹಸುಗಳನ್ನು ನೋಡಿಕೊಂಡು ಬರೋಣ ಅಂಥ ಹೇಳಿದೆ, ಅದಕ್ಕೆ ಅವರು ನೀವೇ ಹಾಕಿಸಿ ಸಾರ್ ಅದಕ್ಕೆ ಇನ್ನೂ ಪ್ರಾವಿಜನ್ ಕೊಟ್ಟಿಲ್ಲ ಅಂಥ ಹೇಳಿದರು, ಡ್ರೈವರ್ ಇಲ್ಲ. ಡೀಸಲ್ ಹಾಕಿಸಲಿಕ್ಕೆ ಪ್ರಾವಿಜನ್ ಇಲ್ಲ, ಸ್ಟರ್‌ಲೈಜೇಷನ್ ಸಿಸ್ಟಮ್ ಇಲ್ಲ ಔಷಧಿ ಇಲ್ಲ ಆಪರೇಷನ್ ಇಂಪ್ಲಿಮೆಂಟೇಷನ್ ಇಲ್ಲ, ವ್ಯಾನ್ ಮಾತ್ರ ಕೊಟ್ಟಿದ್ದಾರೆ. ವ್ಯಾನ್ ಮಾತ್ರ ಬಹಳ ಚೆನ್ನಾಗಿದೆ. ನನ್ನ ಅದೃಷ್ಟ ಒಬ್ಬ ಡಾಕ್ಟರ್‌ಗೆ ಡ್ರೈವಿಂಗ್ ಬರುತ್ತಿತ್ತು, ಆಗ ಅವನನ್ನು ಕರೆದುಕೊಂಡು ಹೋಗಿ ನಾವೇ ಔಷಧಿ ಖರ್ಚು ಕೊಟ್ಟು ಚಿಕಿತ್ಸೆ ಮಾಡಿಸಿಕೊಂಡು ನಿಮಗೆ ವಂದನೆ ಸಲ್ಲಿಸಿದೆ. ಈ ರೀತಿ ಆದರೆ ದನಗಳ ರೋಗ ನಿವಾರಣೆ ಮಾಡಿ, ಅವುಗಳ ಆರೋಗ್ಯ ಕಪಾಡಿಕೊಳ್ಳತಕ್ಕ ಸಾಮರ್ಥ್ಯ ನಿಮ್ಮ ಇಲಾಖೆಯಲ್ಲಿ ಹುಟ್ಟಿಸುತ್ತೀರಾ ದಯವಿಟ್ಟು ಹೇಳಿ ಈಗ ತಾವು ೧೩೬೫ ಆಸ್ಪತ್ರೆ ಇದೆ ಅಂಥ ಕೊಟ್ಟಿದ್ದೀರಿ, ನಾನು ಒಪ್ಪುತ್ತೇನೆ ಎಷ್ಟೋ ಆಸ್ಪತ್ರೆಗಳಲ್ಲಿ ಡಾಕ್ಟರುಗಳು ಇಲ್ಲ. ಇನ್ನು ಆರ್. ವಿ. ಡಿ. ಗೆ ನೀವು ಡಾಕ್ಟರ್ ಕೊಡಬೇಕು ಕೊಟ್ಟಿಲ್ಲ. ಇನ್ನು ೪೦೦ ವೈದ್ಯರನ್ನು ತೆಗೆದುಕೊಳ್ಳುತ್ತೇವೆಂದು ಅಡ್ವರ್‌ಟೈಸ್ ಮಾಡಿ ಅರ್ಜಿಗಳನ್ನು ಕರೆದರೂ ಬಗ್ಗೆ ಇನ್ನೂ ರೆಕ್ರೂಟ್‌ಮೆಂಟ್ ಮಾಡಿಲ್ಲ, ಇನ್ನು ಲೈವ್‌ಸ್ಟಾಕ್ ಇನ್ಸ್‌ಪೆಕ್ಟರ್, ಎಕ್ಸ್‌ಟೆನ್‌ಷನ್ ಆಫೀಸರ್ ಮಾಡುತ್ತೇವೆಂದು ಹೇಳಿದಿರಿ, ಅದಕ್ಕೆಲ್ಲಾ ಅರ್ಜಿಗಳನ್ನು ತರಿಸಿಕೊಂಡಿರಿ, ಸಮಾಲೋಚನೆ ಮಾಡಿದಿರಿ, ನೀವು ಸಮಾಧಾನವಾಗಿ ಅದನ್ನು ಹಾಗೆ ಇಟ್ಟರಿ, ಅಡ್ಮಿನಿಸ್ಟ್ರೇಷನ್ ಎಲ್ಲಾ ತಡವಾಗಿ ಆದರೆ, ಈ ದನಗಳ ಉಸ್ತುವಾರಿ ಮಾಡತಕ್ಕ ತಿಳಿದಂಥ ಮನುಷ್ಯರು ನಿಮಗೆ ಎಲ್ಲಿ ಸಿಕ್ಕುತ್ತಾರೆ ? ಇದುವರೆಗೂ ಲೈವ್‌ಸ್ಟಾಕ್ ಇನ್ಸ್‌ಪೆಕ್ಟರ್ ಸೆಲೆಕ್ಟ್ ಮಾಡಲಿಲ್ಲ, ಲೈವ್‌ಸ್ಟಾಕ್ ಇನ್ಸ್‌ಪೆಕ್ಟರ್ ಎಕ್ಸ್‌ಟೆಷನ್ ಆಫೀಸರ್ ಮಾಡುತ್ತೇವೆ ಅಂಥ ಹೇಳಿದಿರಿ, ಅದನ್ನು ಮಾಡಲಿಲ್ಲ, ಇನ್ನು ವೈದ್ಯರನ್ನು ಅಡ್ವರ್‌ಟೈಸ್ ಮಾಡಿ

ಕರೆಯುತ್ತೇವೆಂದು ಹೇಳಿದಿರಿ, ಅದನ್ನು ಮಾಡಲಿಲ್ಲ. ನೆನ್ನೆ ಮಾನ್ಯ ಅಧ್ಯಕ್ಷರು ಭರವಸೆ ಕೊಟ್ಟರು. ನಾನು ಟೀಕೆ ಮಾಡುತ್ತೇನೆ ಅಂಥ ತಪ್ಪು ತಿಳಿದುಕೊಳ್ಳಬಾರದು ಕಾಲ್‌ಅಟೆನ್‌ಷನ್ ಮೇಲೆ ಆನ್ಸರ್ ಮಾಡಿ ಆಮೇಲೆ ಬೇಡಿಕೆ ಮೇಲೆ ಚರ್ಚೆ ಅಂಥ ಹೇಳಿದಿರಿ, ಕಾಲ್ ಅಟೆನ್‌ಷನ್ ೩ ಗಂಟೆಗೆ ಹಾಕಿ ಬೇಡಿಕೆ ಮೇಲೆ ಚರ್ಚೆ ಈಗಲೇ ತೆಗೆದುಕೊಂಡುಬಿಟ್ಟಿದ್ದೀರಿ, ಮಾನ್ಯ ಬಾಸ್ಕರ ನಾಯ್ಡು ಅವರು ಅರ್ಧ ಗಂಟೆ ಮಾತನಾಡಿದರು ಮಧ್ಯಾಹ್ನ ಕಾಲ್ ಅಟೆನ್‌ಷನ್ ಬರುತ್ತಿದೆ, ಇದು ಒಂದು ತರಹ ಕನ್‌ಫ್ಯೂಷನ್ ಆಗಿರುವುದರಿಂದ ಯಾರು ಏನು ಮಾಡಲಿಕ್ಕೆ ಆಗುವುದಿಲ್ಲ, ಇನ್ನು ಇವೊತ್ತು ಅಲ್ಲಿ ಹುಡುಗರು ಉಪ ವಾಸ ಸತ್ಯಾಗ್ರಹ ಮಾಡುತ್ತಿದ್ದಾರೆ. ಅವರ ಅವಶ್ಯಕತೆ ಏನಿದೆ ಎನ್ನುವುದು ತಮಗೆ ಗೊತ್ತಿದೆ. ಈಗಾಗಲೇ ನಮ್ಮ ರಾಜ್ಯದಲ್ಲಿ ಉತ್ಪತ್ತಿ ಮಾಡತಕ್ಕ ಡಾಕ್ಟರಂಗಳಲ್ಲಿ ಶೇಕಡಾ ೫೦ ಭಾಗ ಗುಜರಾತ್ ಮತ್ತು ಮಹಾರಾಷ್ಟ್ರಕ್ಕೆ ಹೋಗುತ್ತಾರೆ, ಅಲ್ಲಿ ಹೆಚ್ಚಿನ ಸಂಬಳ ಮತ್ತು ಅನುಕೂಲ ಕೊಡುತ್ತಾರೆ. ನೀವು ಏನೂ ಕೊಡುವುದಿಲ್ಲ ನಿಮ್ಮಲ್ಲಿ ೬೦ ಜನ ಡಾಕ್ಟರುಗಳನ್ನು ತಯಾರು ಮಾಡಿದರೆ, ನಿಮಗೆ ಸಿಕ್ಕು ವವರು ೩೦ ಜನ ಮಾತ್ರ, ಅವರು ಯಾರು ಅಂದರೆ ನನ್ನಂಥ ದಡ್ಡರು, ಹಸು ಎಮ್ಮೆ ಅಂಥ ಹೇಳುವ ವರು, ಎಮ್ಮೆಯನ್ನು ಕರು ಅಂಥ ಹೇಳುವವರು ಒಳ್ಳೆಯವರೆಲ್ಲಾ ರಾಜ್ಯದಿಂದ ಹೊರಗಡೆ ಹೋಗು ತ್ತಾರೆ, ಅಲ್ಲಿ ಅವರು ಒಳ್ಳೆಯ ಸಂಬಳ ತೆಗೆದುಕೊಂಡು ಚೆನ್ನಾಗಿ ಇರುತ್ತಾರೆ. ನಾವು ನೀವು ಇಲ್ಲಿ ಕಷ್ಟ ಪಡಬೇಕಾಗಿದೆ. ಇವೊತ್ತು ವೈದ್ಯರಿಲ್ಲದೆ ನೀವು ಏನು ಮಾಡಲಿಕ್ಕೆ ಆಗುತ್ತದೆ ಇನ್ನು ತಾವು ೫೦೦ ಹಸು ಗಳು ಇರುವ ಕಡೆ ಆರ್ಟಿಫಿಷಿಯಲ್ ಇನ್‌ಸೆಮಿನೇಷನ್ ಸೆಂಟರ್ ಅಂಥ ಕೊಟ್ಟಿದ್ದೀರಿ. ಅಲ್ಲಿ ಸೆಮನ್ ಮತ್ತು ಇನ್‌ಸೆಮಿನೇಷನ್ ಮಾಡತಕ್ಕ ಒಬ್ಬ ಅಧಿಕಾರಿ ಇಲ್ಲದೆ ಮೇಲೆ ಆದರಿಂದ ಏನು ಪ್ರಯೋಜನ? ಇನ್ನು ನಮ್ಮ ತಾಲ್ಲೂಕಿನಲ್ಲಿ ದೊಡ್ಡ ತುಮಕೂರು ಇದೆ. ನೀವು ಮಂತ್ರಿಗಳಾದಾಗಿನಿಂದಲೂ ಕೇಳು ತ್ತಿದ್ದೇನೆ ಅಲ್ಲಿ ಒಬ್ಬರು ಡಾಕ್ಟರ್ ಕೊಡಿ ಎಂದು ನೀವು ಕೊಟ್ಟಿಲ್ಲ. ಅದು ಏನೋ ಗೊತ್ತಿಲ್ಲ, ಅದು ನನ್ನ ಕಾನ್‌ಸ್ಟಿಟ್ಯುಯೆನ್ಸಿ ಇನ್ನು ಶ್ರೀಮಾನ್ ಪ್ರಭಾಕರ್ ತಾಲ್ಲೂಕ್‌ನಲ್ಲಿಯೂ ಕೊಟ್ಟಿಲ್ಲ- ಮಾನ್ಯ ಪ್ರಭಾಕರ್ ಅವರು ಹೇಗೆ ಅಂದರೆ ವಿನೋಬಾಜಿ ಶಿಷ್ಯರು ಅವರು ಏನು ಹೇಳಿದ್ದಾರೆ ಅಂದರೆ ಹಸುಗಳಿಗೆ ಭಗವಂತ ಕೊಟ್ಟಿರತಕ್ಕ ವ್ಯವಸ್ಥೆ ಹೋರಿಯಿಂದ ಗರ್ಭ ಕಟ್ಟಬೇಕು ನೀವು ಆರ್ಟಿಫಿಷಿಯಲ್ ಇನ್‌ಸೆಮಿನೇಷನ್ ಮಾಡಬೇಡಿ ಅಂಥ ಹೇಳಿದ್ದಾರೆ ಅವರ ಮಾತಿಗೆ ವಿರುದ್ಧವಾಗಿ ಇನ್‌ಸೆಮಿನೇಷನ್ ಮಾಡುತ್ತಿದ್ದಾರೆ. ನಾನು ೬೦ ದಿನ ಮಂತ್ರಿಯಾಗಿದ್ದೆ. ಎಷ್ಟು ಆಸ್ಪತ್ರೆಗಳನ್ನು ಕೊಟ್ಟಿದ್ದೇವೆ. ನನ್ನ ತಾಲ್ಲೂಕಿನಲ್ಲಿ ರಾಜುಗಟ್ಟದಲ್ಲಿ ಒಂದು ಆಸ್ಪತ್ರೆ ಕಟ್ಟಿಸಿದೆ, ಕೊನೇಹಳ್ಳಿಯಲ್ಲಿ ಒಂದು ಆಸ್ಪತ್ರೆ ಕೊಡಿ ಸಿದೆ. ಇವೊತ್ತು ಅಲ್ಲಿ ಒಬ್ಬ ಡಾಕ್ಟರ್ ಇಲ್ಲ, ಲೈವ್‌ಸ್ಟಾಕ್ ಇನ್ಸ್‌ಪೆಕ್ಟರ್ ಇಲ್ಲ.

ನೀವು ನಮ್ಮಕಡೆ ಟೂರ್ ಬಂದಿದ್ದಾಗ ಕೂಡ ನಿಮ್ಮನ್ನು ಆ ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದೆ. ನೀವೂ ನೋಡಿ ಆನಂದಪಟ್ಟಿರಿ ; ಅನಂತರ ಅಲ್ಲೇ ಮರೆತುಬಿಟ್ಟಿರಿ. ಯಾರನ್ನೂ ಅಲ್ಲಿಗೆ ಪೋಸ್ಟ್ ಮಾಡಲಿಲ್ಲ. ನಾನು ಮಂತ್ರಿಯಾಗಿದ್ದಾಗ ಸಾಸಲಿಗೆ ಒಂದು ಆಸ್ಪತ್ರೆಯನ್ನು ಕೊಟ್ಟೆ. ಅಲ್ಲಿ ಇನ್‌ಸೆಮಿ ನೇಷನ್ ವ್ಯವಸ್ಥೆ ಆಯಿತು. ಅಲ್ಲಿಗೂ ಕೂಡ ಒಬ್ಬ ಡಾಕ್ಟರ್ ಇಲ್ಲ. ಹಾಗಾದರೆ ನೀವು ಹೇಗೆ ನಮ್ಮ ದನಗಳನ್ನು ಕಾಪಾಡುತ್ತೀರಿ ? ವೈದ್ಯರಿಲ್ಲದೆ ದನಗಳನ್ನು ಕಾಪಾಡುವುದಕ್ಕೆ ಆಗುತ್ತದೆಯೆ ? ನೀವೂ, ನಾವೂ ಇಂಜೆಕ್ಷನ್ ಕೊಡುವುದಕ್ಕೆ ಆಗುತ್ತದೆಯೆ ? ಅವುಗಳಿಗೆ ಖಾಯಿಲೆ ಏನು ಎಂಬುದನ್ನು ಕಂಡು ಹಿಡಿಯುವುದಕ್ಕೆ ಆಗುತ್ತದೆಯೆ ? ಈಗಿರತಕ್ಕ ಆಸ್ಪತ್ರೆಗಳಲ್ಲಿ ಎಲ್ಲಾದರೂ ಆಂಟಿ-ಬಯಾಟಿಕ್ ಇದ್ದರೆ ತೋರಿಸುತ್ತೀರಾ ? ಟಿಂಚರ್ ಕೂಡ ಇಲ್ಲ. ಅಲ್ಲಿ ಎಷ್ಟು ದನಗಳಿವೆ ? ಎಷ್ಟು ದುಡ್ಡು ಖರ್ಚು ಮಾಡುತ್ತಿದ್ದೀರಿ ? ಎಷ್ಟು ಔಷಧಿ ಕೊಡುತ್ತಿದ್ದೀರಿ ? ಎನ್ನುವ ಲೆಕ್ಕ ಏನಾದರೂ ತಮ್ಮ ಹತ್ತಿರ ಇದೆಯೆ ? ನಿಮ್ಮ ಹೇಳಿಕೆಯ ಪ್ರಕಾರವೇ ಒಂದೊಂದು ಸೊಸೈಟಿಗೆ ೫೦೦ ಹಸುಗಳಂತೆ ಇಟ್ಟೆವು. ದೊಡ್ಡ ಬಳ್ಳಾಪುರದಲ್ಲಿ ಹೆಚ್ಚಿಗೆ ಹಾಲನ್ನು ಉತ್ಪತ್ತಿ ಮಾಡುತ್ತಿದ್ದೇವೆ. ಅಲ್ಲಿ ೧೦ ಸಾವಿರ ಲೀಟರ್ ಹಿಡಿಯತಕ್ಕ ಒಂದು ಕೋಲ್ಡ್ ಸ್ಟೋರೇಜ್‌ನ್ನು ಮಾಡಿದಿರಿ. ದನಗಳ ಬಗ್ಗೆ ಅಪಾರ ಆಸಕ್ತಿಯನ್ನು ಹೊಂದಿದ್ದ ದಿ॥ ಎಂ. ವಿ. ಕೃಷ್ಣಪ್ಪನವರು ಎಲೆಕ್ಷನ್‌ಗೆ ನಿಂತು ಸೋತರು, ಈಗ ಸ್ವರ್ಗದಲ್ಲಿದ್ದಾರೆ. ಅವರು ಮೂಕಜೀವಿಗಳ ಬಗ್ಗೆ ಇಟ್ಟುಕೊಂಡಿದ್ದ ಪ್ರೀತಿಗಾದರೂ ಆ ಸ್ಟೋರೇಜನ್ನು ದೊಡ್ಡದು ಮಾಡಿ ಸ್ವರ್ಗದಲ್ಲಿರುವ ಅವರ ಮನಸ್ಸಿಗಾದರೂ ಸಂತೋಷವನ್ನುಂಟುಮಾಡಿ. ನಮ್ಮ ತಾಲ್ಲೂಕಿನ ಅನೇಕ ಸೊಸೈಟಿಗಳಿಂದ ಬೆಂಗಳೂರು ಡೈರಿಗೆ ಹಾಲನ್ನು ಸಾಗಿಸುತ್ತಿದ್ದೀರಿ. ಅನೇಕ ಸಂದರ್ಭಗಳಲ್ಲಿ ಆಗತಕ್ಕ ವಿಳಂಬದಿಂದಾಗಿ ಈ ಹಾಲು ಕೆಟ್ಟುಹೋಗುತ್ತದೆ. ಅದು ಸೊಸೈಟಿಯವರ ತಪ್ಪಲ್ಲ. ಆದರೂ ಆ ಸೊಸೈಟಿಯವರ ಮೇಲೆ ತಪ್ಪನ್ನು ಹಾಕಿದ್ದೀರಿ. ಅವರಮೇಲೆ ತಪ್ಪು ಹಾಕಿ ನಿಮ್ಮ ತಪ್ಪಿನಿಂದಾದ

ನಷ್ಟವನ್ನು ಅವರ ತಲೆಯಮೇಲೆ ಹೇರಿದರೆ ಅವರು ಹೇಗೆ ಸುಧಾರಿಸಿಕೊಳ್ಳಬೇಕು ? ಇದರ ಬಗ್ಗೆ ತಾವು ವಿವರಣೆ ಕೊಡಬೇಕು.

ಇನ್ನು ದನಗಳ ತಳಿ ಅಭಿವೃದ್ಧಿ ಬಗ್ಗೆ ಹೇಳುವುದಾದರೆ, ಅಜ್ಜಂಪುರದಲ್ಲಿ ಅಮೃತಮಹಲ್ ಹಾಗೂ ಹಳ್ಳಿಕಾರ್ ಜಾತಿಯ ಹಸುಗಳು ಇತ್ತೀಚೆಗೆ ಕಡಿಮೆಯಾಗುತ್ತಾ ಬರುತ್ತಿವೆ. ಈ ತಳಿಗಳು ಹಾಳಾದರೆ ಸ್ಮಾಲ್ ಫಾರರ್ಸ್ ಹಾಗೂ ಮಾರ್ಜಿನಲ್ ಫಾರ್ಮರ್ಸ್ ಯಾರಿದ್ದಾರೆ ಅವರೆಲ್ಲಾ ಹಾಳಾಗಿ ಹೋಗುತ್ತಾರೆ. ಈ ಅಮೃತಮಹಲ್ ತಳಿಗಳನ್ನು ಅವರು ಉಳುಮೆಗೆ, ಗಾಡಿಗೆ, ಹಾಗೂ ಇತರೇ ಕೆಲಸಗಳಿಗೆ ಉಪಯೋಗಿಸುತ್ತಾರೆ ಆದರೆ ಇವುಗಳ ತಳಿ ಅಭಿವೃದ್ಧಿಗೆ ಸರ್ಕಾರದವರು ಯೋಚನೆಯನ್ನೇ ಮಾಡುತ್ತಿಲ್ಲ. ಹೆಸರುಘಟ್ಟದಲ್ಲಿ ೧೦೦೦ ಹಳ್ಳಿಕಾರ್ ಹಸುಗಳನ್ನು ಸಾಕುತ್ತಿದ್ದು ಅವುಗಳ ತಳಿಯನ್ನು ಅಭಿವೃದ್ಧಿ ಮಾಡುತ್ತೇವೆಂದು ಹೇಳಿದಿರಿ. ಆದರೆ ನಿಮ್ಮ ವರದಿಯನ್ನೆಲ್ಲಾ ನಾಲ್ಕುಬಾರಿ ತಿರುವಿಹಾಕಿದರೂ ಅದು ಕಾಣುತ್ತಿಲ್ಲ. ಹೆಸರುಘಟ್ಟವಲ್ಲಿರುವುದನ್ನು ತೆಗೆದು ತುಮಕೂರಿನ ಹತ್ತಿರ ಇರತಕ್ಕ ಯಾವುದೋ ಒಂದು ಹಳ್ಳಿಗೆ ಬದಲಾಯಿಸಲು ಪ್ರಯತ್ನ ನಡೆಯುತ್ತಿದೆಯೆಂದು ಹೇಳಿದಿರಿ. ಈ ತಳಿ ಅಭಿವೃದ್ಧಿ ವಿಚಾರವನ್ನು ಒಂದುಕಡೆಗೆ ತಳ್ಳಿಹಾಕುವುದಕ್ಕೆ ನೋಡತ್ತಿದ್ದೀರಿ. ನಾನು ಮಂತ್ರಿಯಾಗಿದ್ದಾಗ ಮೊದಲು ಅಮೃತಮಹಲ್ ಕಾವಲಿಗೆ ಹೋಗಿ ಅಲ್ಲಿದ್ದ ದನಗಳನ್ನು ಎಣಿಸಿ, ಮೊದಲು ಎಷ್ಟು ಹಸು, ಎಷ್ಟು ಕರುಗಳು ಇದ್ದುವು, ಈಗ ಎಷ್ಟಿವೆ ಎಂಬುದನ್ನು ನೋಡಿ ಅದರಲ್ಲಿ ವ್ಯತ್ಯಾಸ ಕಂಡುಬಂದಿದ್ದರಿಂದ ಕೂಡಲೇ ಸಂಬಂಧಪಟ್ಟವನಿಗೆ ೧೫೦೦ ರೂಪಾಯಿಗಳ ದಂಡವನ್ನು ಹಾಕಿದ್ದೆ. ಆದರೆ ನೀವು ಮಂತ್ರಿಯಾದ ಮೇಲೆ ಅಲ್ಲಿಗೆ ಹೋಗಿ ಎಷ್ಟು ಹಸು ಮತ್ತು ಕರುಗಳನ್ನು ಎಣಿಸಿದ್ದೀರಿ ? ಒಂದು ದೊಡ್ಡ ಶೆಡ್‌ಕಟ್ಟಿ ಗರ್ಭ ಧರಿಸಿದ್ದ ಹಸುಗಳನ್ನೆಲ್ಲಾ ಅದರಲ್ಲಿ ಕಟ್ಟಿಹಾಕಿ ಅವುಗಳನ್ನು ಚೆನ್ನಾಗಿ ನೋಡಿಕೊಳ್ಳುವಂತೆ ವ್ಯವಸ್ಥೆ ಮಾಡಿದ್ದೆ. ಅದನ್ನು ನೀವು ಏನು ಮಾಡಿದಿರೋ ಗೊತ್ತಿಲ್ಲ ಅದೇರೀತಿ ಪಂಚಾಯಿತ್ ರಾಜ್ಯಗಳ ವಿಚಾರದಲ್ಲಿ ಮಾನ್ಯ ಪ್ರಭಾಕರ್‌ರವರೂ, ಪಶುಸಂಗೋಪನೆಯ ವಿಚಾರದಲ್ಲಿ ನಾನೂ ಮಾಡಿದ ಕೆಲಸಗಳೆಲ್ಲಾ ನೀರಿನಲ್ಲಿ ಕೊಚ್ಚಿ ಹೋದುವು. ಈ ಜಾತಿಯ ಹಸುಗಳು ಕರುಗಳನ್ನು ಹಾಕಿದಾಗ ಅವುಗಳ ಮೇಲ್ವಿಚಾರಣೆಯನ್ನು ನೋಡಿಕೊಳ್ಳಲು ನೇಮಿಸಲ್ಪಟ್ಟಿರುವ ಸಿಬ್ಬಂದಿಯವರು ಈ ಉತ್ತಮ ಜಾತಿಯ ಕರುಗಳನ್ನು ತಾವು ತೆಗೆದುಕೊಂಡು ಹೋಗಿ ಅವುಗಳ ಜಾಗದಲ್ಲಿ ಬೇರೆ ಜಾತಿಯ ಕರುಗಳನ್ನು ತಂದು ಕಟ್ಟುತ್ತಾರೆ. ಈ ಹಸುಗಳಿಗೆ ನಿಮ್ಮ ಇಲಾಖೆಯವರು ಕೃತಕ ಗರ್ಭಧಾರಣೆ ಮಾಡಿರುವುದು ೫೭೩ಕ್ಕೆ ಇವುಗಳಲ್ಲಿ ಹುಟ್ಟಿದ ಕರುಗಳು ೯೧, ಅಂದರೆ ಶೇಕಡ ೧೬ ಫಲಿತಾಂಶ ಬಂದಂತಾಯಿತು. ಇದಕ್ಕೆ ಕಾರಣ ಏನು ? ಇಷ್ಟು ಕಡಿಮೆ ಏತಕ್ಕೆ ಬಂತು ? ಎಂಬುದನ್ನು ತಿಳಿದು ಅದರಲ್ಲಿರತಕ್ಕ ತೊಂದರೆಯನ್ನು ತಪ್ಪಿಸುವುದಕ್ಕೆ ಪ್ರಯತ್ನ ಮಾಡಿ. ಕಾಬ್ರೆ ಇನ್ ಸೆಂಟರ್ ಅಂತ ಇತ್ತು. ಶ್ರೀಮಾನ್ ಚಿಕ್ಕೇಗೌಡರು ಬಹಳ ಶ್ರದ್ಧೆಯಿಂದ ಅದನ್ನು ಮಾಡಿದರು. ಅದು ಯಾವ ಸ್ಥಿತಿಯಲ್ಲಿದೆ ? ಅದು ಇನ್ನೂ ಇದೆಯೆ ? ಇದ್ದರೆ ಅದರ ಬಗ್ಗೆ ನಿಮ್ಮ ವರದಿಯಲ್ಲಿ ಏತಕ್ಕೆ ಕೊಟ್ಟಿಲ್ಲ ?

ಇನ್ನು ಬ್ಯಾಸ್ಕೊ ಎಂಬ ಒಂದು ಸಂಸ್ಥೆ ನಿಮ್ಮಲ್ಲಿದೆ. ಇದು ಸ್ಲಾಟರ್ ಹೌಸ್‌ನ ಸೂಪರ್‌ವಿಷನ್ ಮಾಡುತ್ತದೆ. ಯಶವಂತಪುರ ಸ್ಲಾಟರ್ ಹೌಸ್‌ಗೆ ತಾವು ಹೋಗಿದ್ದೀರೋ ಇಲ್ಲವೋ ಗೊತ್ತಿಲ್ಲ. ಹೋಗಿಲ್ಲದಿದ್ದರೆ ದಯವಿಟ್ಟು ನಾಳೆ ಬೆಳಿಗ್ಗೆ ಹೋಗಿ ನೋಡಿಕೊಂಡು ಬನ್ನಿ. ಅಲ್ಲಿನ ಗಲೀಜನ್ನು ನೋಡಿದರೆ ನಾವು ಅಲ್ಲಿಂದ ಮಾಂಸವನ್ನು ತಂದು ತಿನ್ನುವುದಕ್ಕೆ ಮನಸ್ಸೇ ಬರುವುದಿಲ್ಲ. ಮೊದಲು ಅದನ್ನು ಶುದ್ಧವಾದ ರೀತಿಯಲ್ಲಿ ಇಡುವುದಕ್ಕೆ ವ್ಯವಸ್ಥೆಮಾಡಿ. ಸ್ವಾಮಿ, ೧೨ ರೂಪಾಯಿಗಳು ಇದ್ದಂಥ ಮಾಂಸ ಇವತ್ತು ೨೫ ರೂಪಾಯಿಗಳಾಗಿದೆ ಕುರಿಗಳಿಗೆ ದೊಡ್ಡರೋಗ ಬಂದು ಅವುಗಳ ವಂಶ ಕಡಿಮೆಯಾಗುತ್ತಾ ಬರುತ್ತಿದೆ. ಸರ್ಕಾರದವರು ಏನು ಮಾಡುತ್ತಿದ್ದಾರೆಂದರೆ ಬನ್ನೂರು ಕುರಿ ಮತ್ತು ಉಣ್ಣೆ ಕೊಡತಕ್ಕ ಕುರಿಗಳನ್ನು ಸಾಕುತ್ತಿದ್ದಾರೆಯೇ ಹೊರತು ಮಾಂಸವನ್ನು ಕೊಡತಕ್ಕ ಕುರಿಗಳನ್ನು ಸಾಕುತ್ತಿಲ್ಲ ಸರ್ಕಾರದವರು ಕೊಟ್ಟಿರತಕ್ಕ ಅಂಕಿಅಂಶಗಳ ಪ್ರಕಾರ ೭೫ ರಿಂದ ೭೮ರವರೆಗೆ ಸುಮಾರು ೨ ಲಕ್ಷ ಕುರಿ ಕಡಿಮೆಯಾಗಿದೆಯಂತೆ. ಆದರೆ ನನ್ನ ಲೆಕ್ಕದ ಪ್ರಕಾರ ಸುಮಾರು ೧೦ ಲಕ್ಷ ಕುರಿಗಳು ಕಡಿಮೆಯಾಗಿವೆ. ಆದ್ದರಿಂದ ಇನ್ನು ಮುಂದಾದರೂ ಈ ಕುರಿಗಳ ಸಂಖ್ಯೆ ಕಡಿಮೆಯಾಗದಂತೆ ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಕ್ತ ತಿಳುವಳಿಕೆಯನ್ನು ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ಕಟ್ಟಡಗಳ ವಿಚಾರದಲ್ಲಿ ಹೇಳುವುದಾದರೆ ಸೀರಂ ಇನ್‌ಸ್ಟಿಟ್ಯೂಟ್‌ನಲ್ಲಿ ಒಂದು ಕಟ್ಟಡ ಕಟ್ಟಲು ಪ್ರಾರಂಭ ಮಾಡಿದರು. ೪ ವರ್ಷ ಕಳೆದರೂ ಇನ್ನೂ ಅದು ಪೂರ್ತಿಯಾಗಿಲ್ಲ. ಮಾನ್ಯ ಮುಖ್ಯಮಂತ್ರಿಯವರು ತಮ್ಮ ಆಫೀಸ್‌ನ್ನು ಎಷ್ಟು ದಿವಸದಲ್ಲಿ ಕಟ್ಟಿಸಿಕೊಂಡರು ಎಂಬುದನ್ನು ತಾವೇ

ನೋಡಿದ್ದೀರಿ. ಅದೇರೀತಿ ನೀವೂ ಮುತುವರ್ಜಿ ವಹಿಸಿ ಕೆಲಸಮಾಡಿಕೊಳ್ಳಬೇಕು ತಾವು ಈ ದಿಸೆಯಲ್ಲಿ ವೇಗವಾಗಿ ಮುನ್ನುಗ್ಗುವುದಾದರೆ ನಿಮಗೆ ಒಳ್ಳೆಯ ಹೆಸರು ಬರುತ್ತದೆ. ನಿಮಗೆ ಏನು ಕಷ್ಟವಿದೆ ? ನಿಮಗೆ ಹಣ ಇಲ್ಲವೆ ? ಕಂಟ್ರಾಕ್ಟರ್‌ಗಳು ಇಲ್ಲವೆ ? ಬೇರೆ ಸಿಬ್ಬಂದಿ ಇಲ್ಲವೆ ? ಸೂಪರ್ ವಿಷನ್ ಮಾಡುವವರು ಇಲ್ಲವೆ ? ನಿಮಗೆ ಯಾವುದರಲ್ಲಿ ಕಡಿಮೆಯಾಗಿದೆ.

ಮಾನ್ಯ ಅಧ್ಯಕ್ಷರೆ, ನಾನು ಪ್ರತಿದಿನ ರಾಜಾನುಕುಂಟೆಯಿಂದ ಬರುವ ದಾರಿಯಲ್ಲಿ ನೋಡುತ್ತಿದ್ದೇನೆ. ದನಗಳಿಗೆ ತಿಂಡಿ ತಯಾರು ಮಾಡತಕ್ಕ ಫ್ಯಾಕ್ಟರಿ ಇನ್ನೂ ತಯಾರು ಆಗಲಿಲ್ಲ. ಅಲ್ಲಿ ಯಾವಾಗ ದನಗಳ ತಿಂಡಿಯನ್ನು ತಯಾರು ಮಾಡಿ ಗೋಪಾಲಕರಿಗೆ ಕೊಡುತ್ತೀರೋ ಗೊತ್ತಿಲ್ಲ. ಅವರಿಗೆ ಸಬ್ಸಿಡಿಯನ್ನು ಯಾವಾಗ ಕೊಡುತ್ತೀರೋ ಗೊತ್ತಿಲ್ಲ. ಗೋಪಾಲಕರಿಗೆ ೩೩ ಪರ್ಸೆಂಟ್ ಸಬ್ಸಿಡಿ ಕೊಡುತ್ತೇವೆಂದು ಕಳೆದಸಾರಿಯೇ ತಮ್ಮ ಅಮೃತವಾಣಿಯಲ್ಲಿ ಹೇಳಿದ್ದೀರಿ. ಈಗ ಅದು ಏನಾಗಿದೆ ? ಸ್ವಾಮಿ, ಹಾಲಿನಿಂದ ಪುಡಿ ಮಾಡತಕ್ಕ ಫ್ಯಾಕ್ಟರಿ ಧಾರವಾಡ, ಮಂಡ್ಯ, ಬೆಂಗಳೂರಿನಲ್ಲಿ ಮಾಡುತ್ತಿದ್ದೀರಿ ; ಆದರೆ ಹಾಲೇ ಇಲ್ಲ. ನಿಮ್ಮ ಅಂಕಿಅಂಶದ ಪ್ರಕಾರ ಲಕ್ಷಗಟ್ಟಲೆ ಲೀಟರ್ ಹಾಲು ಕಡಿಮೆ ಇದೆ. ಹಾಲಿನ ಹೊಳೆಯನ್ನು ವಿಧಾನ ಸೌಧದ ಮುಂದೆ ಹರಿಸುತ್ತೇವೆಂದು ಹೇಳಿದರು, ನಾನು ನೋಡೋಣವೆಂದು ಹೊರಗೆ ಹೋದರೆ ಎಲ್ಲೂ ಕಾಣಲಿಲ್ಲ.

ಕು : ಎಸ್. ಪ್ರಮಿಳ.—ಇನ್ನುಮೇಲೆ ಹಾಲಿನ ಹೊಳೆ ಹರಿಯುತ್ತದೆ......

ಶ್ರೀ ಜಿ. ರಾಮೇಗೌಡ.—೪ ಜಿಲ್ಲೆಗಳಲ್ಲಿ ಲಕ್ಷಾಂತರ ಲೀಟರ್ ಕಡಿಮೆಯಾಗುವುದಕ್ಕೆ ಕಾರಣ ವೇನು ? ಬೆಂಗಳೂರಿನ ಹಾಲು ವಿತರಣೆ ೨.೫೦ ಲಕ್ಷ ಲೀಟರ್, ಆದರೆ ಕಲೆಕ್ಷನ್ ಮಾತ್ರ ೮೦ ಸಾವಿರ ಲೀಟರ್. ಹಾಗಾದರೆ ಉಳಿದುದನ್ನು ಎಲ್ಲಿಂದ ತರುತ್ತೀರಿ ?

ನನ್ನ ಒಬ್ಬ ಸ್ನೇಹಿತರು ಬಸವನ ಗುಡಿಯಲ್ಲಿ ಇದ್ದಾರೆ. ಒಂದು ದಿವಸ ಅವರೂ ನಾನು ಮಾತನಾಡುತ್ತಿರುವಾಗ ಅವರು ಹೇಳಿದರು, ನೋಡಿ ಸ್ವಾಮಿ, ನನ್ನ ಮಕ್ಕಳು ಡೈರಿ ಡಬ್ಬದ ಹಾಲನ್ನು ಕುಡಿದು ಹೀಗೆ ಇದ್ದಾರೆ, ಕೈಕಾಲು ಸಣ್ಣ ಹೊಟ್ಟೆ ದುಬ್ಬಣ್ಣ ಎಂದ ಹಾಗೆ, ಹೀಗೆ ಇದ್ದರೆ ಅವರು ಹೇಗೆ ಮುಂದಕ್ಕೆ ಬನ್ನಿ ಎಂದರೆ ಬರುತ್ತಾರೆ ? ಸ್ವಾಮಿ ನೀವು ತಿಳಿದುಕೊಂಡಿದ್ದೀರೋ ಇಲ್ಲವೋ ಬರುವುದು ಒಂದು ಲೀಟರ್ ಹಾಲು, ಅದನ್ನು ಎರಡು ಲೀಟರ್ ಹಾಲು ಮಾಡಿಕೊಡುತ್ತಿದ್ದಾರೆ. ನಿಮಗೆ ಅನುಭವ ಇದೆಯೋ ಇಲ್ಲವೋ ; ಕಾಕ್ ಟೈಲ್ ಡಿನ್ನರ್ ಇದ್ದಹಾಗೆ, ಡೈರಿಗೆ ೨-೩ ವ್ಯಾನ್ ಹಾಲು ಬರುತ್ತದೆ. ನಮಗೆ ಕೊಡತಕ್ಕಂಥ ಹಾಲನ್ನು ಯಾವರೀತಿ ತಯಾರು ಮಾಡುತ್ತಾರೆಂದರೆ ಕಾದ ಬಿಸಿನೀರು, ಪೌಡರ್ ಹಾಲು ಜೊತೆಗೆ ಯಾವುದಾದರೂ ರೀಫೈನ್ಡ್ ಆಯಿಲ್ ಇದು ಬಿಟ್ಟರೆ ಯಾವುದೋ ಒಂದು ಆಯಿಲ್ ಇವು ಎಲ್ಲವನ್ನು ಹಾಕಿ ತಜ್ಞರು ಸೇರಿಕೊಂಡು ತಯಾರು ಮಾಡುತ್ತಾರೆ. ಅಜ್ಞಾನಿಗಳು ಸೇರಿಕೊಂಡು ಹಾಲು ಮಾಡುತ್ತಾರೆಂದರು. ಅವರು ಬಹಳ ಅನುಭವಸ್ಥರು. ನಾನು ಏನು ಹೇಳಲಿಕ್ಕೆ ಆಗಲಿಲ್ಲ. ನಾನು ಸರ್ಕಾರದಲ್ಲಿ ಒಂದು ಭಾಗ, ಎಂ.ಎಲ್.ಎ. ಆಗಿದ್ದೇನೆ. ನಮ್ಮ ಕೈಯಲ್ಲಿ ಏನೂ ಆಗುವುದಿಲ್ಲ. ಸಂಸ್ಥೆಗಳು ಇರುವುದು ಅಲ್ಲಾವುದ್ದೀನ್ ೪೦ ಮಂದಿ ಕಳ್ಳರು ಇದ್ದಹಾಗೆ ಈ ಸಂಸ್ಥೆಗಳಲ್ಲಿ ಏನು ನಡೆಯುತ್ತಿದೆ ಎನ್ನುವುದು ನಿಮಗೆ ಗೊತ್ತಾಗುವುದಿಲ್ಲ. ನಿಮ್ಮ ಕೈಯಲ್ಲಿ ಏನೂ ಆಗುವುದಿಲ್ಲ ಅವರು ಹೇಳಿದನ್ನು ಹೇಳಿಬಿಟ್ಟೆ. ಇದರಲ್ಲಿ ಎಷ್ಟು ಕಳ್ಳತನ ನಡೆಯುತ್ತಿದೆ, ಎಲ್ಲೆಲ್ಲಿ ಕಳ್ಳತನ ನಡೆಯುತ್ತಿದೆ ಎನ್ನುವುದೇ ಗೊತ್ತಿಲ್ಲ. ಹಾಲು ಬರುವಾಗ ಹಾಲಿನ ವ್ಯಾನ್ ನಡೆಸುವವರೇ ಎರಡರಿಂದ ಐದು ಲೀಟರ್ ವರೆಗೆ ಹಾಲನ್ನು ಮಾರಿಬಿಡುತ್ತಾರೆ. ಈ ರೀತಿ ನಡೆಯುತ್ತಿರುವ ಅಕ್ರಮಗಳು, ಇದನ್ನು ಸರಿಮಾಡುವುದಕ್ಕೆ ಯಾರ ಕೈಯಲ್ಲೂ ಆಗುವುದಿಲ್ಲ.ರಾಮಕೃಷ್ಣರಲ್ಲ, ಸಾಕ್ಷಾತ್ ರಾಮಚಂದ್ರನೇಬಂದರೂ ಆಗುವುದಿಲ್ಲ. ಇದು ಸಾರ್ವಜನಿಕರ ಅಭಿಪ್ರಾಯ. ನಿಮ್ಮ ಮುಂದೆ ಇಟ್ಟಿದ್ದೇನೆ. ನೀವುಏನು ಬೇಕಾದರೂ ಮಾಡಿ ಅದು ನಿಮಗೆ ಬಿಟ್ಟಿದ್ದು.

ಆಮೇಲೆ ಇನ್ನೊಂದು ವಿಚಾರ ನಾನು ತಮ್ಮಲ್ಲಿ ಕೇಳಿಕೊಳ್ಳುವುದೇನೆಂದರೆ ಹೇಸರಘಟ್ಟದಲ್ಲಿ ಟ್ರೈನಿಂಗ್ ಸೆಂಟರ್ ಎಂದು ಇದೆ. ಅಲ್ಲಿ ೨೫ ಜನರಿಗೆ ಟ್ರೈನಿಂಗ್ ಕೊಟ್ಟಿದ್ದಾರೆ. ಹುಲ್ಲು ಬೆಳೆಸುವುದು ಹೇಗೆ, ಹಾಲನ್ನು ಕರೆಯುವುದು ಹೇಗೆ ಎಂದು ; ಹೀಗೆ ಟ್ರೈನಿಂಗ್ ಕೊಟ್ಟಿರತಕ್ಕಂಥವರಲ್ಲಿ ಎಷ್ಟು ಜನ ಮಹಿಳೆಯರು ಇದ್ದಾರೆ ? ಮಹಿಳೆಯರಿಗೆ ಟ್ರೈನಿಂಗ್ ಕೊಡುವುದನ್ನು ಏತಕ್ಕೆ ಬಿಟ್ಟಿರಿ ? ಕುಮಾರಿ ಪ್ರಮಿಳಾರವರು ಏತಕ್ಕೆ ಇದನ್ನು ಕೇಳುವುದನ್ನು ಬಿಟ್ಟರು ? ಅವರು ಇದನ್ನು ಕೇಳಲೇ ಇಲ್ಲ.

ಕುಮಾರಿ ಎಸ್. ಪ್ರಮಿಳ.—ನಿಮ್ಮನ್ನೇ ಎಲ್ಲ ಕೇಳಲಿ ಎಂದು ಬಿಟ್ಟೆ.

ಶ್ರೀ ಜಿ ರಾಮೇಗೌಡ.—ನನ್ನನ್ನೇ ಹೇಳಲಿ ಎಂದು ಬಿಟ್ಟಿದ್ದಾರೆ. ಒಳ್ಳೆಯದು. ಇದರಲ್ಲಿ ಎಷ್ಟು ಜನ ಮಹಿಳೆಯರಿಗೆ ಟ್ರೈನಿಂಗ್ ಕೊಟ್ಟಿದ್ದೀರಿ ? ಗಂಡಸರೇ ಯಾವಾಗಲೂ ಹಸುವಿನ ಹತ್ತಿರ ಕುಳಿತು ಕೊಂಡಿರುವುದಕ್ಕೆ ಸಾಧ್ಯವೇ. ಹೆಣ್ಣು ಮಕ್ಕಳು ಮುಂದಾಗಿ ಟ್ರೈನಿಂಗ್‌ಗೆ ಬರಬೇಕು. ಗಂಡಸರಿಗೆ ಟ್ರೈನಿಂಗ್ ಕೊಟ್ಟಹಾಗೆ ಹೆಣ್ಣುಮಕ್ಕಳಿಗೂ ಟ್ರೈನಿಂಗ್ ಕೊಡಬೇಕು ಎನ್ನುವ ಬುದ್ಧಿ ನಿಮಗೆ ಏತಕ್ಕೆ ಕೊಡಲಿಲ್ಲ ? ದಯವಿಟ್ಟು ಇದನ್ನು ಹೇಳಬೇಕು ಎನ್ನುವ ಬುದ್ಧಿ ನಿಮಗೆ ಏತಕ್ಕೆ ಕೊಡಲಿಲ್ಲ ? ದಯ ವಿಟ್ಟು ಇದನ್ನು ಹೇಳಬೇಕು. ಇದನ್ನು ಮೊದಲು ಮಾಡಿ. ಆಮೇಲೆ ಇನ್ನೊಂದು ತಮ್ಮಲ್ಲಿ ಅರಿಕೆ ಇದೆ. ಈಗ ತಾವು ತಯಾರು ಮಾಡತಕ್ಕಂಥ ಕಾನ್‌ಸೆಂಟ್ರೇಷನ್ ಬರುವುದಕ್ಕೆ ಎಷ್ಟು ದಿವಸ ಬೇಕಾಗು ತ್ತದೋ ಹೇಳುವುದಕ್ಕೆ ಆಗುವುದಿಲ್ಲ. ಇನ್ನು ಬೂಸಾ ಬಗ್ಗೆ ಹೇಳುವುದಾದರೆ ಒಳಗಡೆ ಇರುವ ಆಹಾರ ಪದಾರ್ಥಕ್ಕಿಂತ ಅದರ ಮೇಲಿನ ಹೊಟ್ಟಿಗೆ ಬೆಲೆ ಜಾಸ್ತಿಯಾತರುತ್ತದೆ. ಇದರ ಬಗ್ಗೆ ನೀವು ಏತಕ್ಕೆ ವಿಚಾರ ಮಾಡುತ್ತಿಲ್ಲ. ನೀವು ಹಸುವನ್ನು ಸಾಕಿದ್ದಿದ್ದರೆ ನಿಮಗೆ ಅರ್ಥವಾಗುತ್ತಿತ್ತು. ನೀವು ಹಸುವನ್ನು ಸಾಕಿಲ್ಲ. ಕುರಿಗಳನ್ನು ಸಾಕಿದ್ದಿರೋ ? ಮೂವತ್ತು ಕುರಿಗಳನ್ನು ಸಾಕಿದ್ದೇನೆಂದು ಹೇಳಿದ್ದೀರಿ, ಈವತ್ತು ಮೂವತ್ತು ಇದ್ದಾವೋ ? ಮೂರು ಇದ್ದಾವೋ ?

ಶ್ರೀ ವೈ. ರಾಮಕೃಷ್ಣ.—ಮೂವತ್ತು ಇದ್ದಾವೆ.

ಶ್ರೀ ಜಿ ರಾಮೇಗೌಡ.—ಇರಲಿ ಸಂತೋಷ. ಅವುಗಳನ್ನು ಸಾಕುವುದಕ್ಕೆ ಅದಕ್ಕೆ ಬೇಕಾದಂಥ ಸಲ ಕರಣೆಗಳನ್ನು ಕೊಡದಿದ್ದರೆ ನಾವು ದನಗಳನ್ನು ಸಾಕುವುದಕ್ಕೆ ಸಾಧ್ಯವಾಗುವುದಿಲ್ಲ.. ಆದ್ದರಿಂದ ತಾವು ದೊಡ್ಡ ಮನಸ್ಸುಮಾಡಿ ಈ ವಿಚಾರದಲ್ಲಿ ಗಮನವನ್ನು ಕೊಡಬೇಕು. ಈ ಕೆ.ಡಿ.ಡಿ.ಸಿ ಬಂದಮೇಲೆ ಹಳ್ಳಿಗಾಡಿನಲ್ಲಿರತಕ್ಕಂಥ ಬಡರೈತರು ಉದ್ಧಾರವಾಗಿ ಬಿಡುತ್ತೇವೆಂದು ನಂಬಿಕೊಂಡಿದ್ದರು. ಅದು ಖಂಡಿತವಾಗಿಯೂ ಆಗಲಿಲ್ಲ. ನಮ್ಮ ಮೈನ್ ಡೈರಿ ಪ್ರಾರಂಭೋತ್ಸವವನ್ನು ಹಿಂದೆ ಪ್ರಧಾನಿಯಾಗಿ ಇದ್ದಂಥ ದಿ॥ ಶ್ರೀಮಾನ್ ಲಾಲ್‌ಬಹದ್ದೂರ್ ಶಾಸ್ತ್ರಿಯವರು ನೆರವೇರಿಸಿದರು. ಅಲ್ಲಿ ಕುಳಿತಿದ್ದ ಜನತೆ ಯನ್ನು ಕುರಿತು ಬೆಂಗಳೂರು ನಗರದಲ್ಲಿರತಕ್ಕಂಥ ಜನರಿಗೆ ಹಾಲನ್ನು ಸಪ್ಲೈಮಾಡುವುದಕ್ಕೆ ಮಾತ್ರ ಮಾಡುತ್ತಾರೆಂದು ತಿಳಿದುಕೊಳ್ಳಬಾರದು. ಹಳ್ಳಿಗಳಲ್ಲಿ ಇರತಕ್ಕಂಥ ಬಡರೈತರ ಆರ್ಥಿಕ ಪರಿಸ್ಥಿತಿ ಉತ್ತಮವಾಗಿ ಬೆಳೆದು ಅವರು ಉದ್ಧಾರವಾಗಬೇಕು ಎನ್ನುವ ಘನ ಉದ್ದೇಶ ಇರಬೇಕು ಎಂದು ಹೇಳಿದರು. ಆದರೆ ನಾವು ನೋಡಿದರೆ ಶ್ರೀ ರಾಮದೇವ್‌ರವರು, ಶ್ರೀ ಲಕ್ಷ್ಮೀಸಾಗರ್‌ನವರು ದಿಗಿಲು ಬೀಳುತ್ತಾರೆ. ಏಕೆಂದರೆ ಹಾಲಿನ ರೇಟ್ ಜಾಸ್ತಿಯಾಗಿಹೋಯಿತು ಹಾಗೆ ಹೀಗೆ ಎಂದು ಹೇಳುತ್ತಾರೆ. ಅವರಿಗೆ ಸ್ವಲ್ಪ ಸಬ್ಸಿಡಿ ಕೊಡಿ. ಕೊಟ್ಟರೆ ಏನಾಗುತ್ತದೆ ನಾನು ತಮ್ಮನ್ನು ಭೇಟಿಯಾದಮೇಲೆ ಹಾಲಿನ ವಿಚಾರ ಮಾತನಾಡಲೇಬಾರದೆಂದು ಅನಿಸುತ್ತದೆ. ಫೆಡರೇಷನ್‌ನವರು ಮಾಡಬೇಕೆಂದು ಹೇಳುತ್ತೀರಿ. ನಿಮ್ಮ ಕೈವಾಡವೂ ಸ್ವಲ್ಪ ನಡೆಯಲಿ. ರೈತರಿಗೆ ಸ್ವಲ್ಪ ಹೆಚ್ಚಿನ ಬೆಲೆಯನ್ನು ಕೊಡಿ. ನಮ್ಮ ಕೈವಾಡ ನಡೆಯುವಾಗ ನಡೆಸಿ ಬಿಟ್ಟಿದ್ದೇವೆ.

ಇನ್ನು ಕುರಿಗಳ ಸಂಖ್ಯೆಯನ್ನು ಹೆಚ್ಚು ಮಾಡಬೇಕು. ಏತಕ್ಕೆಂದರೆ ಕುರಿ ಮಾಂಸ ಸಿಕ್ಕದಮೇಲೆ ನಮಗೆ ಇರುವುದು ದನದಮಾಂಸ. ಅದು ನಮಗೆ ರೂಡಿ ಇಲ್ಲ. ಅದು ನಮ್ಮ ಸಂಪ್ರದಾಯವಲ್ಲ. ಕುರಿಗಳು ಹೋದಮೇಲೆ ನಾವು ಏನು ತಿನ್ನುವುದು, ಕೋಳಿಮಾಂಸ. ಆ ಕೋಳಿಗಳು ಕೂಡ ಕಡಿಮೆ ಯಾಗುತ್ತಿದೆ. ಏನು ಕಾರಣವೋ ಗೊತ್ತಿಲ್ಲ. ನಾಟಿ ಕುರಿಗಳು ಹೆಚ್ಚಿನರೀತಿಯಲ್ಲಿ ಸಾಯುತ್ತಿವೆ. ಅವುಗಳಿಗೆ ಬರತಕ್ಕಂಥ ರೋಗಗಳನ್ನು ತಡೆಯುವುದಕ್ಕೆ ರೈತರಿಗೆ ಸಹಾಯ ಮಾಡಬೇಕು, ಕೋಳಿ ಗಳನ್ನು ಹೆಚ್ಚಿಗೆ ಸಾಕುವುದಕ್ಕೆ ತಾವು ವ್ಯವಸ್ಥೆಯನ್ನು ಮಾಡಬೇಕು. ಅವುಗಳನ್ನು ಸಾಕಿದ ರೈತರಿಗೆ ಬೆಲೆ ಸಿಗುವಂತೆ ಏರ್ಪಾಡು ಮಾಡಬೇಕು. ಕಾಫಿ ಬೋರ್ಡ್ ಇದೆ ಅದರಂತೆ ಒಂದು ಯಗ್‌ಬೋರ್ಡ್ ಮಾಡುತ್ತೇವೆಂದು ಹೇಳಿದಿರಿ. ಅದು ಕಾವಿಗೆ ಕುಳಿತಿದಿಯೋ ಏನೋ, ಒಂದು ಫೆಡರೇಷನ್ ಆದಷ್ಟು ಜಾಗ್ರತೆಯಾಗಿ ಮಾಡಿದರೆ ಬಡರೈತರಿಗೆ ಬಹಳ ಉಪಕಾರ ಮಾಡಿದಂತಾಗುತ್ತದೆ. ಎಲ್ಲಿ ನೋಡಿದರೂ ಅವ್ಯವಸ್ಥೆ ವ್ಯವಸ್ಥಿತವಾಗಿ ಎಲ್ಲೂ ಇಲ್ಲ ಆದ್ದರಿಂದ ನೀವು ಈಶ್ವರನ ಹಾಗೆ ಇದ್ದೀರಿ ''ಕೊಟ್ಟರೆ' ವರ ಇಟ್ಟರೆ ಶಾಪ ಶಾಪವನ್ನು ಮಾತ್ರ ಕೊಡುವುದಕ್ಕೆ ಹೋಗಬೇಡಿ ವರವನ್ನು ಕೊಡಿ. ಬಡರೈತರನ್ನು ಕಾಪಾಡಿ ಎಂದು ತಮ್ಮಲ್ಲಿ ಕೇಳಿಕೊಂಡು ನನ್ನ ಮಾತುಗಳನ್ನು ಮುಗಿಸುತ್ತೇನೆ.

೧೨-೦೦ ಮಧ್ಯಾಹ್ನ

ಶ್ರೀ ಪಿ. ಎನ್. ರೆಡ್ಡಿ (ಮಾಲೂರು).—ಮಾನ್ಯ ಅಧ್ಯಕ್ಷರೇ, ಕಾನೂನು, ಸಂಸದೀಯ, ವ್ಯವಹಾರ, ಪಶು ಸಂಗೋಪನಾ ಮತ್ತು ಪಶುವೈದ್ಯ ಇಲಾಖೆಯ ಮಾನ್ಯ ಮಂತ್ರಿಗಳು ತಂದಿರತಕ್ಕ ಈ ಬೇಡಿಕೆಗಳನ್ನು ಬಹಳ ಸಂತೋಷದಿಂದ ನಾನು ಒಪ್ಪುತ್ತಾ ನನ್ನ ಕೆಲವು ಸಲಹೆಗಳನ್ನು ತಮ್ಮ ಮುಂಖಾಂತರ ತಿಳಿಯಬಯಸುತ್ತೇನೆ. ಈಗತಾನೇ ಹಿರಿಯ ಸದಸ್ಯರಾದ ಮಾನ್ಯ ರಾಮೇಗೌಡರು ಮಾತನಾಡುವಾಗ ವೆಟರಿನರಿ ಡಾಕ್ಟರುಗಳು ಸ್ಟ್ರೈಕ್ ಮಾಡುತ್ತಿದ್ದಾರೆ. ಅವರಿಗೆ ಸರಿಯಾದ ಸಹಾಯ ಮಾಡಬೇಕು, ಅದನ್ನು ಇನ್ನೂ ಮಾಡಿಲ್ಲವೆಂದು ಹೇಳಿದರು, ಅವರು ಮಾಜಿ ಮಂತ್ರಿಗಳು, ಅವರ ಕೈಯಲ್ಲಿ ಈ ಖಾತೆ ಇದ್ದಾಗ ಅವರ ಕಷ್ಟ ಸುಖಗಳನ್ನು ನೋಡಿಕೊಳ್ಳಲಿಕ್ಕೆ ಆಗಲಿಲ್ಲ. ಆ ಒಂದು ಕೆಲಸವನ್ನು ಮಾನ್ಯ ರಾಮಕೃಷ್ಣಗು ಮಾಡಿತ್ತಿದ್ದಾರೆ. ಅವರು ಒಂದು ಆಶ್ವಾಸನೆ ಕೊಡುವವರಿದ್ದಾರೆ, ವೆಟರಿನ ಡಾಕ್ಟರುಗಳ ಸ್ಕೇಲನ್ನು ಎಂ.ಬಿ ಬಿ ಎಸ್. ಡಾಕ್ಟರುಗಳ ಸ್ಕೇಲ್‌ಗೆ ಸಮನಾಗಿ ಮಾಡುವ ಆಶಾಭಾವನೆ ಅವರು ಹೊಂದಿದ್ದಾರೆ. ಅನೇಕ ಜನ ಸದಸ್ಯರು ಈ ಸದನದಲ್ಲಿ ಮಾತನಾಡುವಾಗ 'ಸಿಮೆನ್' ಕುರಿತು ಮಾತನಾಡಿದ್ದಾರೆ. ನಾನು ಮಾನ್ಯ ಮಂತ್ರಿಯವರಲ್ಲಿ ಕೇಳಿಕೊಳ್ಳುವುದೇನೆಂದರೆ, ಶ್ರೀ ರಾಮೇಗೌಡರ ಅಧ್ಯಕ್ಷತೆಯಲ್ಲಿ ಮಾನ್ಯ ತಮ್ಮಯ್ಯನವರು, ಮಾನ್ಯ ಘಟ್ಟಿ ಚಂದ್ರಶೇಖರ್, ಶ್ರೀ ಭಾಸ್ಕರನಾಯ್ಡು ಮತ್ತು ಕುಮಾರಿ ಪ್ರಮೀಳರವರನ್ನು ಸೇರಿಸಿಕೊಂಡು ಕೆಲವು ಅಧಿಕಾರಿಗಳನ್ನು ಅವರ ಜೊತೆಗೆ ಹಾಕಿ ಒಂದು ಕಮಿಟಿ ಮಾಡಿ ಅದರ ಆಗು ಹೋಗುಗಳ ಬಗ್ಗೆ ಅವರು ವರದಿ ಮಾಡಬೇಕೆಂದು ನಾನು ಸಲಹೆ ಕೊಡುತ್ತೇನೆ. ಅದರ ಬಗ್ಗೆ ನಾನು ಇದಕ್ಕಿಂತ ಹೆಚ್ಚಿಗೆ ಮಾತನಾಡುವುದಕ್ಕೆ ಇಷ್ಟಪಡುವುದಿಲ್ಲ.

ಇನ್ನು ಕಾನೂನು ಬಗ್ಗೆ ಮಾತನಾಡುವುದಾದರೆ, ನಮ್ಮ ವಿರೋಧ ಪಕ್ಷದ ನಾಯಕರಾದ ಮಾನ್ಯ ಲಕ್ಷ್ಮೀಸಾಗರ್‌ರವರು ಮಾತನಾಡುವಾಗ ಕೋರ್ಟ್ ಫೀಯನ್ನು ಎಗ್ಸಮ್‌ಷನ್ ಮಾಡಿಲ್ಲವೆಂದು ಹೇಳಿದರು. ಆ ಬಗ್ಗೆ ಅವರು ಕಾನೂನು ಮಂತ್ರಿಗಳನ್ನು ಕುರಿತು ವಾದ ಮಾಡುತ್ತಿದ್ದರು. ನಾನು ಜಾಯಿಂಟ್ ಸೆಲೆಕ್ಟ್ ಕಮಿಟಿ ಇದ್ದುದರಿಂದ ನಾನು ಅಲ್ಲಿಗೆ ಹೋಗಿದ್ದೆ. ಪೂರ್ತಿ ಕೇಳಲಿಕ್ಕೆ ಆಗಲಿಲ್ಲ. ಮಾನ್ಯ ಲಕ್ಷ್ಮೀಸಾಗರ್‌ರವರು ಪ್ರಸ್ತುತ ಅವರು ವಿರೋಧ ಪಕ್ಷದ ನಾಯಕರಲ್ಲದೆ ಹಿರಿಯ ವಕೀಲರಾಗಿದ್ದಾರೆ. ಪ್ರಸ್ತುತ ಕೋರ್ಟ್‌ನಲ್ಲಿ ಎಷ್ಟೆಷ್ಟು ಕೇಸುಗಳು ವಿಲೇವಾರಿಯಾಗದೆ ಉಳಿದಿವೆ ಎನ್ನುವುದು ಅವರ ಗಮನಕ್ಕೆ ಬಂದಿದೆ. ನನಗೆ ತಿಳಿದಿರುವ ಪ್ರಕಾರ ಡಿಸ್ಟ್ರಿಕ್ಟ್ ಸಿವಿಲ್ ಕೋರ್ಟ್‌ನಲ್ಲಿ ಮತ್ತು ಕೆಳಗಿನ ಕೋರ್ಟ್‌ಗಳಲ್ಲಿ ಸುಮಾರು ೮,೩೦ ೯೭೦ ಕೇಸುಗಳು ವಿಲೇವಾರಿಯಾಗಿಲ್ಲ. ಅದೇರೀತಿ ಹೈಕೋರ್ಟ್‌ನಲ್ಲಿ ೯,೪೩,೯೭೦ ಕೇಸುಗಳು ವಿಲೇವಾರಿಯಾಗಿಲ್ಲ. ಒಟ್ಟಿನಲ್ಲಿ ನಮ್ಮ ರಾಜ್ಯದಲ್ಲಿ ವಿಲೇವಾರಿಯಾಗದ ಕೇಸುಗಳು ೭೭,೮೪೯೪೦ ಎಂದು ಅಂಕಿಅಂಶಗಳಿಂದ ಗೊತ್ತಾಗುತ್ತದೆ. ಕೋರ್ಟ್ ಫೀ ಎಗ್ಸೆಂಪ್‌ಷನ್ ಮಾಡಿದರೆ ಅರ್ಜಿಗಳನ್ನು ಜಾಸ್ತಿ ಹಾಕಿ, ಇನ್ನೂ ಆ ಪಟ್ಟಿ ಜಾಸ್ತಿಯಾಗುತ್ತದೆ, ಅದರ ಕಡೆಗೆ ಗಮನ ಕೊಡಬೇಕು. ನಮ್ಮ ಸರ್ಕಾರದಲ್ಲಿ ಒಂದು ನಿಯಮವನ್ನು ಇಟ್ಟುಕೊಂಡಿದ್ದೇವೆ, ಕರ್ನಾಟಕ ಲೀಗಲ್ ಬೋರ್ಡ್ ೮ ಸಾವಿರ ಅರ್ಜಿಗಳನ್ನು ವಿಲೇವಾರಿ ಮಾಡಿದರೆ ಅವರಿಗೆ ಫೀ ಎಗ್ಸೆಮ್‌ಷನ್ ಕೊಟ್ಟಿದ್ದೇವೆ. ಆದ್ದರಿಂದ ನನ್ನ ಅಭಿಪ್ರಾಯದ ಪ್ರಕಾರ ಸಧ್ಯದ ಪರಿಸ್ಥಿತಿಯಲ್ಲಿ ಕೋರ್ಟ್ ಫೀಯನ್ನು ಎಲ್ಲರಿಗೂ ಎಗ್ಸೆಂಪ್‌ಷನ್ ಮಾಡುವುದು ಉತ್ತಮವಾದುದಲ್ಲ, ಸರಿಯಾದುದಲ್ಲವೆಂದು ಹೇಳುತ್ತಿದ್ದೇನೆ. ನಮ್ಮ ಮಾನ್ಯ ಕಾನೂನು ಮಂತ್ರಿಗಳು ಒಂದು ಹೊಸ ಪದ್ಧತಿಯನ್ನು ಜಾರಿಗೆ ತಂದಿದ್ದಾರೆ. ಅದೇನೆಂದರೆ ಲಾ ಗ್ರ್ಯಾಜುಯೇಟ್ಸ್ ಆದನಂತರ ಅವರಿಗೆ ಟ್ರೈನಿಂಗ್ ಕೊಡುವುದು. ಈ ರೀತಿ ಟ್ರೈನಿಂಗ್ ಕೊಡತಕ್ಕಂತಹ ಸಂಖ್ಯೆ ೧೫೨ ಎಂದು ಕೊಟ್ಟಿದ್ದಾರೆ. ಇದು ನಿಜವಾಗಿಯೂ ಸಂತೋಷಪಡುವಂತಹ ವಿಷಯ. ಅದೇ ರೀತಿ ನಮ್ಮ ರಾಜ್ಯದ ೧೭೨ ತಾಲ್ಲೂಕುಗಳಲ್ಲಿ ೧೨೦ ತಾಲ್ಲೂಕುಗಳಿಗೆ ಕೋರ್ಟ್‌ಗಳನ್ನು ಕೊಟ್ಟಿದ್ದಾರೆ. ಇನ್ನೂ ೪೪ ಕೋರ್ಟ್‌ಗಳನ್ನು ಕೊಡಬೇಕಾಗಿದೆ. ನಮ್ಮ ತಾಲ್ಲೂಕಿಗೆ ಕೋರ್ಟ್ ಕೊಡಬೇಕೆಂದು ಹೋದಸಾರಿ ನಾನು ಹೇಳಿದ್ದೆ. ಆದರೆ ಅವನ್ನು ಕೊಡಲಿಲ್ಲ. ಈ ಸಾರಿಯೂ ಹೇಳುತ್ತಿದ್ದೇನೆ. ಈ ಸಾರಿ ಅವರು ಖಂಡಿತವಾಗಿಯೂ ಕೊಡುತ್ತಾರೆ ಎಂದು ನಾನು ನಂಬಿಕೊಂಡಿದ್ದೇನೆ. ಮಾನ್ಯ ಮಂತ್ರಿಗಳು ಹೆಚ್ಚಿನ ನ್ಯಾಯಾಲಯಗಳಲ್ಲಿ ಮುನ್ಸಿಫರ್‌ಗಳನ್ನು ನೇಮಕ ಮಾಡುತ್ತೇವೆಂದೂ ಸಹ ಹೇಳಿದ್ದಾರೆ. ಸುಮಾರು ೭೦ ಜನರನ್ನು ನಮ್ಮ ರಾಜ್ಯದ ಇಲಾಖೆಯಿಂದ ನೇಮಕ ಮಾಡಬಹುದು. ಆದರೆ ಕೇವಲ ಇದುವರೆಗೆ ನೇಮಕ ಮಾಡಿರುವುದು ೨೭ ಜನರನ್ನು. ೪೩ ಜನರನ್ನು ನ್ಯೂಟಲ್ ಆಗಿ ನೇಮಕ ಮಾಡಬಹುದು. ಜಿಲ್ಲಾವಾರು ಮತ್ತು ತಾಲ್ಲೂಕುವಾರು ನೇಮಕ ಮಾಡಿದರೂ ಅಫಿಡವಿಟ್ ಮಾಡಿಕೊಳ್ಳುವುದಕ್ಕೆ ಸುಲಭವಾಗುತ್ತದೆ. ಅದನ್ನು ಸಹ ಮಾಡಬೇಕು. ಇನ್ನು ಮಹತ್ತರವಾದ

ವಿಷಯವೇನೆಂದರೆ ಅದರ ಬಗ್ಗೆ ಇಲ್ಲಿ ಭಾಷಣ ಮಾಡಿ ಹೇಳಿದರೆ ಏನೂ ಆಗುವುದಿಲ್ಲ, ಲಕ್ಷಾನುಗಟ್ಟಲೆ ಕೇಸುಗಳು ಪೆಂಡಿಂಗ್ ಇರುವಾಗ ಮಾನ್ಯ ಕಾನೂನು ಮಂತ್ರಿಗಳು ಮತ್ತು ಕೇಂದ್ರ ಸರ್ಕಾರದ ಮಂತ್ರಿಗಳು ಒಂದು ಸಭೆ ಸೇರಿ ಈಗ ಇರುವ ಕೇಸುಗಳನ್ನು ಯಾವ ರೀತಿಯಲ್ಲಿ ಡಿಸ್‌ಪೋಸಲ್ ಮಾಡಬೇಕು ಎನ್ನುವುದಕ್ಕೂ ಅವರೆಲ್ಲಾ ಯೋಚನೆ ಮಾಡಬೇಕು. ವರ್ಷೇ ವರ್ಷೇ ಈ ಪಟ್ಟಿ ಜಾಸ್ತಿಯಾಗುತ್ತಿದೆ. ಇದಕ್ಕೆ ಏನಾದರೂ ಒಂದು ಬದಲಾವಣೆ ಮಾಡದಿದ್ದರೆ ನಿಜವಾಗಿಯೂ ಕೇಸುಗಳು ಉದ್ಭವವಾಗುವುದನ್ನು ತಪ್ಪಿಸುವುದಕ್ಕೆ ಆಗುವುದಿಲ್ಲ ನಮ್ಮ ರಾಜ್ಯ ಸರ್ಕಾರದ ಮಾನ್ಯ ಕಾನೂನು ಮಂತ್ರಿಗಳು ಹೆಚ್ಚಿನ ಮುತುವರ್ಜಿ ತೆಗೆದುಕೊಂಡು ಇತರ ರಾಜ್ಯ ಸರ್ಕಾರಗಳೊಡನೆ ಸಂಪರ್ಕ ಉಂಟು ಮಾಡಿಕೊಂಡು ಕೇಂದ್ರ ಸರ್ಕಾರದ ಕಾನೂನು ಮಂತ್ರಿಗಳೊಡನೆ ಈ ಬಗ್ಗೆ ಪ್ರಸ್ತಾಪಮಾಡಿ ಪರಿಶೀಲನೆ ಮಾಡಬೇಕೆಂದು ಪ್ರಾರ್ಥಿಸಿಕೊಳ್ಳುತ್ತೇನೆ. ಅವರ ಕಾರ್ಯಾಲಯದಲ್ಲಿ, ಕೋರ್ಟ್‌ನಲ್ಲಿ ೧೩–೧೪ ವರ್ಷ ಸೇವೆ ಮಾಡಿರುವವರನ್ನು ಅವರ ಸಂಸದೀಯ ಮತ್ತು ಕಾನೂನು ಇಲಾಖೆಗೆ ತೆಗೆದುಕೊಳ್ಳುತ್ತಾರೆ. ಒಂದೊಂದು ಸಲ ಅವರಿಗೆ ತೊಂದರೆಯಾಗುತ್ತದೆ, ಎರಡು–ಮೂರು ವರ್ಷಗಳಾದ ಮೇಲೆ ಪುನ: ಇಲಾಖೆಗೆ ಹೋದಾಗ ಪ್ರಮೋಷನ್ ಮಾಡುವಾಗ, ಎಷ್ಟು ಕೇಸುಗಳನ್ನು ಡಿಸ್‌ಪೋಸ್ ಮಾಡಿದ್ದೀರಿ, ನೀವು ಇಷ್ಟು ಕೇಸುಗಳನ್ನು ಡಿಸ್‌ಪೋಸಲ್ ಮಾಡಿಲ್ಲ ನಿಮಗೆ ಪ್ರಮೋಷನ್ ಕೊಡುವುದಕ್ಕೆ ಆಗುವುದಿಲ್ಲವೆಂದು ಹೇಳುವುದು ಅನೇಕ ಸಂದರ್ಭಗಳಲ್ಲಿ ನಡೆದಿದೆ ಎಂದು ಕೇಳಿದ್ದೇನೆ. ಅವರು ಇಲ್ಲಿ ಕೆಲಸ ಮಾಡುವುದರಿಂದ ಅವರಿಗೆ ಅನ್ಯಾಯವಾಗದ ರೀತಿಯಲ್ಲಿ ಪ್ರಮೋಷನ್ ಕೊಡುವ ಏರ್ಪಾಡು ಮಾಡಬೇಕಾಗುತ್ತದೆ. ಆ ಒಂದು ಕೆಲಸವನ್ನು ಮಾಡಲೇಬೇಕಾಗುತ್ತದೆ ಇನ್ನು ಕರ್ನಾಟಕ ಲೀಗಲ್ ಏಡ್ ಬೋರ್ಡ್ ಮಾಡಿದ್ದಾರೆ. ಅದು ಒಳ್ಳೆಯ ಕೆಲಸ ನಾನು ಹೋದ ವರ್ಷ ಕಾನೂನು ನಿಯಮಗಳನ್ನು ಬದಲಿಸಬೇಕೆಂದು ಹೇಳಿದ್ದೆ ಅದನ್ನು ಮಾಡಿದ್ದಾರೆ, ಬಹಳ ಸಂತೋಷ. ಆದರೆ ಕಾನೂನು ಮಂತ್ರಿಗಳು ಅಧ್ಯಕ್ಷರಾಗಬೇಕೆಂದು ಮಾಡಿರುವುದು ಸರಿಯಲ್ಲ. ಏಕೆಂದರೆ ಅವರಿಗೆ ವಿಪರೀತ ಕೆಲಸವಿರುವುದರಿಂದ ಅವರು ಅಲ್ಲಿಗೆ ಹೆಚ್ಚು ನಿಗಾ ಕೊಡಲು ಆಗುವುದಿಲ್ಲ. ಯಾರಾದರೂ ಖಾಸಗೀ ಸದಸ್ಯರು ಎಕ್ಸಿಕ್ಯುಟೀವ್ ಛೇರ್ಮನ್ ಆಗಬೇಕು. ನಾನು ಮಾನ್ಯ ಕಾನೂನು ಮಂತ್ರಿಗಳಿಗೆ ಹೇಳುವುದೇನೆಂದರೆ,

ನಾನೂ ಇದರ ಸದಸ್ಯನಾಗಿದ್ದೇನೆ. ತಾವು ಇದರ ಅಧ್ಯಕ್ಷರಾಗಿದ್ದೀರಿ. ಆದರೆ ತಮಗಾಗಲೀ ಅಡ್ವೋಕೇಟ್ ಜನರಲ್ ಅವರಿಗಾಗಲೀ ಹೆಚ್ಚಿನ ಕಾಲಾವಕಾಶ ಇಲ್ಲದ ಕಾರಣ ಬೇರೆ ಒಬ್ಬರನ್ನು ನೇಮಕ ಮಾಡುವುದು ಒಳ್ಳೆಯದು. ಇಲ್ಲದಿದ್ದರೆ ಜಾಗ್ರತೆ ಕೇಸ್‌ಗಳನ್ನು ವಿಲೇವಾರಿ ಮಾಡುವುದಕ್ಕಾಗುವುದಿಲ್ಲ ಮತ್ತು ಇದೇ ಪರಿಸ್ಥಿತಿ ಮುಂದುವರೆದರೆ ವಕೀಲರಿಗೂ ಸಂಭಾವನೆ ಸಿಗುವುದಿಲ್ಲ. ಈ ವಿಚಾರದಲ್ಲಿ ಈಗಾಗಲೇ ಶ್ರೇಷ್ಟ ನ್ಯಾಯಾಲಯದ ನ್ಯಾಯಾಧೀಶರು ಮತ್ತು ಮಾನ್ಯ ಮುಖ್ಯಮಂತ್ರಿಗಳು ಕೊಟ್ಟ ಸಲಹೆ ಇನ್ನೂ ಕಾರ್ಯರೂಪಕ್ಕೆ ಬಂದಿಲ್ಲ. ಇಡೀ ಭಾರತದಲ್ಲಿಯೇ ಇಂತಹ ಬೋರ್ಡ್ ರಚನೆಯಾಗಿರುವುದು ನಮ್ಮ ರಾಜ್ಯದಲ್ಲಿಯೇ ಪ್ರಥಮ. ಆದಕಾರಣ ಇದು ಬಹಳ ಚೆನ್ನಾಗಿ ಕೆಲಸ ಮಾಡುತ್ತಿದೆ ಎಂಬ ಅಭಿಪ್ರಾಯ ಬೇರೆ ರಾಜ್ಯಗಳವರಲ್ಲಿ ಇದೆ. ಆದಕಾರಣ ತಾವು ಜಾಗ್ರತೆ ಎಕ್ಸಿಕ್ಯುಟಿವ್ ಚೇರ್‌ಮನ್ ಅವರನ್ನು ನೇಮಕ ಮಾಡುತ್ತೀರೆಂಬ ನಂಬಿಕೆ ನನಗಿದೆ. ಹೋದ ತಿಂಗಳು ತಾವು ಅಲ್–ಇಂಡಿಯಾ ಲಾ–ಕಾನ್‌ಫರೆನ್ಸ್‌ಗೆ ಹೋದಾಗ ಅಲ್ಲಿ ಸುಪ್ರೀಂ ಕೋರ್ಟಿನ ಜಡ್ಜ್‌ಗಳು ಅನೇಕ ಉತ್ತಮವಾದಂಥ ಸಲಹೆಗಳನ್ನು ಕೊಟ್ಟಿದ್ದಾರೆ. ಆದಕಾರಣ ಅವರು ಕೊಟ್ಟ ಸಲಹೆಗಳನ್ನು ತಾವು ಕಾರ್ಯಗತ ಮಾಡಬೇಕೆಂದು ಹೇಳುತ್ತೇನೆ.

ಇನ್ನು ನ್ಯಾಯಾಲಯಗಳಲ್ಲಿ ಕನ್ನಡವನ್ನೇ ಆಡಳಿತಭಾಷೆಯನ್ನಾಗಿ ಅಳವಡಿಸಬೇಕೆಂದು ನಾನು ಈ ಮೊದಲೂ ಹೇಳಿದ್ದೆ, ಈಗಲೂ ಹೇಳುತ್ತಿದ್ದೇನೆ. ಮುನ್ಸೀಫ್‌ಗಳನ್ನು ಪಿ.ಎಸ್.ಸಿ. ಯವರು ಆಯ್ಕೆ ಮಾಡಲು ಕನ್ನಡ ಟ್ರಾನ್ಸ್‌ಲೇಷನ್ ಪರೀಕ್ಷೆಯನ್ನಿಟ್ಟಾಗ ಸುಮಾರು ೧೮೨ ಜನ ಫೇಲ್ ಆಗಿದ್ದಾರೆಂದು ಕೇಳಿದ್ದೇನೆ. ಇವರುಗಳ ಪೈಕಿ ಸುಮಾರು ೪೦–೪೪ ಜನ ಹರಿಜನರೂ ಸಹ ಫೇಲ್ ಆಗಿದ್ದಾರೆಂದು ಕೇಳಿದ್ದೇನೆ. ಈ ಜಾಗಗಳನ್ನು ಭರ್ತಿ ಮಾಡುವಾಗ ತಾವು ೧೮ ಪರ್ಸೆಂಟ್ ಸೀಟ್‌ಗಳನ್ನು ಹರಿಜನರಿಗೆ ಮೀಸಲಿಡಬೇಕಾದ ಕಾರಣ ಇವರುಗಳಿಗೆ ಒಂದು ಹೊಸ ನಿಯಮವನ್ನಾದರೂ ಮಾಡಿ ಈ ಜನರಿಗೆ ಉತ್ತೇಜನ ಕೊಡುವುದರ ಮೂಲಕ ಈ ಜಾಗಗಳಿಗೆ ಹರಿಜನ ಅಭ್ಯರ್ಥಿಗಳನ್ನು ನೇಮಕ ಮಾಡಬೇಕೆಂದು ಹೇಳುತ್ತೇನೆ. ಈಗ ಮುನ್ಸೀಫ್‌ಗಳ ಅಭಾವವಿರುವ ಕಾರಣ ಎಲ್ಲ ಕಡೆಯೂ ಭರ್ತಿ ಮಾಡಬೇಕೆಂದು ಹೇಳುತ್ತೇನೆ. ಇಲ್ಲದಿದ್ದರೆ ನೀವು ಇವರಿಗೆ ಉತ್ತೇಜನ ಕೊಟ್ಟಂತೆ ಆಗುವುದಿಲ್ಲ,

ಇದರ ಜೊತೆಗೆ ಕೋರ್ಟಿನ ಮುಂದಿರುವ ಕೇಸ್‌ಗಳೂ ಸಹ ಜಾಗ್ರತೆ ತೀರ್ಮಾನವಾಗುವುದಿಲ್ಲ. ಆದಕಾರಣ ಈ ಕೆಲಸವನ್ನು ಖಂಡಿತವಾಗಿಯೂ ಮಾಡುತ್ತೀರಿ ಎಂದು ನಾನು ತಿಳಿದಿದ್ದೇನೆ.

ಇನ್ನು ಕರ್ನಾಟಕ ಡೈರಿ ಡೆವಲಪ್‌ಮೆಂಟ್ ಕಾರ್ಪೊರೇಷನ್ ನಿಜವಾಗಿಯೂ ಬಹಳ ಹೆಚ್ಚಿನ ರೀತಿಯಲ್ಲಿ ಕೆಲಸ ಮಾಡುತ್ತಿದೆ. ಮ್ಯಾನೇಜಿಂಗ್ ಡೈರೆಕ್ಟರ್ ಮೊದಲ್ಗೊಂಡು ಇನ್ನಿತರ ಅಧಿಕಾರಿಗಳನ್ನು ನೇಮಕ ಮಾಡುವಾಗ ಒಳ್ಳೆಯವರನ್ನು ನೇಮಕ ಮಾಡಿದರೆ ಅಲ್ಲಿನ ಕೆಲಸಗಳೂ ಸಹ ಚೆನ್ನಾಗಿ ಆಗುತ್ತವೆ. ಈಗಿನ ಅಧಿಕಾರಿಗಳು ಎಲ್ಲ ಕಡೆಯೂ ಸರ್ವೆ ಮಾಡುವುದರ ಮೂಲಕ ರೈತರಿಗೆ ಸಹಾಯವಾಗುವಂತಹ ಕಾರ್ಯಕ್ರಮಗಳನ್ನು ಅಳವಡಿಸುತ್ತಿದ್ದಾರೆ. ಆದರೆ ಪಶು ವೈದ್ಯ ಇಲಾಖೆಯ ಬಗ್ಗೆ ನನ್ನ ಅಸಮಾಧಾನವಿದೆ. ಯಾವ ಹಳ್ಳಿಗೆ ಹೋದರೂ ಔಷಧವಿಲ್ಲ, ಇಂಜೆಕ್ಷನ್ ಟ್ಯೂಬ್ ಇಲ್ಲವೆಂದು ಹೇಳುತ್ತಾರೆ. ಅಧಿಕಾರಿಗಳೇ ಸರಿಯಾಗಿ ಕೆಲಸ ಮಾಡುತ್ತಿಲ್ಲವೋ ಅಥವಾ ಸರ್ಕಾರದವರು ಏನಾದರೂ ಆರ್ಥಿಕ ನಿರ್ಬಂಧ ಹಾಕಿದ್ದಾರೋ ಗೊತ್ತಿಲ್ಲ. ದನಕರುಗಳಿಗೆ ಬೇಕಾದ ಔಷಧಗಳನ್ನು ತಾವು ಎಲ್ಲ ಹಳ್ಳಿಗಳಿಗೂ ಸರಬರಾಜು ಮಾಡದಿದ್ದರೆ ಮತ್ತು ಇದಕ್ಕೆ ತಾವು ಉತ್ತೇಜನ ಕೊಡದಿದ್ದರೆ ಹಳ್ಳಿಯ ರೈತರ ಮನಸ್ಸನ್ನು ತಮ್ಮ ಕಡೆಗೆ ಸೆಳೆಯುವುದಕ್ಕಾಗುವುದಿಲ್ಲ. ಈ ಇಲಾಖೆಯಲ್ಲಿ ಡಾಕ್ಟರ್‌ಗಳ ಮತ್ತು ಇನ್‌ಸ್ಪೆಕ್ಟರ್‌ಗಳ ಕೊರತೆ ಸಹ ಇದೆ. ಆದಕಾರಣ ಖಾಲಿ ಇರುವ ಜಾಗಗಳನ್ನು ಕೂಡಲೇ ಭರ್ತಿ ಮಾಡಬೇಕು. ಈ ಇಲಾಖೆಯ ಡಾಕ್ಟರ್‌ಗಳು ತಮ್ಮ ಪೋಸ್ಟನ್ನು ಅಪ್-ಗ್ರೇಡ್ ಮಾಡಬೇಕೆಂದು ಕಳೆದ ಎರಡು ವರ್ಷಗಳಿಂದಲೂ ಕೇಳುತ್ತಿದ್ದಾರೆ. ಇದೇ ಕಾರಣದಿಂದ ಇವರುಗಳು ಸರಿಯಾಗಿ ಕೆಲಸ ಮಾಡುತ್ತಿಲ್ಲವೆಂದು ಕಾಣುತ್ತದೆ. ಆದ್ದರಿಂದ ತಾವು ಮೊದಲು ಈ ಇಲಾಖೆಯನ್ನು ಸರಿಪಡಿಸಬೇಕು. ಇಲ್ಲದಿದ್ದರೆ ರೈತರಿಗೆ ಬಹಳ ತೊಂದರೆಯಾಗುತ್ತದೆ.

ಇನ್ನು ನ್ಯಾಯಾಲಯಗಳ ಸಂಪರ್ಕ ಚೆನ್ನಾಗಿರಬೇಕಾದರೆ ಒಂದು ಹೈಕೋರ್ಟಿನಿಂದ ಇನ್ನೊಂದು ಹೈಕೋರ್ಟಿಗೆ ಜಡ್ಜ್‌ಗಳನ್ನು ವರ್ಗಾವಣೆ ಮಾಡುವುದು ಒಳ್ಳೆಯದು. ಈ ಪದ್ಧತಿಯನ್ನು ಕೇಂದ್ರ ಸರ್ಕಾರದವರು ಮೊದಲು ಜಾರಿಗೆ ತಂದಾಗ ಬಹಳ ಜನರು ಇದಕ್ಕೆ ಉತ್ತೇಜನ ಕೊಟ್ಟಿದ್ದರು. ಆದರೂ ಅಷ್ಟಾಗಿ ಜಾರಿಗೆ ಬರುತ್ತಿಲ್ಲ. ಈ ಪ್ರಶ್ನೆ ಕೇಂದ್ರ ಮತ್ತು ರಾಜ್ಯ ಸರ್ಕಾರಗಳೆರಡಕ್ಕೂ ಸೇರಿದ ಕಾರಣ ನಮ್ಮ ಮಾನ್ಯ ಕಾನೂನು ಮಂತ್ರಿಗಳು ಕೇಂದ್ರದ ಕಾನೂನು ಮಂತ್ರಿಗಳ ಜೊತೆಗೆ ಸಮಾಲೋಚನೆ ಮಾಡಿ ಪುನಃ ಈ ಪದ್ಧತಿಯನ್ನು ಜಾರಿಗೆ ತರುವಂತೆ ತಿಳಿಸಬೇಕು. ಒಟ್ಟಿನಲ್ಲಿ ನಮ್ಮ ಮಾನ್ಯ ಕಾನೂನು ಮತ್ತು ಪಶುಸಂಗೋಪನಾ ಮಂತ್ರಿಗಳು ಒಳ್ಳೆಯ ಮುತುವರ್ಜಿಯಿಂದ ಕೆಲಸ ಮಾಡುತ್ತಿದ್ದಾರೆ. ಇದರಲ್ಲಿ ಯಾವ ಅನುಮಾನವೂ ಇಲ್ಲ. ಈ ಇಲಾಖೆಗಳಿಗೆ ಸಂಬಂಧಪಟ್ಟಂತೆ ಮಾನ್ಯ ಮುಖ್ಯಮಂತ್ರಿಗಳೂ ಸಹ ಹೆಚ್ಚಿನ ಉತ್ತೇಜನ ಕೊಡುತ್ತಿದ್ದಾರೆ. ಕೋರ್ಟು ಕಟ್ಟಡಗಳನ್ನು ಹೆಚ್ಚಿನ ರೀತಿಯಿಂದ ಕಟ್ಟಿಸುತ್ತಿರುವುದರ ಜೊತೆಗೆ ನ್ಯಾಯಾಧೀಶರುಗಳಿಗೂ ಸಹ ವಾಸದ ಮನೆಗಳನ್ನು ಕಟ್ಟಿಸಿ ಕೊಡಲಾಗುತ್ತಿದೆ. ಇದೊಂದು ಸಂತೋಷದ ವಿಷಯ. ನಮ್ಮ ಮಾನ್ಯ ಮುಖ್ಯಮಂತ್ರಿಗಳು ಹೋದ ಸಲ ವಕೀಲರ ಸಂಘಕ್ಕೆ ಹೋದಾಗ ಅಲ್ಲಿನ ಎಂಗ್-ಲಾಯರ್ಸ್-ಫೋರಮ್‌ನವರಿಗೆ ಸಂಭಾವನೆ ಕೊಡುವ ವಿಚಾರದಲ್ಲಿ ಆಶ್ವಾಸನೆ ಕೊಟ್ಟು ಬಂದಿದ್ದರು. ಮಾನ್ಯ ಕಾನೂನು ಮಂತ್ರಿಗಳು, ಅಡ್ವೊಕೇಟ್ ಜನರಲ್ ಅವರು ಮತ್ತು ಕಾನೂನು ಇಲಾಖೆ ಕಾರ್ಯದರ್ಶಿಯವರು ಸೇರಿ ಇದರ ಬಗ್ಗೆ ಒಂದು ತೀರ್ಮಾನ ಕೈಗೊಳ್ಳುತ್ತಾರೆಂದು ಅವರು ಹೇಳಿದ್ದು ಮಾನ್ಯ ಮಂತ್ರಿಗಳ ಗಮನಕ್ಕೆ ಬಂದಿದೆಯೋ ಅಥವಾ ಇಲ್ಲವೂ ಗೊತ್ತಿಲ್ಲ. ಒಟ್ಟಿನಲ್ಲಿ ಮಾನ್ಯ ಮುಖ್ಯಮಂತ್ರಿಗಳು ಕೊಟ್ಟ ಆಶಾಸ್ವನೆಯನ್ನು ಖಂಡಿತವಾಗಿಯೂ ಜಾರಿಗೆ ತರಬೇಕೆಂದು ಹೇಳುತ್ತೇನೆ.

ಇನ್ನು ವಿಧಾನಮಂಡಲದಲ್ಲಿ ಕೆಲಸ ಮಾಡುತ್ತಿರುವ ವರದಿಗಾರರ ಗ್ರೇಡನ್ನು ಹೆಚ್ಚು ಮಾಡುವ ಬಗ್ಗೆ ತಾವು ಕಳೆದ ಸಲ ಆಶ್ವಾಸನೆಯನ್ನು ಕೊಟ್ಟಿದ್ದರೂ ಸಹ ಇಲ್ಲಿಯವರೆಗೆ ತಾವು ಯಾವುದೇ ಆಜ್ಞೆಯನ್ನು ಹೊರಡಿಸಿಲ್ಲ. ಬಿಹಾರ ಮಹಾರಾಷ್ಟ್ರ ಮುಂತಾದ ರಾಜ್ಯಗಳಲ್ಲಿ ಕೆಲಸ ಮಾಡುತ್ತಿರುವ ವರದಿಗಾರರಿಗೆ ಕ್ಲಾಸ್-೨ ಮತ್ತು ಕ್ಲಾಸ್-೧ ದರ್ಜೆಗೆ ಪ್ರಮೋಷನ್ ಕೊಡಲು ಅವಕಾಶವಿದೆ ಆದರೆ ನಮ್ಮ ರಾಜ್ಯದಲ್ಲಿ ಮಾತ್ರ ನಿವೃತ್ತರಾಗುವವರೆಗೂ ವರದಿಗಾರರಾಗಿಯೇ ಕೆಲಸ ಮಾಡಬೇಕಾಗಿದೆ. ಇದನ್ನು ತಪ್ಪಿಸಿ, ಬಹಳ ದಿವಸಗಳಿಂದ ಅವರ ಒಂದು ಆಕಾಂಕ್ಷೆ ಏನಿದೆ, ಅದನ್ನು ಈಡೇರಿಸುವ ಸಲುವಾಗಿ ಇನ್ನು ಒಂದು ತಿಂಗಳೊಳಗಾಗಿಯಾದರೂ ಒಂದು ಆಜ್ಞೆ ಹೊರಡಿಸಬೇಕೆಂದು ಕೇಳಿಕೊಂಡು ನನಗೆ ಇಷ್ಟು ಮಾತನಾಡಲು ಅವಕಾಶ ಕೊಟ್ಟ ಮಾನ್ಯ ಅಧ್ಯಕ್ಷರಿಗೆ ನನ್ನ ಕೃತಜ್ಞತೆಯನ್ನು ಅರ್ಪಿಸಿ ನನ್ನ ಮಾತನು ಮುಗಿಸುತ್ತೇನೆ.

† ಶ್ರೀ ಎಸ್. ಆರ್. ಬೊಮ್ಮಾಯಿ (ಹುಬ್ಬಳಿ).—ಮಾನ್ಯ ಅಧ್ಯಕ್ಷರೇ, ಈಗಾಗಲೇ ನ್ಯಾಯಾಂಗ ವಿಚಾರವಾಗಿ ಅನೇಕ ನನ್ನ ಮಿತ್ರರು ಮಾತನಾಡಿದ್ದಾರೆ. ಇದರ ಬಗ್ಗೆ ಕೆಲವು ವಿಚಾರಗಳನ್ನು ಸರ್ಕಾರದ ಗಮನಕ್ಕೆ ತರಬಯಸುತ್ತೇನೆ. ನಮಗೆ ಸರ್ಕಾರದವರೇ ಕೊಟ್ಟಿರುವ ಅಂಕಿಅಂಶಗಳ ಪ್ರಕಾರ ಸುಮಾರು ೮೦ ಸಾವಿರ ಪ್ರಕರಣಗಳು ಹೈಕೋರ್ಟಿನಲ್ಲಿ ಪೆಂಡಿಂಗ್ ಇವೆ. ನಮ್ಮ ರಾಜ್ಯದ ಹೈಕೋರ್ಟಿನಲ್ಲಿಯಾಗಲೀ ಅಥವಾ ಬೇರೆ ಯಾವುದೇ ಕೋರ್ಟಿನಲ್ಲಿಯಾಗಲೀ ಇವೊತ್ತು ಅತಿ ದೊಡ್ಡ ಕಕ್ಷಿದಾರ ಎಂದರೆ ಈ ಸರ್ಕಾರ. ಹೈಕೋರ್ಟಿನಲ್ಲಿ ಲ್ಯಾಂಡ್ ಅಕ್ವಿಜಿಷನ್ ಕೇಸಸ್ ಮತ್ತು ಭೂಸುಧಾರಣಾ ಮಂಡಲಿಯವರು ಕೊಟ್ಟ ತೀರ್ಪಿನ ವಿರುದ್ಧ ಇರುವಂತಹ ಕೇಸಸ್ ಏನಿವೆ, ಇವುಗಳ ವಿಚಾರದಲ್ಲಿ ಕಾನೂನು ಇಲಾಖೆಯವರು ಮತ್ತು ಅಡ್ವೊಕೇಟ್ ಜನರಲ್ ಕಛೇರಿಯವರು ಸಂಪೂರ್ಣ ವಾಗಿ ವಿಫಲವಾಗಿದ್ದಾರೆ,

ಈ ಮಾತನ್ನು ನಾನು ಏತಕ್ಕೆ ಹೇಳುತ್ತಿದ್ದೇನೆಂದರೆ ಸರ್ಕಾರದವರು ಮಾಡತಕ್ಕಂಥಾ ಅಭಿವೃದ್ಧಿ ಕಾರ್ಯಕ್ಕಾಗಿ ಈವೊತ್ತು ಜಮೀನ ಸಿಗದೆ ಒಂದು ದೊಡ್ಡ ಆತಂಕವಾಗಿದೆ. ಈವೊತ್ತಿನ ದಿವಸ ರಾಜ್ಯ ದಲ್ಲಿ ಅಣೆಕಟ್ಟು ಕಟ್ಟಬೇಕಾಗಿದೆ, ಅಚ್ಚುಕಟ್ಟು ಕೆಲಸ ಮಾಡಬೇಕಾಗಿದೆ, ರೋಡ್ ಮಾಡಬೇಕಾಗಿದೆ, ಜನತಾ ಮನೆಗಳನ್ನು ಕಟ್ಟಬೇಕಾಗಿದೆ, ಇದಕೆಲ್ಲಾ ಲ್ಯಾಂಡ್ ಬೇಕಾಗಿದೆ. ಈ ಲ್ಯಾಂಡ್‌ನ್ನು ಆಕ್ವಿಜೆಷನ್ ಮಾಡಬೇಕಾದರೆ ಭೂ ಮಾಲೀಕರು ನ್ಯಾಯಾಂಗಕ್ಕೆ ಹೋಗಿ ರಿಟ್ ಹಾಕುತ್ತಾರೆ, ಅಲ್ಲಿಂದ ತಡೆ ಆಜ್ಞೆ ಯನ್ನು ಪಡೆಯುತ್ತಾರೆ. ೪ ವರ್ಷ ೫ ವರ್ಷವಾದರೂ ಕೂಡ ಆ ತಡೆ ಆಜ್ಞೆಯನ್ನು ಇತ್ಯರ್ಥ ಮಾಡಲಿಕ್ಕೆ ನಿಮ್ಮ ಅಡ್ವೊಕೇಟ್ ಜನರಲ್‌ರವರು ಇನ್ನೂ ಪ್ರಯತ್ನ ಮಾಡಿಲ್ಲ ಈ ಅಭಿವೃದ್ಧಿ ಕಾರ್ಯಕ್ಕಾಗಿ ಮೈನರ್ ಇರಿಗೇಷನ್ ಡಿಪಾರ್ಟ್‌ಮೆಂಟ್‌ನವರು, ಮೇಜರ್ ಇರಿಗೇಷನ್ ಡಿಪಾರ್ಟ್‌ ಮೆಂಟಿನವರು, ಪಬ್ಲಿಕ್ ವರ್ಕ್ಸ್ ಡಿಪಾರ್ಟ್‌ಮೆಂಟಿನವರು, ಎಜುಕೇಷನ್ ಡಿಪಾರ್ಟ್‌ಮೆಂಟಿನವರು ಕಾಂಟ್ರಾಕ್ಟ್ ಕೊಡಲಿಕ್ಕೆ ಟೆಂಡರ್ ಕರೆಯುತ್ತಾರೆ, ಆದರೆ ಅವರಿಗೆ ಜಮೀನು ಇಲ್ಲದೇ ಇರುವುದರಿಂದ ಆ ಕೆಲಸ ನಿಂತು ಹೋಗಿದೆ. ಕಾಲುವೆ ಕೆಲಸ, ಛಾನಲ್ ವಗೈರೆ ಕೆಲಸಗಳು, ಜಮೀನು ಸಿಕ್ಕದೇ ಹೋಗಿರುವುದರಿಂದ ನಿಂತು ಹೋಗಿದೆ. ಈ ಅಣೆಕಟ್ಟೆಯನ್ನು ಕಟ್ಟುವುದಕ್ಕೆ ನೂರಾರು ಕೋಟಿ ರೂಪಾಯಿಗಳನ್ನು ಖರ್ಚು ಮಾಡುತ್ತೀರಿ, ಟೆಂಡರನ್ನೂ ಸಹ ಕರೆಯುತ್ತೀರಿ, ಆದರೆ ಅದಕ್ಕೆ ಜಮೀನು ಸಿಗದೇ ಇರುವುದರಿಂದ ಆ ಕೆಲಸ ಅಷ್ಟಕ್ಕೇನೇ ನಿಂತುಬಿಡುತ್ತದೆ, ಇದರಿಂದ ಸಾರ್ವಜನಿಕರಿಗೆ ಎಷ್ಟು ತೊಂದರೆಯಾಗಬಹುದು ನೋಡಿ, ಬೇರೆ ಬೇರೆ ಲೆಜಿಸ್ಲೇಟೀವ್ ಕಮಿಟಿಯವರೂ ಕೂಡ ಈ ಬಗ್ಗೆ ನಿಮ್ಮ ಅವಗಾಹನೆಗೆ ತಂದಿದ್ದಾರೆ. ನೀವೇನೋ ಇದರ ಬಗ್ಗೆ ಒಂದು ರಿಪೋರ್ಟ್ ಕೊಟ್ಟಿದ್ದೀರಿ. ಆದರೆ ಅದರಲ್ಲಿ ಇಂತಹ ಕೇಸಸ್ ಯಾವ್ಯಾವ ವರ್ಷದಲ್ಲಿ ಎಷ್ಟೆಷ್ಟು ಪೆಂಡಿಂಗ್ ಇವೆ, ಸರ್ಕಾರ ಅದಕ್ಕೆ ಏನ್ನು ಪ್ರಯತ್ನ ಮಾಡಿದೆ, ಹೈಕೋರ್ಟ್‌ನಲ್ಲಿ ಎಷ್ಟು ಕೇಸಸ್ ಇದೆ, ಅದರ ವಿವರಗಳನ್ನೆಲ್ಲಾ ಕೊಟ್ಟಿದ್ದರೆ ಚೆನ್ನಾಗಿತ್ತು. ಸಾರ್ವಜನಿಕರ ಅನುಕೂಲತೆಗಾಗಿ ರಾಜ್ಯದಲ್ಲಿ ಮಾಡತಕ್ಕಂಥಾ ಅಭಿವೃದ್ಧಿ ಕಾರ್ಯಗಳು ನಿಂತು ಹೋಗಿದೆಯೆಲ್ಲ ಆ ಬಗ್ಗೆ ಹೈಕೋರ್ಟ್‌ನಲ್ಲಿ ಇರತಕ್ಕಂಥಾ ಕೇಸ್‌ಗಳನ್ನು ತ್ವರಿತವಾಗಿ ಇತ್ಯರ್ಥ ಮಾಡಲು ತಾವೇನು ಕ್ರಮ ಕೈಗೊಂಡಿದ್ದೀರಿ ? ಹಾಗೆ ತ್ವರಿತವಾಗಿ ಇದನ್ನು ಇತ್ಯರ್ಥ ಮಾಡದೇ ಹೋದರೆ ಇದರ ಪರಿಣಾಮ ಏನಾಗುತ್ತದೆ ಅದನ್ನು ಯೋಚನೆ ಮಾಡಿದ್ದೀರಾ ? ಈ ವಿಚಾರದಲ್ಲಿ ಇನ್ನೂ ಒಂದು ಹೆಜ್ಜೆ ಮುಂದೆ ಇಟ್ಟು ಹೇಳುವುದಾದರೆ ನಾನು ವೃತ್ತಿಯಲ್ಲಿ ವಕೀಲ, ನನಗೆ ಗೊತ್ತು ಹೈಕೋರ್ಟ್‌ನಲ್ಲಿ ಆ ಭೂಮಾಲೀಕರು ಸ್ಟೇ ತೆಗೆದುಕೊಂಡರೆ, ಆ ಕೇಸ್ ಹೈಕೋರ್ಟ್ ನಲ್ಲಿ ಬಂದಾಗ ಸರ್ಕಾರೀ ವಕೀಲರು ಅದರ ಬಗ್ಗೆ ಸರಿಯಾಗಿ ಮುತುವರ್ಜಿ ವಹಿಸಿ ಕೆಲಸ ಮಾಡುವುದಿಲ್ಲ ಯಾವಾಗ ಆ ಕೇಸು ಹೈಕೋರ್ಟ್ ಮುಂದೆ ಬರುತ್ತದೋ ಆಗ ಅವರು ಹಾಜರಿರುವುದಿಲ್ಲ, ಹೀಗಾಗಿ ಆ ಕೇಸಸ್ ಮುಂದುಮುಂದಕ್ಕೆ ಹೋಗುತ್ತದೆ, ಅದರಲ್ಲಿ ನಿದಾನವಾಗುವುದಕ್ಕೆ ಇದೂ ಒಂದು ಕಾರಣ. ಲ್ಯಾಂಡ್ ಅಕ್ವಿಜಿಷನ್ ಕೇಸಸ್ ಮತ್ತು ಲ್ಯಾಂಡ್ ರೀಫಾರಂಸ್ ಕೇಸಸ್ ಏನು ಇದೆ, ಸರ್ಕಾರಕ್ಕೆ ಸಂಬಂಧಪಟ್ಟ ಹಾಗೆ ಇರುವ ಕೇಸಸ್ ಏನು ಇದೆ ಎಷ್ಟು ಕೇಸಸ್ ಇತ್ಯರ್ಥವಾಗಿದೆ ಅನ್ನುವುದನ್ನು ಹೇಳುತ್ತೀರಾ ? ಇದರಿಂದ ಶ್ರೀ ಬೇಗಾನೆ ರಾಮಯ್ಯನವರು ಜನತಾ ಮನೆಗಳನ್ನು ಕಟ್ಟುವುದು ನಿಂತು ಹೋಗಿದೆ. ಭೂಮಾಲೀಕರು ಹೈಕೋರ್ಟಿಗೆ ಹೋಗಿ ಸ್ಟೇ ತಂದಿರುವುದರಿಂದ ಅಲ್ಲಿ ಮನೆಗಳು ಕಟ್ಟುವ ಕೆಲಸ ನಿಂತುಹೋಗಿದೆ. ತಮಗೆ ಹೇಳಬೇಕೆಂದರೆ, ನನ್ನ ಕ್ಷೇತ್ರದಲ್ಲಿ ಕೆಲವು ಕಡೆಗಳಲ್ಲಿ ಇಂತಹ ಕೇಸಸ್‌ಗಳಲ್ಲಿ ಅವರು ಸ್ಟೇ ತಂದು ೬–೭ ವರ್ಷದಿಂದಲೂ ಅದು ಇತ್ಯರ್ಥವಾಗದೆ ಅಲ್ಲಿ ಜನತಾ ಮನೆಗಳನ್ನು ಕಟ್ಟುವ ಕೆಲಸ ನಿಂತುಹೋಗಿದೆ. ಜನತಾ ಮನೆಗಳನ್ನು ಕಟ್ಟುವುದಕ್ಕೇನೋ ತಾವು

ದುಡ್ಡು ಕೊಡುತ್ತೀರಿ, ಆದರೆ ಅದು ಕಟ್ಟುವುದಕ್ಕೆ ಜಾಗ ಬೇಕಲ್ಲಾ, ಆ ಭೂಮಿಗೆ ಆ ಭೂಮಾಲೀಕರು ಹೈಕೋರ್ಟಿಗೆ ಹೋಗಿ ಸ್ಟೇ ತಂದಿದ್ದಾರೆ. ಆದುದರಿಂದ ಇಂತಹ ಕೇಸುಗಳು ಎಷ್ಟು ಪೆಂಡಿಂಗ್ ಇವೆ ಅನ್ನುವುದರ ಬಗ್ಗೆ ನನಗೆ ಒಂದು ಲಿಸ್ಟ್ ಬೇಕು, ಅದನ್ನು ಕೊಡಿ. ಇದರ ಬಗ್ಗೆ ನನಗೆ ಒಂದು ಪಟ್ಟಿ ಕೊಟ್ಟರೆ ನೀವು ಸರಿಯಾದ ವರದಿ ಕೊಟ್ಟ ಹಾಗೆ, ಅದನ್ನು ಒದಗಿಸಿಕೊಡಿ.

ಈ ರಿಪೋರ್ಟ್‌ನಲ್ಲಿ ವಕೀಲರ ಸಂಖ್ಯೆ ಹೇಳಿದ್ದೀರಿ, ಎಷ್ಟು ಕೇಸಸ್ ಇವೆ ಅನ್ನುವುದನ್ನು ಹೇಳಿದ್ದೀರಿ, ಆದರೆ ಇದಕ್ಕಾಗಿ ಗೌರ್ನಮೆಂಟ್ ಪ್ಲೀಡರ್ಸ್‌ಗೆ ಎಷ್ಟು ದುಡ್ಡು ಕೊಟ್ಟಿದ್ದೀರಿ ಎನ್ನುವುದನ್ನು ಏತಕ್ಕೆ ಇದರಲ್ಲಿ ಕೊಟ್ಟಿಲ್ಲ. ಈ ಆನ್ಯೂಯಲ್ ರಿಪೋರ್ಟ್‌ನಲ್ಲಿ ವರ್ಕಿಂಗ್ ಎಷ್ಟು ಎಕ್ಸ್‌ಪೆಂಡಿಚರ್ ಎಷ್ಟು ಎನ್ನುವುದನ್ನು ನೋಡಿದರೆ ಒಬ್ಬೊಬ್ಬ ಗೌರ್ನಮೆಂಟ್ ಪ್ಲೀಡರ್‌ಗೆ ಒಂದೊಂದು ಕೇಸ್‌ನಲ್ಲಿ ೪೦–೫೦ ಸಾವಿರ ರೂಪಾಯಿಗಳು, ಒಂದು ಕೇಸನಲ್ಲಿ ಲಕ್ಷಗಟ್ಟಲೆ ಹಣ ಕೊಟ್ಟಿದ್ದೀರಿ. ಇನ್ನು ಕೆಲವರಿಗೆ ಡೈಲಿ ಬೇಸಿಸ್‌ಮೇಲೆ ಹಣ ಕೊಟ್ಟಿದ್ದೀರಿ. ಅವನು ಒಂದು ದಿವಸ ಕೋರ್ಟಿಗೆ ಆಪಿಯರ್ ಆದರೆ ಇಷ್ಟು ಅಂತ ಕೊಟ್ಟಿದ್ದೀರಿ, ಆದರೂ ಆ ಕೇಸಸ್ ಮುಕ್ತಾಯವಾಗುವುದಿಲ್ಲ ಬರೀ ಖರ್ಚು ಮಾಡುತ್ತೀರೇ ವಿನಾ ಅದರಿಂದ ಪ್ರಯೋಜನ ಏನೂ ಆಗುವುದಿಲ್ಲ. ಯಾವನಾದರೂ ಒಂದು ಕೇಸ್‌ನಲ್ಲಿ ಅಪಿಯರ್ ಆಗಿಬಿಟ್ಟರೆ, ಅದಕ್ಕೆ ಇಂತಿಷ್ಟು ಅಂತ ಖರ್ಚು ಮಾಡಿಬಿಟ್ಟರೆ ಅಲ್ಲಿಗ ಮುಗಿದು ಹೋಯಿತು ಅಂತ ತಿಳಿದುಕೊಳ್ಳಬಾರದು. ಅದರ ವಿವರಗಳನ್ನು ತರಿಸಿಕೊಂಡು ನೋಡಬೇಕು. ಯಾವ ಅಡ್ವೊಕೇಟ್ ಯಾವ ಲಾಯರ್ಸ್ ಎಷ್ಟೆಷ್ಟು ಕೇಸ್‌ಗಳಲ್ಲಿ ಅಟೆಂಡ್ ಮಾಡಿದ್ದಾರೆ, ಅವರಿಗೆ ಎಷ್ಟು ದುಡ್ಡು ಕೊಟ್ಟಿದ್ದೀರಿ ಎನ್ನುವುದನ್ನು ನೋಡಿ. ನಾನು ಅವರ ಹೆಸರು ಹೇಳುವುದಕ್ಕೆ ಹೋಗುವುದಿಲ್ಲ. ಒಂದು ಕೇಸಿನಲ್ಲಿ ಒಬ್ಬ ಸೀನಿಯರ್ ಅಡ್ವೊಕೇಟ್‌ಗೆ ಒಂದು ಲಕ್ಷ ರೂಪಾಯಿಗಳ ಮೇಲೆ ಕೊಟ್ಟಿದ್ದೀರಿ. ಹೀಗೆ ಅವರಿಗೆ ಇದಕ್ಕೆ ಒಂದು ಲಕ್ಷ ರೂಪಾಯಿಂಗಳ ಮೇಲೆ ಕೊಡತಕ್ಕಂಥಾ ಅವಶ್ಯಕತೆ ಇರಲಿಲ್ಲಾ. ಈ ರೀತಿಯಾವ ಹಣ ಖರ್ಚು ಮಾಡುತ್ತಿದ್ದಾರೆ.

ಇನ್ನು ತಾವು ಈ ಒಂದು ಮಾರ್ಕೆಟ್ ಸೆಸ್ ಅನ್ನು ಹಾಕಬೇಕು ಅಂತಮಾಡಿದಿರಿ, ಆದೇಕೋ ಅದು ಮುಂದೆ ಮುಂದಕ್ಕೆ ಹೋಗುತ್ತಾ ಇದೆ. ಸರ್ಕಾರಕ್ಕೆ ಆದಾಯ ಬರಬೇಕು. ಅದರಲ್ಲಿ ಏನೂ ಭಿನ್ನಾಭಿಪ್ರಾಯವಿಲ್ಲ. ಈ ವರ್ಷ ಶ್ರೀಮಾನ್ ವೀರಪ್ಪಮೊಯ್ಲಿ ಅವರು ಒಂದು ಟ್ಯಾಕ್ಸ್ ತೆಗೆದು ಕೊಂಡು ಬಂದರು ಹಾಗೆಯೇ ಶ್ರೀ ಸುಧೀಂದ್ರರಾವ್ ಕಸಬೆಯವರು ಒಂದು ಟ್ಯಾಕ್ಸ್ ಅನ್ನು ತೆಗೆದು ಕೊಂಡು ಬಂದರು ಈ ಟ್ಯಾಕ್ಸೇಷನ್ ಮೆಷರ್ಸ್ ವಿಚಾರದಲ್ಲಿ ಇದು ಈವೊತ್ತು ಹೈಕೋರ್ಟ್ ಮುಂದೆ ಇದೆ. ನೀವು ಏನು ಅರ್ಜೆನ್ಸಿ ಇಟ್ಟುಕೊಂಡು, ಇದರಿಂದ ಸರ್ಕಾರಕ್ಕೆ ಆದಾಯ ಬರುತ್ತದೆ ಎನ್ನುವ ಉದ್ದೇಶದಿಂಗ ಈ ಟ್ಯಾಕ್ಸ್ ಅನ್ನು ಏನು ತೆಗೆದುಕೊಂಡು ಬಂದರೋ ಅದರ ಬಗ್ಗೆ ಇನ್ನೂ ಇತ್ಯರ್ಥವಾಗಲಿಲ್ಲ. ತಾವು ಮನಸ್ಸು ಮಾಡಿದ್ದರೆ ಇದನ್ನು ತಿಂಗಳೊಳಗೇ ಇತ್ಯರ್ಥ ಮಾಡಬಹುದಾಗಿತ್ತು ೩ ವರ್ಷವಾದರೂ ಕೂಡ ಇನ್ನೂ ಇದು ಇತ್ಯರ್ಥವಾಗಿಲ್ಲ ಅದಕ್ಕೆ ಒಂದು ಕೌಂಟರ್ ಅಫಿಡವಿಟ್ ಹಾಕುವುದಕ್ಕೆ ಇಷ್ಟು ದಿವಸ ಬೇಕೆ ? ಇದರಲ್ಲಿ ನಿದಾನವಾದರೆ ಸರ್ಕಾರಕ್ಕೆ ಬರತಕ್ಕಂಥಾ ಆದಾಯ ಹೋಗಲಿಲ್ಲವೇ ? ಟ್ಯಾಕ್ಸೇಷನ್ ಮೆಷರ್ಸ್ ಬಗ್ಗೆ, ಲ್ಯಾಂಡ್ ಅಕ್ವಿಜಿಷನ್ ಮೆಷರ್ಸ್ ಬಗ್ಗೆ ಒಂದು ಕೌಂಟರ್ ಅಫಿಡವಿಟ್ ಹಾಕುವುದಕ್ಕೆ ಇಷ್ಟು ದಿವಸ ಬೇಕೇ ? ನಿದಾನ ಮಾಡಿದಷ್ಟೂ ಲಾಸ್ ಆಗುವುದಿಲ್ಲವೇ ? ಮತ್ತೆ ಇನ್ನೊಂದು ವಿಚಾರ ಏನೆಂದರೆ ಕೆಲವು ಕೇಸ್‌ಗಳಲ್ಲಿ ಅಡ್ವೊಕೇಟ್ ಅಪಿಯರ್ ಆಗಲು ಬೇರೆ ರಾಜ್ಯದಿಂದ ಕರೆಸಿದ್ದಾರೆ, ನಮ್ಮಲ್ಲಿ ಅಂಥಾ ಲಾಯರ್ ಇಲ್ಲವೇ ? ಅವರಿಗೆ ಒಂದು ದಿನಕ್ಕೆ ಎಷ್ಟು ಖರ್ಚಾಗುತ್ತದೆ ? ಅವರಿಗೆ ಹೋಗಿ ಬರುವುದಕ್ಕೆ ಪ್ಲೇನ್ ಛಾರ್ಜು ಮತ್ತು ಅಶೋಕ ಹೋಟೆಲ್‌ನಲ್ಲಿ ಇಳಿದುಕೊಳ್ಳಲು ಹಾಗೂ ಇಲ್ಲಿರುವ ವ್ಯವಸ್ಥೆಗೆ ಆಗತಕ್ಕಂಥಾ ಖರ್ಚು ನೋಡಿದರೆ ಹಣವನ್ನು ಲೂಟಿ ಹೊಡೆಯುತ್ತಾ ಇದ್ದೀರಿ, ಆದರೆ ಕೇಸ್ ಮಾತ್ರ ಯಾವುದೂ ಇತ್ಯರ್ಥವಾಗುತ್ತಾ ಇಲ್ಲ. ಅದರ ಬಗ್ಗೆ ಈ ರಿಪೋರ್ಟ್‌ನಲ್ಲಿ ಏನೂ ಇಲ್ಲ.

ಇನ್ನು ನ್ಯಾಯಾಂಗ ಇಲಾಖೆ ಬಗ್ಗೆ ಒಂದೆರಡು ಮಾತು ಹೇಳಬೇಕಾಗಿದೆ. ಈ ನ್ಯಾಯಾಂಗ ಇಲಾಖೆಯಲ್ಲಿ ಎಷ್ಟು ವೇಕೆನ್ಸಿ ಇದೆ ಎನ್ನುವುದರ ಬಗ್ಗೆ ಅದರ ಅಂಕಿಅಂಶವನ್ನು ಈ ರಿಪೋರ್ಟ್‌ನಲ್ಲಿ ಕೊಟ್ಟಿಲ್ಲ. ಪೇಜ್ ೧೮ ರಲ್ಲಿ ಆಲ್ ಪೋಸ್ಟ್ಸ್ ಅಂತ ಇದೆ. ಆ ವೇಕೆನ್ಸಿಗಳನ್ನು ಫಿಲ್‌ಅಪ್ ಮಾಡಲು ಏನು ಪ್ರಯತ್ನ ಮಾಡಿದ್ದೀರಿ ? ಆ ವೇಕೆನ್ಸಿಗಳನ್ನು ಫಿಲ್‌ಅಪ್ ಮಾಡಲಿಕ್ಕೆ ಅದನ್ನು ಪಿ.ಎಸ್.ಸಿ. ಅವರಿಂದಲಾದರೂ ಮಾಡಿಸಿ, ಇಲ್ಲವೇ ಒಂದು ಸ್ಪೆಷಲ್ ಕಮಿಟಿ ಮಾಡಿ ಅದರಿಂದಲಾದರೂ ಮಾಡಿಸಿ. ಇನ್ನು ಕೆಲವು ಕೋರ್ಟುಗಳಲ್ಲಿ ಎರಡು ವರ್ಷದಿಂದಲೂ ನ್ಯಾಯಾಧೀಶರು ಇಲ್ಲ. ತಮಗೆ

ಹೇಳಬೇಕಾದರೆ ಧಾರವಾಡದಲ್ಲಿ ೫ ಕೋರ್ಟಿನಲ್ಲಿ ನ್ಯಾಯಾಧೀಶರು ಇಲ್ಲವೇ ಇಲ್ಲ. ಈಗ ತಾವೇನೋ ತಾಲ್ಲೂಕಿಗೆ ಒಂದೊಂದು ಕೋರ್ಟು ತೆರೆಯುತ್ತಿದ್ದೀರಿ. ಅದನ್ನು ನಾನು ಸ್ವಾಗತ ಮಾಡುತ್ತೇನೆ. ಆಂದರೆ ಅಲ್ಲಿಗೆ ಒಬ್ಬೊಬ್ಬರು ಮುನ್ಸೀಫರನ್ನು ಕೊಡದೇ ಹೋದರೆ ಏನು ಪ್ರಯೋಜನವಾಯಿತು ? ಅದರಲ್ಲಿ ನಿಮಗೆ ಇರತಕ್ಕಂಥಾ ತೊಂದರೆ ಏನು ? ಹಾಗೆ ಕೊಟ್ಟಮೇಲೆ ಬೇಗನೆ ನೇಮಕಾತಿ ಮಾಡ ಬೇಕು ಎಂದು ಹೇಳುತ್ತೇನೆ.

ಮಾನ್ಯ ಮುಖ್ಯ ಮಂತ್ರಿಯವರು ಈಗ ಈ ಸಭೆಯಲ್ಲಿರುವುದರಿಂದ ಈ ಒಂದು ವಿಷಯದ ಬಗ್ಗೆ ಅವರ ಗಮನವನ್ನು ಸೆಳೆಯುವುದಕ್ಕೆ ಬಯಸುತ್ತೇನೆ. ಅದೇನೆಂದರೆ ಹುಬ್ಬಳ್ಳಿ-ಧಾರವಾಡದಲ್ಲಿ ಒಂದು ಹೈಕೋರ್ಟ್ ಬೆಂಚ್ ಮಾಡುತ್ತೇವೆ ಎಂದು ಮಾನ್ಯ ಮಂತ್ರಿಗಳು ಆಶ್ವಾಸನೆ ಕೊಟ್ಟಿದ್ದರು. ಅಲ್ಲಿ ಎರಡು ವರ್ಷದ ಹಿಂದೆ ಒಂದು ವಕೀಲರ ಕಾನ್‌ಫರೆನ್ಸ್ ನಡೆದಾಗ ತಾವು ಮಂತ್ರಿಗಳಾದ ಕೂಡಲೇ ಅಲ್ಲಿಗೆ ಬಂದಾಗ ಈ ರೀತಿ ಒಂದು ಆಶ್ವಾಸನೆ ಕೊಟ್ಟಿದ್ದೀರಿ, ಇದುವರೆಗೂ ಅದು ಆಗಲಿಲ್ಲ. ಮಾನ್ಯ ಮುಖ್ಯ ಮಂತ್ರಿಗಳಾದ ಶ್ರೀ ಗುಂಡೂರಾಯರೂ ಸಹ ಈ ಸಭೆಯಲ್ಲಿ ಹೇಳಿದರು, ಇನ್ನು ೬ ತಿಂಗಳಲ್ಲಿ ನ್ಯಾಯಾಂಗದ ಒಂದು ಬ್ರಾಂಚ್ ಅನ್ನು ಅಲ್ಲಿ ಓಪನ್ ಮಾಡುತ್ತೇವೆ ಅನ್ನುವ ಭರವಸೆ ಕೊಟ್ಟು. ಅದರ ಬಗ್ಗೆ ನಿರ್ಣಯ ತೆಗೆದುಕೊಳ್ಳುತ್ತೇವೆಂದು ಹೇಳಿದರೂ ಕೂಡ ಎರಡು ವರ್ಷವಾದರೂ ಸಹ ಇನ್ನೂ ಆಗಿಲ್ಲ. ಹೋಗಲಿ ಆ ಬೆಂಚ್ ಆಗದೇ ಹೋದರೆ ಅಲ್ಲಿ ಒಂದು ಸರ್ಕ್ಯೂಟ್ ಕೋರ್ಟ್ ಒಂದನ್ನಾದರೂ ಮಾಡುವ ಒಂದು ವ್ಯವಸ್ಥೆ ಮಾಡಿ ಎಂದು ಕೇಳಿದ್ದರು. ಆ ರೀತಿ ಒಂದು ಸರ್ಕ್ಯೂಟ್ ಕೋರ್ಟನ್ನಾದರೂ ಮಾಡಿದರೆ ಆ ಭಾಗದ ಜನರಿಗೆ ಅನುಕೂಲವಾಗುತ್ತದೆ. ನನಗೆ ಈಗ ತಿಳಿದು ಬಂದಿರುವ ವರ್ತಮಾನದ ಪ್ರಕಾರ ಇದರ ಬಗ್ಗೆ ಕೇಂದ್ರ ಸರ್ಕಾರದವರಿಗೆ ಬರೆದಿದ್ದಾರೆ ಎಂದು ಕೇಳಿದೆ. ಆ ಕೆಲಸ ಎಲ್ಲಿಯುವರೆಗೆ ಬಂದು ನಿಂತಿದೆ ಎಂಬುದನ್ನು ತಿಳಿಸಬೇಕು. ಅಲ್ಲಿ ಈ ಸರ್ಕ್ಯೂಟ್ ಕೋರ್ಟ್ ಒಂದನ್ನು ಮಾಡಬೇಕಾದರೆ ಅದಕ್ಕೆ ಬೇಕಾಗುವ ಜಾಗವನ್ನು ಕೊಡುವುದಕ್ಕೆ ಅಲ್ಲಿ ಕಾರ್ಪೋರೇಷನ್ನಿನವರು ಮುಂದೆ ಬಂದಿದ್ದಾರೆ. ಅದಕ್ಕಾಗಿ ಕಾರ್ಪೋರೇಷನ್ನಿನವರು ಒಂದು ಬಿಲ್ಡಿಂಗ್‌ನ್ನು ಕೊಡುತ್ತೇವೆಂದು ಈ ಹೇಳಿದ್ದಾರೆ.ಮಾತನ್ನು ಮಾನ್ಯ ಮಂತ್ರಿಗಳಿಗೆ ಹೇಳಿದಾಗ ಇನ್ನಾರು ತಿಂಗಳಲ್ಲಿ ಅಲ್ಲಿ ಸರ್ಕ್ಯೂಟ್ ಕೋರ್ಟ್ ಆಗುವ ಹಾಗೆ ಪ್ರಯತ್ನ ಮಾಡುತ್ತೇನೆ, ನೀವೇನೂ ಚಿಂತೆ ಮಾಡಬೇಡಿ, ಅದರ ಓಪನಿಂಗ್ ಸೆರ್ಮನಿಗೆ ಬರುತ್ತೇನೆಂದು ಸ್ಪಷ್ಟವಾಗಿ ಹೇಳಿದ್ದಾರೆ. ನಿಮಗೆ ಒಂದು ಉದಾಹರಣೆ ಹೇಳುವುದಾದರೆ, ಹಿಂದೆ ಮಹಾರಾಷ್ಟ್ರ ಮುಖ್ಯಮಂತ್ರಿಗಳಾಗಿದ್ದಾಗ ಶ್ರೀ ಅಂತುಳೆಯವರು ಔರಂಗಾಬಾದ್‌ಗೆ ಬಂದಾಗ ಅಲ್ಲಿಯ ಇಲ್ಲಿಗೆ ಒಂದು ಸರ್ಕ್ಯೂಟ್ ಕೋರ್ಟ್ ಕೊಡಬೇಕು ಎಂದು ಕೇಳಿಕೊಂಡಾಗ ಅವರು ಮುಂಬೈಗೆ ಹೋಗಿ ಈ ಬಗ್ಗೆ ಜನಗಳುತಕ್ಷಣ ಒಂದು ಆಜ್ಞೆಯನ್ನು ಹೊರಡಿಸಿದರು. ಅನಂತರ ಅದು ಸುಪ್ರೀಂಕೋರ್ಟ್‌ಗೂ ಹೋಯಿತು. ಅಲ್ಲಿ ಸರ್ಕಾರ ಮಾಡಿದ್ದು ಸರಿ ಎಂದು ಹೇಳಿದರು. ಹಾಗೆ ತಾವೂ ಕೂಡ ಈ ಕೆಲಸ ಮಾಡಬೇಕು, ಈ ಬಗ್ಗೆ ರಾಜ್ಯ ಹೈಕೋರ್ಟಿನ ಮುಖ್ಯ ನ್ಯಾಯಾಧೀಶರೊಂದಿಗೆ ಚರ್ಚೆ ಮಾಡಿ ಈ ಅಧಿವೇಶನ ಮುಗಿಯುವುದರೊಳಗಾದರೂ ಅಲ್ಲಿ ಒಂದು ಸರ್ಕ್ಯೂಟ್ ಕೋರ್ಟ್ ಒಂದನ್ನಾದರೂ ಕೊಡುವುದಕ್ಕೆ ಮನಸ್ಸು ಮಾಡಿ ಅದನ್ನು ಕಾರ್ಯಗತ ಮಾಡಿದರೆ ತಾವು ಈ ಹಿಂದೆ ಈ ವಿಚಾರದಲ್ಲಿ ಕೊಟ್ಟಂಥಾ ಆಶ್ವಾಸನೆ ಸ್ವಲ್ಪಮಟ್ಟಿಗಾದರೂ ಕೂಡ ಈಡೇರಿದಂತಾಗುತ್ತದೆ, ಅದನ್ನು ಮಾಡಬೇಕು ಎಂದು ನಾನು ಒತ್ತಾಯ ಮಾಡುತ್ತೇನೆ.

ಇನ್ನು ಟ್ರಾನ್ಸ್‌ಲೇಷನ್ ಬಗ್ಗೆ ಹೇಳುವುದಾದರೆ, ನಾವು ಕನ್ನಡದ ಬಗ್ಗೆ ಈ ಸದನದಲ್ಲಿ ಚರ್ಚೆ ಮಾಡಿದ್ದೇವೆ. ಶಿಕ್ಷಣ ಇಲಾಖೆಯಲ್ಲಿ ಯಾವರೀತಿ ಕನ್ನಡವನ್ನು ಜಾರಿಗೆ ತರುವುದಕ್ಕೆ ಪ್ರಥಮ ಸ್ಥಾನ ವನ್ನು ಕೊಟ್ಟದ್ದೇವೋ ಅದೇರೀತಿ ಆಡಳಿತದಲ್ಲೂ ಕೂಡ ಜಾರಿಗೆ ಕೊಡಲಿಕ್ಕೆ ಅದು ಇನ್ನೂ ಆಗಲಿಲ್ಲ,

೧೨–೩೦ ಎ.ಎಂ.

ನಿಮ್ಮ ಟ್ರಾನ್ಸ್‌ಲೇಷನ್ ಡಿಪಾರ್ಟ್‌ಮೆಂಟ್ ಬಗ್ಗೆ ಪೇಜ್ ೨೫ರಲ್ಲಿ ಹೇಳಿದ್ದೀರಿ. ಸ್ವಾಮಿ, ಕೆಲವು ಆರ್ಡಿನೆನ್ಸ್ ಮತ್ತು ಬಿಲ್ಸ್‌ನ್ನು ಟ್ರಾನ್ಸ್‌ಲೇಟ್ ಮಾಡಿದರೆ ಸಾಧ್ಯವೇ. ? ಪ್ರಾಮುಖ್ಯವಾದ ಕಾನೂನನ್ನು ಜನರಿಗೆ ಅವಶ್ಯಕವಾಗಿರತಕ್ಕ ಕಾನೂನನ್ನು ಎಲ್ಲವನ್ನೂ ಕನ್ನಡದಲ್ಲಿ ಮಾಡಬೇಕು. ಇದು ಬಹಳ ಆವಶ್ಯಕ. ಇನ್ನೂ ಹೆಚ್ಚು ಜನ ಕನ್ನಡ ಬಲ್ಲವರನ್ನು ಬೇಕಾದರೆ ತೆಗೆದುಕೊಳ್ಳಿ, ಇಲ್ಲಿ ನಾನು ಉದಾಹರಣೆಯೊಂದನ್ನು ಕೊಡುವುದಾದರೆ ಹಿಂದಿನ ಹೈದರಾಬಾದ್ ಸರ್ಕಾರದಲ್ಲಿ ಐದು ವರ್ಷದಲ್ಲಿ ಅವರು ಎಲ್ಲಾ ಕಾನೂನುಗಳನ್ನು ಉರ್ದುನಲ್ಲಿ ಮಾಡಿದರು. ಎಲ್ಲಾ ಕಾಲೇಜುಗಳಲ್ಲಿ ಉರ್ದು,

ಮೀಡಿಯಂ ಇನ್‌ಸ್ಟ್ರಕ್ಷನ್ಸ್ ಉರ್ದು, ಕೋರ್ಟ್ ಜಡ್ಜಮೆಂಟ್‌ಗಳು ಉರ್ದುನಲ್ಲಿ, ಎಲ್ಲಾ ನ್ಯಾಯಾಂಗದ ವ್ಯವಹಾರಗಳೂ ಉರ್ದುವಿನಲ್ಲಿ ನಡೆಯುವಂತೆ ವ್ಯವಸ್ಥೆಯಾಯಿತು. ಇಲ್ಲಿ ಕನ್ನಡದಲ್ಲಿ ಮಾಡುವುದಕ್ಕೆ ನಿಮಗಾಗಿರುವ ತೊಂದರೆಯಾದರೂ ಏನು ? ಕರ್ನಾಟಕ ರಾಜ್ಯವಾಗಿ ೨೫ ವರ್ಷ ಗಳಾದರೂ ತಾವು ಎಲ್ಲಿಯೋ ೧೦–೨೦ ಕಾನೂನುಗಳನ್ನು ಕನ್ನಡದಲ್ಲಿ ಮಾಡಿದ್ದೀರಿ, ಇದರಲ್ಲಿ ನಿಮಗೆ ಏನು ತೊಂದರೆಯಿದೆಯೆಂದು ನನಗರ್ಥವಾಗುವುದಿಲ್ಲ. ಇದಕ್ಕೆ ಬೇಕಾದರೆ ತಾವು ಒಂದು ಸ್ಪೆಷಲ್ ಡಿಪಾರ್ಟ್‌ಮೆಂಟನ್ನು ಮಾಡಿ; ಹೆಚ್ಚು ಸಿಬ್ಬಂದಿಯನ್ನು ತೆಗೆದುಕೊಳ್ಳಿ. ಬೇಕಾದಷ್ಟು ಜನ ಕನ್ನಡ ಪಂಡಿತರು ಸಿಕ್ಕುತ್ತಾರೆ ಸಾಮಾನ್ಯ ಜನರಿಗೆ ಕನ್ನಡದಲ್ಲಿ ಕಾನೂನು ಅರ್ಥವಾಗುವ ರೀತಿಯಲ್ಲಿ ವ್ಯವಸ್ಥೆ ಮಾಡಿ. ಇದರ ಜೊತೆಯಲ್ಲಿ ನಾನು ಹಿಂದೆ ಒಂದು ಸಲಹೆ ಮಾಡಿದ್ದೆನು. ಜಿಲ್ಲಾ ಮಟ್ಟ ದಲ್ಲಿ ತಾಲ್ಲೂಕು ಮಟ್ಟದಲ್ಲಿ ನ್ಯಾಯಾಧೀಶರು ಕನ್ನಡದಲ್ಲಿ ತೀರ್ಪನ್ನು ಕೊಡುತ್ತಿದ್ದಾರೆ; ಇಲ್ಲಿಯೂ ಕೂಡ ತಾವು ಸೂಕ್ತ ಕ್ರಮ ತೆಗೆದುಕೊಂಡು ಕನ್ನಡದಲ್ಲಿಯೇ ಎಲ್ಲಾ ವ್ಯವಹಾರಗಳು ನಡೆಯುವಂತೆ ವ್ಯವಸ್ಥೆ ಮಾಡಬೇಕು ನ್ಯಾಯಾಧೀಶರಿಗೆ ಮತ್ತು ನ್ಯಾಯಾಂಗಕ್ಕೆ ತಾವು ಕೊಡತಕ್ಕ ಹಣ ಬಹಳ ಕಡಿಮೆ. ಕೋರ್ಟುಗಳಿಗೆ ಸರಿಯಾದ ಕಟ್ಟಡಗಳು ಇಲ್ಲ; ನ್ಯಾಯಾಧೀಶರಿಗೆ ಉಳಿದುಕೊಳ್ಳುವುದಕ್ಕೆ ಮನೆಗಳ ವ್ಯವಸ್ಥೆ ಇಲ್ಲ, ಎಲ್ಲಾ ಡಿಪಾರ್ಟ್‌ಮೆಂಟಿನವರಿಗೆ ಮನೆಗಳನ್ನು ಸರ್ಕಾರದವರು ಕಟ್ಟಿ ಕೊಡುತ್ತಿ ದ್ದಾರೆ, ಸಂತೋಷ; ಆದರೆ ನ್ಯಾಯಾಧೀಶರಿಗೆ ಇರತಕ್ಕ ತೊಂದರೆಯನ್ನೂ ತಾವು ಯೋಚನೆ ಮಾಡ ಬೇಕು. ಅವರು ಒಂದು ಕಡೆಯಿಂದ ಇನ್ನೊಂದು ಕಡೆಗೆ ವರ್ಗವಾದ ಕೂಡಲೇ ಅವರು ಮನೆಯನ್ನು ಹುಡುಕಾಡಬೇಕು. ಅವರು ಒಂದು ರೀತಿಯಲ್ಲಿ ವಿಶೇಷ ಜೀವನವನ್ನು ನಡೆಸಬೇಕು. ಅವರು ಸುತ್ತಮುತ್ತ ಯಾರೂ ಇರಬಾರದು, ಅವರು ಬೇರೆಯವರ ಜೊತೆಯಲ್ಲಿ ಅಷ್ಟು ಬೆರೆಯಬಾರದು; ಇವೆಲ್ಲಾ ತೊಂದರೆಗಳು ಅವರಿಗೆ ಇರುತ್ತವೆ. ಇಂಥ ಸಂದರ್ಭದಲ್ಲಿ ನ್ಯಾಯಾಧೀಶರು ಎಷ್ಟೋ ಜನ ಹೋಟೆಲುಗಳಲ್ಲಿ ಉಳಿಯತಕ್ಕ ಪರಿಸ್ಥಿತಿ ಇದೆ. ಜುಡಿಷಿಯಲ್ ಕ್ವಾಟರ್ಸ್‌ಗೆ ಹೆಚ್ಚಿನ ಬೇಡಿಕೆ ಇದೆ. ನಮ್ಮ ಹುಬ್ಬಳ್ಳಿಯಲ್ಲಿ ಈ ವರ್ಷ ಜುಡಿಷಿಯಲ್ ಕ್ವಾರ್ಟರ್ಸ್ ಪ್ರಾರಂಭವಾಗಿದೆ. ೧೯೭೮ನೇ ಇಸವಿ ಯಲ್ಲಿ ಈ ಕೆಲಸ ಬಡ್ಜೆಟ್ಟಿನಲ್ಲಿ ಸೇರಿಸಲಾಗಿದ್ದು ೧೯೭೯ ರಲ್ಲಿ ಆ ಕೆಲಸ ಪ್ರಾರಂಭವಾಗಿದೆ. ತಾವು ನ್ಯಾಯಾಂಗಕ್ಕೆ ಎಷ್ಟು ಹಣವನ್ನು ಕೊಡಬೇಕೋ ಅಷ್ಟು ಹಣವನ್ನು ಕೊಡುತ್ತಿಲ್ಲ. ಇದರ ಜೊತೆಗೆ, ನ್ಯಾಯಾಧೀಶರೂ ಕೂಡ ಕೇಸುಗಳನ್ನು ತ್ವರಿತವಾಗಿ ನಿರ್ಣಯಿಸತಕ್ಕ ವ್ಯವಸ್ಥೆಯನ್ನು ತಾವು ಏರ್ಪಾಡು ಮಾಡಬೇಕು. ಇದನ್ನು ತಾವು ಹೈಕೋರ್ಟಿನವರೊಂದಿಗೆ ಸಮಾಲೋಚನೆ ಮಾಡಿ ತ್ವರಿತ ಗತಿಯಲ್ಲಿ ಕೇಸುಗಳು ನಿರ್ಣಯವಾಗತಕ್ಕ ರೀತಿಯಲ್ಲಿ ವ್ಯವಸ್ಥೆ ಮಾಡಬೇಕು; ಅವಶ್ಯಕತೆ ಬಿದ್ದರೆ ಈ ವಿಷಯದಲ್ಲಿ ಕಾನೂನನ್ನು ಬದಲಾವಣೆ ಮಾಡಬೇಕು. ಈ ಸಂದರ್ಭದಲ್ಲಿ ರೆಂಟ್ ಕಂಟ್ರೋಲ್ ಕೇಸ್ ಬಗ್ಗೆ ನಾನು ನಾನು ಇಲ್ಲಿ ಒಂದು ಉದಾಹರಣೆಯನ್ನು ಕೊಡಬಹುದು. ಲ್ಯಾಂಡ್ ಲಾರ್ಡ್ ಮನೆ ಬೇಕು ಎಂದು ಹೇಳಿ ಅರ್ಜಿ ಹಾಕಿ ೧೬–೧೮ ವರ್ಷಗಳಾದರೂ ಕೇಸ್ ಇತ್ಯರ್ಥವಾಗುವುದಿಲ್ಲ. ಅವರ ಮೊಮ್ಮಗನ ಕಾಲಕ್ಕೆ ಮನೆ ಸಿಕ್ಕುತ್ತದೆಯೋ ಇಲ್ಲವೋ ಗೊತ್ತಿಲ್ಲ

ಶ್ರೀ ವೈ. ರಾಮಕೃಷ್ಣ.—Now it has changed. It has come down.

ಶ್ರೀ ಎಸ್. ಆರ್. ಬೊಮ್ಮಾಯಿ.—ಶ್ರೀಮತಿ ಪ್ರಮೀಳ ಅವರ ಅಧ್ಯಕ್ಷತೆಯಲ್ಲಿ ಈ ವಿಚಾರದ ಒಂದು ಕಮಿಟಿಯನ್ನು ಮಾಡಿದ್ದಾರೆ; ಅದು ಇನ್ನೂ ಕಾನೂನು ಆಗಿಲ್ಲ. ಪ್ರೊಟೆಕ್ಷನ್ ಆಫ್ ಕಾಂಜುಗಲ್ ರೈಟ್ಸ್ ಬಗ್ಗೆ ಹೇಳುವುದಾದರೆ, ಅಜ್ಜನ ಕಾಲದಲ್ಲಿ ಹಾಕಿದಂಥ ಕೇಸು ಮೊಮ್ಮಗನ ಕಾಲ ದಲ್ಲಿ ಡಿಸೈಡ್ ಆದಂಥಾದ್ದು ಇದೆ. ಈ ತರಹ ಆಗುತ್ತಿದೆ. ಇದು ನನ್ನ ಸ್ವಂತ ಅನುಭವ. ಇವೆಲ್ಲಾ ತೀವ್ರಗತಿಯಲ್ಲಿ ನಡೆಯತಕ್ಕ ವ್ಯವಸ್ಥೆಯನ್ನು ತಾವು ಮಾಡಬೇಕು. ಲ್ಯಾಂಡ್ ಟ್ರಿಬ್ಯುನಲ್‌ನಲ್ಲಿ ಮಾಡಿದಂಥ ನಿರ್ಣಯಗಳ ಮೇಲೆ ಸುಮಾರು ೪೦ ಸಾವಿರ ರಿಟ್‌ಗಳು ಹೈಕೋರ್ಟಿಗೆ ಬಂದಿವೆ. ಪದೇ ಪದೇ ತಾವು ಆಶ್ವಾಸನೆ ಕೊಟ್ಟಿದ್ದೀರಿ; ಇದರ ಬಗ್ಗೆ ಒಂದು ನಿರ್ಣಯ ತೆಗೆದುಕೊಳ್ಳುತ್ತೀರಿ. ತಾವು ಲ್ಯಾಂಡ್ ರಿಫಾರಮ್ಸ್ ವಿಷಯದಲ್ಲಿ ರಿವೈಸಲ್ ಪವರ್ಸ್ ತರುತ್ತೀರಿ ಎನ್ನತಕ್ಕ ಮಾತನ್ನು ಅನೇಕ ಸಲ ಈ ಸಭೆಯಲ್ಲಿ ತಾವು ಹೇಳಿದ್ದೀರಿ, ನಾನೂ ಇಂಥ ಸಲಹೆಯನ್ನು ಹೋದ ಸಲ ಮಾಡಿದ್ದೇನೆ ಇಂಥ ಒಂದು ಅಧಿಕಾರವನ್ನು ತಾವು ಕೊಟ್ಟರೆ ಇವೆಲ್ಲಾ ಕೇಸುಗಳು ಜಾಗ್ರತೆಯಾಗಿ ಮುಗಿದುಹೋಗುತ್ತವೆ.

SRI Y. RAMAKRISHNA.—So long as articles 226 and 227 are there, nothing prevents the parties to take the matter before the High Court.

ಶ್ರೀ ಎಸ್. ಆರ್. ಬೊಮ್ಮಾಯಿ.—ಫ್ಯಾಕ್ಟ್‌ಗಳ ಮೇಲೆ ರಿಟ್ ಹಾಕಿದರೆ ಅಡ್ಮಿಟ್ ಆಗುವ ಸಂಭವವೂ ಇರುತ್ತದೆ. ನಾನ್ ಆಫಿಷಿಯಲ್ ಮೆಂಬರ್ಸ್ ಇರುತ್ತಾರೆ, ಇವರಿಗೆ ಕಾನೂನು ಸರಿಯಾದ ರೀತಿಯಲ್ಲಿ ಅರ್ಥವಾಗುವುದಿಲ್ಲ, ಟೆಕ್ನಿಕಲ್ ಗ್ರೌಂಡ್ಸ್ ಮೇಲೆ ಕೇಸ್‌ಗಳು ಅಡ್ಮಿಟ್ ಆಗಿವೆ. ಇದರಲ್ಲಿ ಚೇರ್ಮನ್ ಅವರು ಜಡ್ಜ್‌ಮೆಂಟನ್ನು ರಿಕಾರ್ಡು ಮಾಡಬೇಕಾಗುತ್ತದೆ, ರಿಕಾರ್ಡು ಮಾಡಿಲ್ಲವೆನ್ನುವ ಕಾರಣಕ್ಕಾಗಿ ಎಷ್ಟೋ ರಿಟ್‌ಗಳು ಕೋರ್ಟಿನಲ್ಲಿ ಅಡ್ಮಿಟ್ ಆಗಿವೆ. ಆದ್ದರಿಂದ ರಿವೈಸಲ್ ಪವರ್ಸ್‌ನ್ನು ಫೈನಲ್ ಅಥಾರಿಟಿಗೆ ಕೊಟ್ಟರೆ ಒಳ್ಳೆಯದು. ಟ್ರಿಬ್ಯೂನಲ್ ಮಾಡಿದ ಕಾನೂನನ್ನು ಪ್ರಶ್ನೆ ಮಾಡತಕ್ಕ ಅಧಿಕಾರ ಹೈಕೋರ್ಟಿಗೆ ಇರಬಹುದು. ಈ ಫ್ಯಾಕ್ಟ್ಸ್‌ನಿಂದ ಅನೇಕ ಕಡೆಗಳಲ್ಲಿ ಅನ್ಯಾಯವಾಗಿದೆ. ಇದರ ಬಗ್ಗೆ ತಾವು ಆಲೋಚನೆ ಮಾಡಿ, ಬೇಗ ಒಂದು ನಿರ್ಣಯಕ್ಕೆ ಬಂದರೆ ಪೆಂಡಿಂಗ್ ಇರುವ ಕೇಸುಗಳನ್ನು ಜಾಗ್ರತೆ ಡಿಸ್ಪೋಸ್ ಮಾಡಲಿಕ್ಕೆ ಅನುಕೂಲವಾಗುತ್ತದೆ.

ಕೊನೆಯದಾಗಿ, ನಾನು ಈ ಡೈರಿಯ ಬಗ್ಗೆ ಅನೇಕ ಸಲ ಇಲ್ಲಿ ಹೇಳಿದ್ದೇನೆ. ವರ್ಲ್ಡ್ ಬ್ಯಾಂಕ್ ಏಡ್‌ನಲ್ಲಿ ನಮ್ಮಲ್ಲಿ ಸ್ಕೀಂಗಳನ್ನು ತೆಗೆದುಕೊಳ್ಳುತ್ತೇವೆಂದು ಹೇಳಿದ್ದರು; ಆದರೆ ಯಾವ ಸ್ಕೀಂ ಕೂಡ ನಮ್ಮಲ್ಲಿಗೆ ಬಂದಿಲ್ಲ. ಏನೇನೋ ಮಾಡುತ್ತೇವೆಂದು ಹೇಳಿದ್ದರು; ಆದರೆ ಏನೂ ಆಗಿಲ್ಲ. ರಾಜ್ಯದಲ್ಲಿ ಶ್ರೀ ಕರಿಯನ್ ಅವರು ಆನಂದ ಡೈರಿಯನ್ನು ಬೆಳೆಸಿಕೊಂಡು ಬಂದರು. ಸ್ವತಂತ್ರ ಭಾರತದಲ್ಲಿ ಒಬ್ಬ ಎಕ್ಸ್‌ಪರ್ಟ್ ಅವರು ಒಂದು ನಿರ್ಣಯವನ್ನು ಬರೆದಿದ್ದಾರೆ. ನಿಮ್ಮ ರಿಕಾರ್ಡ್‌ನಲ್ಲಿ ಅದು ಇರಬಹುದು. ಧಾರವಾಡ ಜಿಲ್ಲೆಯಲ್ಲಿ ಹಾಲು ಉತ್ಪಾದನಾ ಪೊಟೆನ್‌ಷಿಯಲ್ ಹೆಚ್ಚು ಇದೆ, ಅಲ್ಲಿ ಒಳ್ಳೆಯ ಎಮ್ಮೆಯ ಹಾಲು ದೊರೆಯುತ್ತದೆ ಎನ್ನುವ ಮಾತನ್ನು ಅವರು ಹೇಳಿದ್ದಾರೆ. ಅಲ್ಲಿ ಮತ್ತೊಂದು 'ಆನಂದ' ಡೈರಿಯನ್ನು ಮಾಡಬಹುದು, ಇದು ಎರಡನೆಯದಾಗಬಹುದು ಎನ್ನು ಮಾತನ್ನು ಹೇಳಿದ್ದಾರೆ. ಧಾರವಾಡ ಬೆಳಗಾಂ ಜಿಲ್ಲೆಗಳಲ್ಲಿ ಸಿಕ್ಕತಕ್ಕ ಹಾಲು, ಒಳ್ಳೆಯ ಗುಣಮಟ್ಟದ್ದು ಎಂದು ಅವರು ತಮ್ಮ ಲೆಕ್ಕಾಚಾರವನ್ನು ಬರೆದು ಹೇಳಿದ್ದಾರೆ, ಇದರ ಬಗ್ಗೆ ತಾವೇನು ಮಾಡುತ್ತೀರಿ ?

ಶ್ರೀ ಹೆಚ್. ಶಿವಪ್ಪ.—ಮಾನ್ಯ ಬೊಮ್ಮಾಯಿಯವರು ಡಿಸ್ಟ್ರಿಕ್ಟ್ ಜಡ್ಜ್ ಡೆಪ್ಯೂಟಿ ಕಮಿಷನರ್ ಬೆಂಚ್‌ನಲ್ಲಿ ಕೆಲಸ ಮಾಡವುದಕ್ಕೆ ಬರುತ್ತದೆ ಎಂದು ಹೇಳಿದರು, ಇದು ಹೇಗೆ ಎಂದು ಹೇಳುತ್ತೀರಾ ?

ಶ್ರೀ ಎಸ್. ಆರ್. ಬೊಮ್ಮಾಯಿ.—ಡಿಸ್ಟ್ರಿಕ್ಟ್ ಜಡ್ಜ್ ಅವರ ಕೆಲಸವನ್ನು ಮಾಡಲಿಕ್ಕೆ ಬರುತ್ತದೆ, ಮಹಾರಾಷ್ಟ್ರದಲ್ಲಿ ಈ ತರಹ ಇದೆ. ದಯವಿಟ್ಟು ಹೈಕೋರ್ಟು ಬೆಂಚ್ ಧಾರವಾಡದಲ್ಲಿ ಮಾಡುವ ಬಗ್ಗೆ ಒಂದು ನಿರ್ಧಿಷ್ಟವಾದ ನಿರ್ಣಯವನ್ನು ತೆಗೆದುಕೊಳ್ಳಬೇಕು ಎಂದು ಹೇಳಿ, ಮಾನ್ಯ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಎ ಲಕ್ಷ್ಮೀಸಾಗರ್.—ಮಾನ್ಯ ಸಭಾಧ್ಯಕ್ಷರೇ. ಶ್ರೀಮಾನ್ ಬಂಗಾರಪ್ಪನವರು ಶ್ರೀಮಾನ್ ಬಸವಣ್ಣಪ್ಪನವರು, ಶ್ರೀಮಾನ್ ಮಹಾಜನ್ ಶೆಟ್ಟಿಯವರು, ಶ್ರೀಮಾನ್ ರಾಮಪ್ಪನವರು ಆಳುವ ಪಕ್ಷದಿಂದ ಹೊರಬಂದು ವಿರೋಧ ಪಕ್ಷದ ಜೊತೆಯಿರುತ್ತೇವೆನ್ನುವ ಮಾತನ್ನು ಈ ಸಭೆಯಲ್ಲಿ ಆಗಲೇ ತಿಳಿಸಿದ್ದಾರೆ. ಈ ಮಾನ್ಯ ಸದಸ್ಯರುಗಳನ್ನು ನಾನು ತುಂಬು ಹೃದಯದಿಂದ ಸ್ವಾಗತ ಮಾಡುತ್ತೇನೆ ಅವರು ಯು. ಡಿ. ಎಫ್. ನೊಂದಿಗೆ ಸಹಕರಿಸಿ ಸಹಾಯ ಮಾಡುತ್ತೇವೆ ಮತ್ತು ಬೆಂಬಲ ಕೊಡುತ್ತೇವೆನ್ನುವ ಮಾತನ್ನು ಹೇಳಿದ್ದಾರೆ. ಶ್ರೀಮಾನ್ ಬಸವಣ್ಣಪ್ಪನವರು ಮತ್ತು ಅವರ ಸ್ನೇಹಿತರು ವಿರೋಧಪಕ್ಷಕ್ಕೆ ಮಹದುಪಕಾರ ಮಾಡಿದ್ದಾರೆ; ಅವರು ತೋರಿಸಿದ ದಾರಿಯನ್ನು ಬೇರೆಯವರು ಅನುಸರಿಸಲಿ ಎಂದು ಈ ಸಮಯದಲ್ಲಿ ನಾನು ಹೇಳುವುದಕ್ಕೆ ಇಷ್ಟಪಡುತ್ತೇನೆ,

ಉಪಾಧ್ಯಕ್ಷರು.—ಸಭೆಯು ೧೨-೪೦ಕ್ಕೆ ಮುಂಕ್ತಾಯವಾಗಿ ಮತ್ತೆ ಎರಡೂವರೆ ಗಂಟೆಗೆ ಸೇರಲು ನಿಶ್ಚಯಿಸಿ ಈಗ ಸಭೆ ಎದ್ದು ಮಧ್ಯಾಹ್ನ ಎರಡೂವರೆ ಗಂಟೆಗೆ ಪುನಃ ಸೇರುತ್ತದೆ.

The House reassembled at 2-36 p,m,)

MR. SPEAKER SRI K. H. RANGANATH in the Chair